ಸಂಪುಟ: 04 ಸಂಚಿಕೆ: 263 ಪುಟಗಳು: 08 ಶುಕ್ರವಾರ 06 ಡಿಸೆಂಬರ್ 2024
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833
₹5

ಮುಂಜಾನೆ ಮಾತು

ಒಂದು ಸಾಮಾನ್ಯ ಕೆಲಸವನ್ನು ಅತ್ಯುತ್ತಮವಾಗಿ ಮಾಡುವುದರಿಂದ ಶ್ರೇಷ್ಠ ಪ್ರತಿಫಲ ದೊರಕುತ್ತದೆ.

ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

'ಕಾಂಗ್ರೇಸ್' ಶಕ್ತಿ ಪ್ರದರ್ಶನ ; ಬೃಹತ್ ಜನಕಲ್ಯಾಣ ಸಮಾವೇಶಕ್ಕೆ ಸಿಎಂ ಚಾಲನೆ.!

• ಉದಯವಾಹಿನಿ, ಹಾಸನ

ಜೆಡಿಎಸ್ ಭದ್ರಕೋಟೆ ಹಾಸನದಲ್ಲಿ ಕಾಂಗ್ರೇಸ್ ತನ್ನ ಶಕ್ತಿ ಪ್ರದರ್ಶಿಸುತ್ತಿದೆ. ಹಾಸನದಲ್ಲಿ ಇಂದು ಆಯೋಜಿಸಲಾದ ಜನಕಲ್ಯಾಣ ಸಮಾವೇಶಕ್ಕೆ ಸಿಎಂ ಸಿದ್ದರಾಮಯ್ಯ ಚಾಲನೆ ನೀಡಿದರು. ಸಮಾವೇಶದಲ್ಲಿ ಡಿಸಿಎಂ ಡಿಕೆ ಶಿವಕುಮಾರ್ ಸೇರಿದಂತೆ ಸರ್ಕಾರದ ಹಲವು ಸಚಿವರು, ಶಾಸಕರು ಹಾಜರಿದ್ದಾರೆ. ಸಮಾವೇಶದ ಹಿನ್ನೆಲೆ ನಗರದ ಎಲ್ಲಾ ಕಡೆ ಫ್ಲೆಕ್ಸ್ ಗಳು ರಾರಾಜಿಸುತ್ತಿದೆ. ಸಿಎಂ ಅಭಿಮಾನಿಗಳು ಸಿದ್ದರಾಮಯ್ಯರ ಫೋಟೋ ಹಿಡಿದು ಕುಣಿದು ಕುಪ್ಪಳಿಸುತ್ತಿದ್ದಾರೆ. ಹಾಸನದಲ್ಲಿ ಇಂದು ಕಾಂಗ್ರೇಸ್ ಪಕ್ಷ ಮತ್ತು ಸ್ವಾಭಿಮಾನಿಗಳ ಒಕ್ಕೂಟದ ಜಂಟಿ ಸಹಯೋಗದಲ್ಲಿ ಜನಕಲ್ಯಾಣ ಸಮಾವೇಶವನ್ನು ಆಯೋಜಿಸಲಾಗಿದ್ದು ನಮ್ಮ ಸರ್ಕಾ ರದ ಜನಪರ ಕೆಲಸಗಳನ್ನು ಮೆಚ್ಚಿ ನಿರಂತರವಾಗಿ ಆಶೀರ್ವದಿಸುತ್ತಿರುವ ಕರುನಾಡ ಜನತೆಗೆ ಕೃತಜ್ಞತೆ ಅರ್ಪಿಸಲು ಇದೊಂದು ಅಪೂರ್ವ ಘಳಿಗೆ ಎಂದು ಭಾವಿಸುತ್ತೇನೆ. ನಾಡಿನ ಪ್ರತಿಯೊಬ್ಬ ವ್ಯಕ್ತಿಯನ್ನು ಸ್ವಾವಲಂಬಿ ಮತ್ತು ಸ್ವಾಭಿಮಾನಿಯಾಗಿಸುವುದು ಕಾಂಗ್ರೇಸ್ ಪಕ್ಷದ ಉದ್ದೇಶ. ನುಡಿದಂತೆ ನಡೆದು, ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಕ್ಕೆ ತಂದಿದ್ದು ಕೂಡಾ ಅದೇ ಕಾರಣಕ್ಕೆ. ಇದು ಕೇವಲ ಸಮಾವೇಶವಲ್ಲ, ಕಾಂಗ್ರೇಸ್ ಪಕ್ಷದ ಆಶಯಗಳ ಸಂಭ್ರಮ. ಬನ್ನಿ, ಈ ಸಂಭ್ರಮದಲ್ಲಿ ಎಲ್ಲರೂ ಪಾಲ್ಗೊಳ್ಳೋಣ ಎಂದು ಸಿಎಂ ಮನವಿ ಮಾಡಿದ್ದಾರೆ.

ಯಾವುದೇ ಕಾರಣಕ್ಕೂ ತಲೆ ಕೆಡಿಸಿಕೊಳ್ಳಬೇಡಿ ಈ ಬಂಡೆ ಯಾವಾಗಲೂ ಸಿಎಂ ಸಿದ್ದರಾಮಯ್ಯ ಅವರ ಜೊತೆಲೆ ಇರುತ್ತದೆ. ಕಾಂಗ್ರೇಸ್ ಶಕ್ತಿ ಈ ದೇಶದ ಶಕ್ತಿ, ಕಾಂಗ್ರೇಸ್ ಇತಿಹಾಸ ದೇಶದ ಇತಿಹಾಸ. ನೊಂದ ತಾಯಂದಿರಿಗೆ ಆಶ್ರಯ ಕೊಡಲು ಶ್ರೇಯಸ್ ಅವರನ್ನು ಆಯ್ಕೆ ಮಾಡಿದ್ದೀರಿ. 2028ಕ್ಕೆ ಮತ್ತೆ ನಾವೇ ಅಧಿಕಾರಕ್ಕೆ ಬರುವುದು ನಿಶ್ಚಿತ. ಕಮಲ ಕೆರೆಯಲ್ಲಿ ಇದ್ದರೆ ಚೆಂದ, ತೆನೆ ಹೊಲದಲ್ಲಿ ಇದ್ದರೆ ಚೆಂದ. ದಾನ ಧರ್ಮ ಮಾಡುವ ಕೈ ಅಧಿಕಾರದಲ್ಲಿ ಇದ್ದರೆ ಚೆಂದ. ರಾಮನಗರ ಜಿಲ್ಲೆಯಲ್ಲಿ 4 ಕ್ಷೇತ್ರಗಳ ಪೈಕಿ ನಾಲ್ಕರಲ್ಲೂ ನಾವು ಗೆದ್ದಿದ್ದೇವೆ. ಚಾಮರಾಜನಗರ, ಮೈಸೂರು, ಮಂಡ್ಯ, ಕೊಡಗು, ಚಿಕ್ಕಮಂಗಳೂರಲ್ಲಿ ಗೆದ್ದಿದ್ದೇವೆ ಮುಂದೆ ಹಾಸನ ಜಿಲ್ಲೆಯಲ್ಲೂ ನಾವೇ ಗೆಲ್ಲುತ್ತೇವೆ. ಹಾಗಾಗಿ ಅದಕ್ಕೆ ನಿಮ್ಮ ಬೆಂಬಲ ಬೇಕು

– ಡಿಕೆ ಶಿವಕುಮಾರ್, ಡಿಸಿಎಂ

ಷಂಡತನದಿಂದ ನಮ್ಮ ನಾಯಕರು, ರಾಜ್ಯ ಕಾಂಗ್ರೇಸ್ ಸರ್ಕಾರಕ್ಕೆ ಕಪ್ಪು ಮಸಿ ಬಳಿಯುವ ತಂತ್ರಗಾರಿಕೆ ನಡೆಯುತ್ತಿದ್ದು, ಅದು ಫಲ ನೀಡದು. ಷಂಡತನದಿಂದ ಕುತಂತ್ರ ಮಾಡುವ ಮೂಲಕ ನಮ್ಮ ನಾಯಕರ ವಿರುದ್ಧ ಇಲ್ಲ ಸಲ್ಲದ ಆರೋಪಗಳನ್ನು ಮಾಡಲಾಗುತ್ತಿದೆ. ಇ.ಡಿ ಸಂಸ್ಥೆಯನ್ನು ಉಪಯೋಗಿಸಿ ಕಪ್ಪು ಮಸಿ ಬಳಿಯು ತಂತ್ರ ನಡೆಯುತ್ತಿದೆ. ಇದು ಕೆಟ್ಟ ಪ್ರವೃತ್ತಿ. ಡಿಸಿಎಂ ಡಿಕೆ ಶಿವಕುಮಾರ್ ಅವರ ರಾಜ್ಯ ನಾಯಕತ್ವವನ್ನು ಯಾರೂ ಏನು ಮಾಡಲಾಗದು. ಈ ರಾಜ್ಯದ ಜನ ಬೆಂಬಲ ಕಾಂಗ್ರೇಸ್, ನಮ್ಮ ನಾಯಕರ ಮೇಲಿದೆ. ಜನಪರ ಕಾರ್ಯಕ್ರಮಗಳನ್ನು ನಾವು ರೂಪಿಸಿದ್ದೇವೆ.

–ಶಿವಲಿಂಗೇಗೌಡ, ಶಾಸಕರು

ಸಮಾವೇಶ: ಸಾರಿಗೆ ಬಸ್‌ಗಳಿಲ್ಲದೆ ಪ್ರಯಾಣಿಕರ ಪರದಾಟ

ಹಾಸನದಲ್ಲಿ ನಡೆಯುತ್ತಿರುವ ಜನಕಲ್ಯಾಣ ಸಮಾವೇಶಕ್ಕೆ ಒಪ್ಪಂದದ ಮೇರೆಗೆ ರಾಜ್ಯ ಸಾರಿಗೆ ಬಸ್‌ಗಳನ್ನು ನೀಡಿರುವುದರಿಂದ ಚಾಮರಾಜನಗರದಲ್ಲಿ ಬಸ್‌ಗಳ ಕೊರತೆ ಉಂಟಾಗಿ ಪ್ರಯಾಣಿಕರು ಪರದಾಡುವಂತ ಪರಿಸ್ಥಿತಿ ನಿರ್ಮಾಣವಾಗಿದೆ. ನಗರದ ಡಿವಿಯೇಷನ್ ರಸ್ತೆಯಲ್ಲಿರುವ ಕೆಎಸ್‌ಆರ್‌ಟಿಸಿ ಉಪ ವಿಭಾಗದಿಂದ ಹಾಸನದಲ್ಲಿ ನಡೆಯುತ್ತಿರುವ ಕಾಂಗ್ರೇಸ್ ಜನಕಲ್ಯಾಣ ಸಮಾವೇಶಕ್ಕೆ 200ಕ್ಕಿಂತಲೂ ಅಧಿಕ ಬಸ್‌ಗಳು ತೆರಳಿವೆ. ಪರಿಣಾಮವಾಗಿ ನಗರದ ಬಸ್ ನಿಲ್ದಾಣದಲ್ಲಿ ಮೈಸೂರು, ಕೊಳ್ಳೇಗಾಲ, ಗುಂಡ್ಲುಪೇಟೆ ಮತ್ತು ಇನ್ನಿತರೆ ಕಡೆಗಳಿಗೆ ತೆರಳುವ ಪ್ರಯಾಣಿಕರು ಸೂಕ್ತ ಸಮಯಕ್ಕೆ ಬಸ್ ಇಲ್ಲದೆ ಪರದಾಡುವಂತಾಗಿದೆ. ಬಸ್‌ಗಳಿಲ್ಲದೆ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣವು ಬಿಕೋ ಎನ್ನುತ್ತಿದ್ದು, ಬೆಳಗಿನ ಸಮಯದಲ್ಲಿ ಸರ್ಕಾರಿ ಕೆಲಸ, ಶಾಲಾ-ಕಾಲೇಜು ಮತ್ತು ಇನ್ನಿತರೆ ಕಡೆಗಳಿಗೆ ತೆರಳಬೇಕಿದ್ದ ಪ್ರಯಾಣಿಕರು ಸಮಸ್ಯೆ ಅನುಭವಿಸುವಂತಾಗಿದೆ. ಬೆರಳೆಣಿಕೆಯ ಬಸ್‌ಗಳು ಬಂದಿದ್ದೇ ತಡ ಸೀಟ್ ಹಿಡಿಯಲು ಪ್ರಯಾಣಿಕರಲ್ಲಿ ನೂಕುನುಗ್ಗಲು ಉಂಟಾಗಿದೆ.

ಎಲ್ಲರನ್ನೂ ಒಟ್ಟಾಗಿ ಕರೆದೊಯ್ಯುವ ಅಪೇಕ್ಷೆ ನಮ್ಮದು: ಬಿಎಸ್‌ವೈ

• ಉದಯವಾಹಿನಿ, ಶಿವಮೊಗ್ಗ

'ಎಲ್ಲರನ್ನೂ ಒಟ್ಟಾಗಿ ಕರೆದುಕೊಂಡು ಹೋಗಬೇಕು ಎಂಬುದು ನನ್ನ ಹಾಗೂ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಅಪೇಕ್ಷೆ ಅದಕ್ಕೆ ಎಲ್ಲರೂ ಸಹಕರಿಸುತ್ತಾರೆ ಅಂದುಕೊಂಡಿದ್ದೇನೆ' ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಹೇಳಿದರು. 'ಬಸನಗೌಡ ಪಾಟೀಲ ಯತ್ನಾಳ ನಮ್ಮವರೆ. ಅವರೇನು ಹೊರಗಡೆಯವರಲ್ಲ. ಅವರು ಯಾವುದೋ ಕಾರಣಕ್ಕೆ ಆಕ್ರೋಶಗೊಂಡಿರಬಹುದು ಏನೇ ತಪ್ಪು ಆಗಿದ್ದರೂ ಮುಖಾಮುಖಿ ಕುಳಿತು ಮಾತನಾಡಿ ಬಗೆಹರಿಸಿಕೊಳ್ಳಬೇಕು ಎಲ್ಲವನ್ನೂ ಸರಿಪಡಿಸುವ ಕೆಲಸ ಮಾಡುತ್ತೇವೆ' ಎಂದು ಇಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು. 'ಮೈಸೂರಿನ ಮುಡಾದಲ್ಲಿ ಸಾವಿರಾರುನಿವೇ ಶನಗಳನ್ನು ಕಾನೂನು ಬಾಹಿರವಾಗಿ ಹಂಚಿಕೆ ಮಾಡಲಾಗಿದೆ ಜಾರಿ ನಿರ್ದೇಶನಾಲಯದವರು (ಇ.ಡಿ) ಪುರಾವೆ ಇಲ್ಲದೇ ಮಾತನಾಡುವುದಿಲ್ಲ. ಈ ಬಗ್ಗೆ ಮಾಧ್ಯಮಗಳಲ್ಲೂ ವರದಿಯಾಗುತ್ತಿದೆ. ಒಮ್ಮೆ ತಪ್ಪು ಮಾಡಿದರೆ ಅದು ತಪ್ಪೇ. ನಿವೇಶನ ಮರಳಿಸುವುದು ಬಿಡುವುದು ಬೇರೆ ವಿಷಯ' ಎಂದು ಮಾರ್ಮಿಕವಾಗಿ ನುಡಿದರು.

ರಾಜಕೀಯದಲ್ಲಿ ಇರುವವರೆಗೂ ಡಿಕೆಶಿ ಸಿಎಂ ಆಗಲು ಬಿಡುವುದಿಲ್ಲ

• ಉದಯವಾಹಿನಿ, ದಾವಣಗೆರೆ

ಸಿದ್ದರಾಮಯ್ಯ ರಾಜಕೀಯದಲ್ಲಿ ಇರುವವರೆಗೂ ಡಿ.ಕೆ. ಶಿವಕುಮಾರ್ ಅವರನ್ನು ಮುಖ್ಯಮಂತ್ರಿ ಆಗಲು ಬಿಡುವುದಿಲ್ಲ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ತಿಳಿಸಿದರು. ಡಿ.ಕೆ. ಶಿವಕುಮಾರ್ ಅವರು ಒಪ್ಪಂದ ಆಗಿತ್ತು ಎಂದು ಹೇಳಿದ್ದಾರೆ. ಸಿದ್ದರಾಮಯ್ಯ ಆಗಿಲ್ಲ ಎನ್ನುತ್ತಿದ್ದಾರೆ. ಅದು ಅವರ ಪಕ್ಷದ ಆಂತರಿಕ ವಿಚಾರ. ಬಿಜೆಪಿಗೆ ಸಂಬಂಧವಿಲ್ಲದ ವಿಚಾರ. ಒಂದಂತೂ ನಿಜ ಸಿದ್ದರಾಮಯ್ಯ ರಾಜಕೀಯದಲ್ಲಿ ಇರುವವರೆಗೂ ಡಿ.ಕೆ. ಶಿವಕುಮಾರ್ ಅವರನ್ನು ಮುಖ್ಯಮಂತ್ರಿ ಆಗಲು ಬಿಡುವುದೇ ಇಲ್ಲ ಎಂದರು. ಈಗ ಸಿದ್ದರಾಮಯ್ಯ ಅವರು ಸುಳ್ಳು ಹೇಳುವುದರಲ್ಲಿ ರಾಜ್ಯದಲ್ಲೇ ನಂಬರ್ ಒನ್ ಆಗಿದ್ದಾರೆ. 2014 ರಲ್ಲಿ ಇದೇ ನನ್ನ ಕೊನೆಯ ಚುನಾವಣೆ ಎಂದರು. 2018 ರಲ್ಲೂ ಇದೇ ನನ್ನ ಕೊನೆಯ ಚುನಾವಣೆ ಎಂದರು. ಈಗ 2024ಕ್ಕೆ ಬಂದಿದ್ದಾರೆ. ಅವರದ್ದು ರಾತ್ರಿ ಮಾತಿನಂತೆ. ರಾತ್ರಿ ಮಾತುಗಳಿಗೆಖಾತ್ರಿ... ಇರುವುದಿಲ್ಲ ಎನ್ನುವಂತೆ ಸಿದ್ದರಾಮಯ್ಯ ಮಾತನಾಡುತ್ತಾರೆ ಎಂದು ವ್ಯಂಗ್ಯವಾಡಿದರು.

ಸಿದ್ದರಾಮಯ್ಯ ನವರಿಗೆ ರೈತರ ಶಾಪ ತಟ್ಟಲಿದೆ: ವಿಜಯೇಂದ್ರ

• ಉದಯವಾಹಿನಿ, ಯಾದಗಿರಿ

ರಾಜ್ಯ ಕಾಂಗ್ರೇಸ್ ದುಷ್ಟ ಸರಕಾರ ಹಾಗೂ ಮುಖ್ಯಮಂತ್ರಿಗಳಿಂದ ರಾಜ್ಯದ ಮಠ, ಮಂದಿರ ಹಾಗೂ ಸಾರ್ವಜನಿಕರ ಆಸ್ತಿಗಳನ್ನು ವಕ್ಫ್ ಮುಖೇನ ಕಸಿದುಕೊಳ್ಳುವ ಹುನ್ನಾರ ನಡೆಯುತ್ತಿದ್ದು, ಅದರ ವಿರುದ್ಧ ರಾಜ್ಯ ಬಿಜೆಪಿ ಹೋರಾಟ ನಿರಂತರವಾಗಿರುತ್ತದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಹೇಳಿದರು. 4 ಟಾಪ್ 40 ಸುದ್ದಿ ಗುರುವಾರ ಶಹಾಪುರ ನಗರದ ಸಿಬಿ ಕಮಾನ್ ನಿಂದ ಬಸವೇಶ್ವರ ವೃತ್ತದವರೆಗೆ ವಕ್ಫದ ವಿರುದ್ಧ ಪ್ರತಿಭಟನೆ ನಡೆಸಿ, ನಮ್ಮ ಭೂಮಿ ನಮ್ಮ ಹಕ್ಕು ವಿಶೇಷ ಅಭಿಯಾನದ ಕುರಿತು ಮಾತನಾಡಿದರು. ರಾಜ್ಯದಲ್ಲಿರುವ ಸರ್ಕಾರದಿಂದ ರೈತರು ಕಣ್ಣೀರಾಕುವ ಸ್ಥಿತಿ ಬಂದಿದೆ. ಅನ್ನದಾತರ ಪರವಾಗಿ ಬಿಜೆಪಿ ಪಕ್ಷ ಸದಾ ಬೆನ್ನಿಗೆ ಇರುತ್ತದೆ. ಆದಕಾರಣ ಇಂದು ನಮ್ಮ ಭೂಮಿ-ನಮ್ಮ ಹಕ್ಕು ಹೋರಾಟ ನಡೆಸುತ್ತಿದ್ದೇವೆ ಎಂದರು.

ಫಡ್ನವೀಸ್‌ಗೆ ಮಹಾ ಪಟ್ಟಾಭಿಷೇಕ



■ 'ಏಕ್ ಹೈ, ಸೇಫ್ ಹೈ' ಪುನರುಚ್ಚರಿಸಿದ ಫಡ್ನವಿಸ್ ■ ಮಹಾ ಸಿಎಂ ಆಗಿ ಫಡ್ನವೀಸ್ ಪ್ರಮಾಣ ■ ಮೋದಿ ಭಾಗಿ, ದೇವೇಂದ್ರಗೆ ಅಭಿನಂದಿಸಿದ ಶಿಂಧೆ ■ ಫಡ್ನವೀಸ್ ನಾಯಕತ್ವದಲ್ಲಿ ಬಿಜೆಪಿ ಅಮೋಘ ಸಾಧನೆ

• ಉದಯವಾಹಿನಿ, ಮುಂಬೈ

ಮಹಾರಾಷ್ಟ್ರ ಮುಖ್ಯಮಂತ್ರಿಯಾಗಿ ಬಿಜೆಪಿ ನಾಯಕ ದೇವೇಂದ್ರ ಫಡ್ನವೀಸ್ ಗುರುವಾರ ಮೂರನೇ ಬಾರಿಗೆ ಪ್ರಮಾಣವಚನ ಸ್ವೀಕರಿಸಿದ್ದಾರೆ. ಕರ್ನಾಟಕದ ಯಡಿಯೂರಪ್ಪರಂತೆ ಫಡ್ನವೀಸ್ ಕೂಡ ಮೂರು ದಿನಗಳಿಗೂ ಮುಖ್ಯಮಂತ್ರಿಯಾಗಿದ್ದವರು ಎಂಬ ಹೆಸರಿಗೂ ಭಾಜನರಾಗಿದ್ದಾರೆ. ಈಗ ಬಿಜೆಪಿ-ಶಿವಸೇನೆ(ಶಿಂದೆ ಬಣ)-ಎನ್‌ಸಿಪಿ(ಅಜಿತ್ ಬಣ)ದ ಮಹಾಯುತಿ ಮೈತ್ರಿ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿ ಅಧಿಕಾರಕ್ಕೇರಿದ್ದಾರೆ. ಫಡ್ನವೀಸ್ 2014ರ ಅಕ್ಟೋಬರ್ 31ರಿಂದ 2019ರ ನವೆಂಬರ್‌ವರೆಗೆ ಬಿಜೆಪಿ-ಶಿವಸೇನೆ ಮೈತ್ರಿಯಲ್ಲಿ ಮಹಾರಾಷ್ಟ್ರ ಮುಖ್ಯಮಂತ್ರಿಯಾಗಿದ್ದರು.

2019ರ ಚುನಾವಣೆಯಲ್ಲಿ ಉದ್ಧವ್ ಠಾಕ್ರೆಗೆ ಮುಖ್ಯಮಂತ್ರಿ ಹುದ್ದೆಯ ಭರವಸೆ ನೀಡಿದ್ದ ಬಿಜೆಪಿ ಮತ್ತೆ ಫಡ್ನವೀಸ್‌ರನ್ನೇ ಮುಖ್ಯಮಂತ್ರಿ ಸ್ಥಾನಕ್ಕೇರಿಸಿತು. ಬಂಡಾಯ ಎದ್ದ ಠಾಕ್ರೆ ಮೈತ್ರಿ ತೊರೆದರು. 2019ರ ನವೆಂಬರ್ 23ರಿಂದ ನವೆಂಬರ್ 26ರವರೆಗೆ ಮೂರು ದಿನಗಳ ಮುಖ್ಯಮಂತ್ರಿಯಾಗಿದ್ದ ಫಡ್ನವೀಸ್ ರಾಜೀನಾಮೆ ನೀಡಿದರು. ಆ ಬಳಿಕ, 2022ರಲ್ಲಿ ರಚನೆಯಾದ ಅನೈತಿಕ ಮೈತ್ರಿ ಸರ್ಕಾರದಲ್ಲಿ ಫಡ್ನವೀಸಮಹಾರಾಷ್ಟ್ರದ 9ನೇ ಉಪಮುಖ್ಯಮಂತ್ರಿಯಾಗಿದ್ದರು. 2019ರಲ್ಲಿ ಮೂರು ದಿನಗಳ ಮುಖ್ಯಮಂತ್ರಿಯಾಗಿ ರಾಜೀನಾಮೆ ನೀಡಿದ್ದ ಫಡ್ನವೀಸ್, 'ಮೇರಾ ಪಾನಿ ಉತರ್ತೆ ದೇಖ್ ಕಿನಾರೆ ಪರ್ ಫರ್ ಮತ್ ಬನಾ ಲೆನಾ, ಮೈನ್ ಸಮಂದರ್ ಹೂನ್, ಲೌಟ್ ಕರ್ ವಾಪಿಸ್ ಆವುಂಗಾ (ಅಲೆಗಳ ಏರಿತವು ಕಡಿಮೆಯಾಗುತ್ತಿದೆ ಎಂದು ಭಾವಿಸಿ, ಕರಾವಳಿಯಲ್ಲಿ ನಿಮ್ಮ ಮನೆ ಕಟ್ಟಲು ಧೈರ್ಯ ಮಾಡಬೇಡಿ; ಏಕೆಂದರೆ ನಾನು ಸಮುದ್ರ, ನಾನು ಮತ್ತೆ ಹಿಂದಿರುಗುತ್ತೇನೆ' ಎಂದು ಠಾಕ್ರೆಯ ವಿರುದ್ಧ ಫಡ್ನವೀಸ್ ಆಕ್ರೋಶ ವ್ಯಕ್ತಪಡಿಸಿದ್ದರು. ಶಿವಸೇನೆ-ಎನ್‌ಸಿಪಿ-ಕಾಂಗ್ರೇಸ್ ಮೈತ್ರಿಯ ಮಹಾ ವಿಕಾಸ್ ಅಘಾಡಿ' ಸರ್ಕಾರವನ್ನು 2022ರಲ್ಲಿ ಬಿಜೆಪಿ ಉರುಳಿಸಿತು. ಶಿವಸೇನೆ ಮತ್ತು ಎನ್‌ಸಿಪಿಯನ್ನು ತಲಾ ಎರಡು ಭಾಗಗಳಾಗಿ ಒಡೆದುಹಾಕಿತು. ಅನೈತಿಕವಾಗಿ ಸರ್ಕಾರ ರಚಿಸಿತು. ಏಕನಾಥ್ ಶಿಂದೆ ಅವರನ್ನು ಮುಖ್ಯಮಂತ್ರಿಯನ್ನಾಗಿ ಬಿಜೆಪಿ ಪ್ರತಿಷ್ಠಾಪಿಸಿತು.

2024ರ ಚುನಾವಣೆಯಲ್ಲಿ ಮಹಾಯುತಿ ಮೈತ್ರಿ ಪಕ್ಷಗಳ ಕೃಪಾಕಟಾಕ್ಷದಿಂದ ಬಿಜೆಪಿ ಮತ್ತೆ ಸರ್ಕಾರ ರಚನೆ ಮಾಡುತ್ತಿದೆ. ಬಿಜೆಪಿ ಅಧಿಕಾರ ಅನುಭವಿಸುವಲ್ಲಿ ಫಡ್ನವೀಸ್ ಪಾತ್ರ ಪ್ರಮುಖವಾದದ್ದು 2024ರ ಲೋಕಸಭಾ ಚುನಾವಣೆಯಲ್ಲಿ ಫಡ್ನವೀಸ್ ನೇತೃತ್ವದಲ್ಲಿಯೇ ಚುನಾವಣೆ ಎದುರಿಸಿದ ಬಿಜೆಪಿ ಮಣ್ಣು ಮುಕ್ಕಿತ್ತು.

1 ಮಹಾರಾಷ್ಟ್ರ ನೂತನ ಮುಖ್ಯಮಂತ್ರಿಯಾಗಿ ಫಡ್ನವಿಸ್ ಪ್ರಮಾಣ ವಚನ ಸ್ವೀಕಾರ

2 ಜೆ.ಪಿ. ನಡ್ಡಾ, ಶಾ, ಉದ್ಯಮಿ ಅಂಬಾನಿ, ಸಚಿನ್ ತೆಂಡೂಲ್ಕರ್, ಶಾರುಖ್ ಖಾನ್, ಸಲ್ಮಾನ್ ಖಾನ್ ಸೇರಿ ಪ್ರಮಾಣ ವಚನ ಸಮಾರಂಭದಲ್ಲಿ ಭಾಗಿ

3 ಮಹಾರಾಷ್ಟ್ರ ಮುಖ್ಯಮಂತ್ರಿ ಯಾರಾಗಲಿದ್ದಾರೆ ಎಂಬ ಕುತೂಹಲಕ್ಕೆ ಕೊನೆಗೂ ತೆರೆ

ಪ್ರಧಾನಿ ನರೇಂದ್ರ ಮೋದಿ-ಅಮಿತ್ ಶಾ ಭಾಗಿ

ಫಡ್ನವಿಸ್ ಅವರ ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ಮೋದಿ, ಕೇಂದ್ರ ಸಚಿವರಾದ ಅಮಿತ್ ಶಾ, ನಿತಿನ್ ಗಡ್ಕರಿ, ಪಿಯೂಷ್ ಗೋಯಲ್, ರಾಜನಾಥ್ ಸಿಂಗ್, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ ನಡ್ಡಾ ಬಿಜೆಪಿ ರಾಜ್ಯಗಳ ಆಡಳಿತವಿರುವ ಮುಖ್ಯಮಂತ್ರಿಗಳು ಭಾಗವಹಿಸಿದ್ದರು. ಜೊತೆಗೆ, ಸಚಿನ್ ತೆಂಡೂಲ್ಕರ್, ಶಾರುಖ್ ಖಾನ್, ಸಲ್ಮಾನ್ ಖಾನ್, ರಣವೀರ್ ಸಿಂಗ್ ಸೇರಿದಂತೆ ಅನೇಕ ಗಣ್ಯಾತಿಗಣ್ಯರು ಇದ್ದರು. ನ. 20 ರಂದು ನಡೆದ ಮಹಾರಾಷ್ಟ್ರ ವಿಧಾನಸಭೆಯ ಚುನಾವಣೆಯಲ್ಲಿ 288 ಸ್ಥಾನಗಳ ಪೈಕಿ 132 ಸ್ಥಾನಗಳನ್ನು ಬಿಜೆಪಿ ಪಡೆದುಕೊಂಡಿತ್ತು. ಮಿತ್ರ ಪಕ್ಷಗಳಾದ ಏಕ್‌ನಾಥ್ ಶಿಂಧೆ ನೇತೃತ್ವದ ಶಿವಸೇನೆ ಹಾಗೂ ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿ ಉಳಿದ ಸ್ಥಾನಗಳನ್ನು ಪಡೆದುಕೊಂಡಿತ್ತು.

ಎಲ್ಲಾ ಊಹಾಪೋಹಗಳಿಗೆ ತೆರೆ

ಮಹಾ ಸಿಎಂ ಪೋಸ್ಟ್‌ಗೆ ಇದ್ದ ಊಹಾಪೋಹಗಳಿಗೂ ತೆರೆ ಬಿದ್ದಿದೆ. ಪ್ರಧಾನಿ ಮೋದಿ ಸಮ್ಮುಖದಲ್ಲಿ ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ. ಶಿವಸೇನೆ ನಾಯಕ ಏಕನಾಥ್ ಶಿಂಧೆ, ಎನ್‌ಸಿಪಿಯ ಅಜಿತ್ ಪವಾರ್ ನೂತನ ಸಂಪುಟದಲ್ಲಿ ಉಪಮುಖ್ಯಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ ಫಡ್ನವೀಸ್ ಅವರು ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿ ಅಧಿಕಾರವಹಿಸಿಕೊಂಡಿರುವುದು ಇದು ಮೂರನೆ ಸಲವಾಗಿದೆ. 44ನೇ ವಯಸ್ಸಿನಲ್ಲಿ ಈ ಹುದ್ದೆಯನ್ನು ಆಲಂಕರಿಸುವ ಮೂಲಕ ಮಹಾರಾಷ್ಟ್ರದ ಅತ್ಯಂತ ಕಿರಿಯ ಸಿಎಂ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು.

ಬಿಹಾರ ಮಾದರಿ ಸಲ್ಲ

ಹೆಚ್ಚು ಸೀಟುಗಳಿದ್ದರೂ ಬಿಹಾರದಲ್ಲಿ ನಿತೀಶಕುಮಾರ್‌ರನ್ನು ಸಿಎಂರನ್ನಾಗಿ ಸಿದ್ದನ್ನು ಏಕನಾಥ ಶಿಂಧೆ ಬಣದ ಹಲವರು ಉಲ್ಲೇಖಿಸಿ ಮತ್ತೊಮ್ಮೆ ಶಿಂಧೆ ಅವರೇ ಸಿಎಂ ಆಗಬೇಕು ಎನ್ನುವ ವಾದ ಮಂಡಿಸಿದ್ದರು. ಆದರೆ ಬಿಜೆಪಿ ಇದನ್ನು ಸುತಾರಾಂ ಒಪ್ಪಲಿಲ್ಲ. ಬಿಹಾರದ ಸ್ಥಿತಿಯೇ ಬೇರೆ, ಮಹಾರಾಷ್ಟ್ರದ ವಾಸ್ತವತೆಯೇ ಬೇರೆ ಎಂದು ಸ್ಪಷ್ಟಪಡಿಸಿದ ಬಿಜೆಪಿ ರಾಷ್ಟ್ರೀಯ ವಕ್ತಾರ ಪ್ರೇಮ ಶುಕ್ಲಾ ಇಲ್ಲಿ ನಮಗೆ ಗಟ್ಟಿಯಾದ ಅಸ್ತಿತ್ವ ಮತ್ತು ಬಲವಾದ ನಾಯಕತ್ವವಿದೆ

ಫಡ್ನವೀಸ್ ಉತ್ತಮ ನಾಯಕ

ಶಿವಾಜಿ ಮಹಾರಾಜರ ಗುಣ, ದುಷ್ಟನನ್ನು ದುಷ್ಟತನದಿಂದ ಮುಗ

ಸಿದ್ಧಸೂಕ್ತಿ

ಡಾ ಆರೂಢಭಾರತೀ ಸ್ವಾಮೀಜಿ
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

ವಿವಾದಿತ ಮಂದಿರ ಮಸೀದಿಗಳು

ನಾಲ್ಕನೆಯದಾಗಿ ಸಿದ್ಧಪುರದ ಜಾಮೀ ಮಸೀದಿ. ಇದು ಗುಜರಾತ್ ನ ಪಟಾನ್ ಜಿಲ್ಲೆಯಲ್ಲಿದೆ. ಇದು ಮೂಲತಃ ಹಿಂದುಗಳ ರುದ್ರ ಮಹಾ ದೇವಾಲಯವಾಗಿದ್ದು 10 ನೇ ಶತಮಾನದಲ್ಲಿ ಗುಜರಾತ್ ನ ಸೋಲಂಕಿ ಮಹಾರಾಜನು ಈ ದೇವಾಲಯದ ನಿರ್ಮಾಣವನ್ನು ಪ್ರಾರಂಭಿಸಿದನು, 12 ನೇ ಶತಮಾನದಲ್ಲಿ ಮಹಾರಾಜ ಸಿದ್ಧರಾಜ ಜೈಸಿಂಹನು ಈ ದೇವಾಲಯದ ಸಂಕೀರ್ಣವನ್ನು ಸಂಸ್ಥಾಪಿಸಿದನು,1296 ರಲ್ಲಿ ಈ ದೇವಾಲಯ ಎಂದಿಗೂ ನಾಶವಾಗುವುದಿಲ್ಲ ಎಂಬ ಶಿಲಾಶಾಸನ ಸ್ಥಾಪಿಸಲಾಗಿದೆ, 1410 ರಿಂದ 1444 ರ ಅವಧಿಯಲ್ಲಿದ್ದ ಅಲ್ಲಾವುದ್ದೀನ್ ಖಿಲ್ಜಿ ಈ ದೇವಾಲಯವನ್ನು ಕೆಡವಿದನೆಂದೂ ಆ ಬಳಿಕ ಬಂದ ಅಹ್ಮದ್‌ಷಾ ಈ ಭಗ್ನಾವಶೇಷ ದೇವಾಲಯದ ಭಾಗವನ್ನು ಸೇರಿಸಿಕೊಂಡು ಕಟ್ಟಿ ಜಾಮೀ ಮಸೀದಿಯನ್ನಾಗಿ ಪರಿವರ್ತಿಸಿದನೆಂದು ಹೇಳಲಾಗಿದೆ. ಐದನೆಯದಾಗಿ ಉತ್ತರ ಪ್ರದೇಶದ ಸಂಭಾಲ್ ಜಿಲ್ಲೆಯ ಚಂದೌಸಿಯಲ್ಲಿನ ಶಾಹಿ ಜಾಮಾ ಮಸೀದಿ. ಇದು ಮೊದಲು ಹಿಂದುಗಳ ಪ್ರಾಚೀನ ಹರಿಹರ ದೇವಸ್ಥಾನವಾಗಿದ್ದು ಮೊಘಲರ ಅವಧಿಯಲ್ಲಿ ಇದನ್ನು ನಾಶಪಡಿಸಿ ಮಸೀದಿಯನ್ನಾಗಿ ಪರಿವರ್ತಿಸಲಾಯಿತು ಎನ್ನಲಾಗಿದ್ದು ವಿವಾದ ಈಗ ನ್ಯಾಯಾಲಯದಲ್ಲಿದೆ.

ಯುವ ಸಂಭ್ರಮ - 2024

• ಉದಯವಾಹಿನಿ ಬೆಂಗಳೂರು

ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಅನನ್ಯ ಸಂಸ್ಥೆ ಇವುಗಳ ಸಂಯುಕ್ತಾಶ್ರಯದಲ್ಲಿ ಮಲ್ಲೇಶ್ವರದ 4ನೇ ಮುಖ್ಯರಸ್ತೆಯಲ್ಲಿರುವ ಅನನ್ಯ ಸಭಾಂಗಣದಲ್ಲಿ ಡಿ. 7, 8 ರಂದು ಸಾಂಸ್ಕೃತಿಕ ಕಾರ್ಯಕ್ರಮಗಳು ಹಮ್ಮಿಕೊಂಡಿದ್ದು ಅವುಗಳ ವಿವರಗಳು ಈ ರೀತಿ ಇವೆ : ಡಿ. 7, ಶನಿವಾರ : ಸಂಜೆ 5-00ಕ್ಕೆ ವಿದ್ವಾನ್ ಸಂಜಯ್ ನಾಗ್ ಅವರಿಂದ ಶಾಸ್ತ್ರೀಯ ಸಂಗೀತ. ವಾದ್ಯ ಸಹಕಾರ : ವಿದ್ವಾನ್ ಗೋವಿಂದಮಾಧವ ಪಿಟೀಲು, ವಿದ್ವಾನ್ ವಿಷ್ಣುವರ್ಧನ್ ಮೃದಂಗ 7-00 ಗಂಟೆಗೆ : ವಿದುಷಿ ಅದಿತಿ ಪ್ರಹ್ಲಾದ್, ವಿದ್ವಾನ್ ಸಂಜಯ್ ನಾಗ್ ಅವರಿಗೆ ಅನನ್ಯ - ನಾದಜ್ಯೋತಿ ಕಲಾ ಪ್ರತಿಭಾ ಪುರಸ್ಕಾರ ಪ್ರಶಸ್ತಿ ಪ್ರದಾನ. ಮುಖ್ಯ ಅತಿಥಿಗಳು : ಪ್ರೊ|| ಎಸ್. ಮುರಳೀಧರನ್ ಮುಖ್ಯಸ್ಥರು, ಸಂಸ್ಕೃತ ವಿಭಾಗ, ಶೇಷಾದ್ರಿಪುರಂ ಡಿಗ್ರಿ ಕಾಲೇಜು, ಶೇಷಾದ್ರಿಪುರಂ. ಡಿಸೆಂಬರ್ 8, ಭಾನುವಾರ : ಸಂಜೆ 6-00ಕ್ಕೆ - ವಿದುಷಿ ಅದಿತಿ ಪ್ರಹ್ಲಾದ್ ಅವರಿಂದ ಶಾಸ್ತ್ರೀಯ ಸಂಗೀತ. ವಾದ್ಯ ಸಹಕಾರ : ವಿದುಷಿ ಹೃಷಿತಾ ಕೇದಗೆ ಪಿಟೀಲು, ವಿದ್ವಾನ್ ಪೃಥ್ವಿಕೃಷ್ಣ (ಮೃದಂಗ). ಸರ್ವರಿಗೂ ಆತ್ಮೀಯ ಸುಸ್ವಾಗತ.

ಪ್ರವೀಣ್ ನೆಟ್ಟಾರು ಹತ್ಯೆ ಕೇಸ್: ರಾಜ್ಯದ 16 ಸ್ಥಳಗಳಲ್ಲಿ ಎನ್‌ಐಎ ದಾಳಿ, ತೀವ್ರ ಶೋಧ

• ಉದಯವಾಹಿನಿ ಬೆಂಗಳೂರು

ಬಿಜೆಪಿ ಮುಖಂಡ ಪ್ರವೀಣ್ ನೆಟ್ಟಾರು ಕೊಲೆ ಪ್ರಕರಣದ ತನಿಖೆಗೆ ಸಂಬಂಧಿಸಿದಂತೆ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಕರ್ನಾಟಕದ 16 ಸ್ಥಳಗಳಲ್ಲಿ ಶೋಧ ನಡೆಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ವಾಣಿಜ್ಯ (ಮನೋರಂಜನೆ 5. ಕ್ರೈಂ ನ್ಯೂಸ್ 2022ರ ಜುಲೈನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ಳಾರೆ ಗ್ರಾಮದಲ್ಲಿ ಬಿಜೆಪಿ ಯುವಮೋರ್ಚಾ ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯ ನೆಟ್ಟಾರು ಅವರನ್ನು ಬೈಕ್ ನಲ್ಲಿ ಬಂದ ಇಬ್ಬರು ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿದ್ದರು. ಆ ಆರೋಗ್ಯ ನೆಟ್ಟಾರು ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕದ 16 ಸ್ಥಳಗಳಲ್ಲಿ ಶೋಧ ನಡೆಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮತ್ತಷ್ಟು (12) ಎನ್‌ಐಎ ಆಗಸ್ಟ್ 4, 2022 ರಂದು ಸ್ಥಳೀಯ ಪೊಲೀಸರಿಂದ ತನಿಖೆಯನ್ನು ವಹಿಸಿಕೊಂಡಿತ್ತು ಮತ್ತು ಜನವರಿ 2023 ರಲ್ಲಿ 21 ಆರೋಪಿಗಳ ವಿರುದ್ಧ 'ಚಾರ್ಜ್'ಶೀಟ್ ಸಲ್ಲಿಸಿತ್ತು.

ಪಠ್ಯ ಪುಸ್ತಕಗಳಿಗೆ ಬೇಡಿಕೆ ಸಲ್ಲಿಸುವ ಕುರಿತು ಎಲ್ಲಾ ಶಾಲೆಗಳಿಗೆ ಶಿಕ್ಷಣ ಇಲಾಖೆ ಮಹತ್ವದ ಸುತ್ತೋಲೆ!

• ಉದಯವಾಹಿನಿ ಬೆಂಗಳೂರು

ಪಠ್ಯ ಪುಸ್ತಕಗಳಿಗೆ ಬೇಡಿಕೆ ಸಲ್ಲಿಸುವ ಕುರಿತು ರಾಜ್ಯದ ಎಲ್ಲಾ ಶಾಲೆಗಳಿಗೆ ಶಿಕ್ಷಣ ಇಲಾಖೆ ಮಹತ್ವದ ಸೂಚನೆ ನೀಡಿದೆ. 2025-26 ನೇ ಶೈಕ್ಷಣಿಕ ಸಾಲಿಗೆ ಪಠ್ಯಪುಸ್ತಕಗಳನ್ನು ಶಾಲೆಗಳಿಗೆ ರವಾನಿಸುವ ಸಂಬಂಧ ಬೇಡಿಕೆ ಸಲ್ಲಿಸುವ ಪ್ರಕ್ರಿಯೆಯು ಈಗಾಗಲೇ ಚಾಲ್ತಿಯಲ್ಲಿದೆ. ಶಾಲೆಗಳ ಮುಖ್ಯ ಶಿಕ್ಷಕರು ಬೇಡಿಕೆ ಸಲ್ಲಿಸುವ ಸಂದರ್ಭದಲ್ಲಿ ಶಾಲೆಗೆ ಅಗತ್ಯವಿರುವ ಪಠ್ಯಪುಸ್ತಕಗಳನ್ನು ಮಾತ್ರವೇ ಸರಿಯಾದ ಸಂಖ್ಯೆಯಲ್ಲಿ ಬೇಡಿಕೆ ಸಲ್ಲಿಸಲು ತಿಳಿಸಲಾಗಿದ್ದು, ಈ ಸಂಬಂಧ ಅಡಕಗೊಳಿಸಿರುವ ಅನುಬಂಧ-1 ರಿಂದ 4 ಅನ್ನು ಅಧ್ಯಯನ ಮಾಡಿಕೊಂಡು ಶಾಲೆಗಳಿಗೆ ಅಗತ್ಯವಿರುವ ಶೀರ್ಷಿಕೆಗಳನ್ನು ಮಾತ್ರವೇ ಬೇಡಿಕೆ ಸಲ್ಲಿಸಲು ಶಿಕ್ಷಣ ಇಲಾಖೆ ಸೂಚನೆ ನೀಡಿದೆ. 2025-26 ನೇ ಸಾಲಿಗೆ ಸರಿಯಾದ ಶೀರ್ಷಿಕೆಗಳನ್ನು ಕೊಟ್ಟು ಬೇಡಿಕೆ ಸಲ್ಲಿಸುವಂತೆ ಸೂಚನೆ ನೀಡಿದೆ.

ಹವಾಮಾನ ಇಲಾಖೆ ಮುನ್ಸೂಚನೆ

• ಉದಯವಾಹಿನಿ ಬೆಂಗಳೂರು

ಡಿ.8 ರವರೆಗೆ ರಾಜ್ಯಾದ್ಯಂತ ಮತ್ತೆ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. KNOW MORE - ಅಂತರಾಷ್ಟ್ರೀಯ ಹೌದು, ರಾಜ್ಯದಲ್ಲಿ ಫೆಂಗಲ್ ಚಂಡಮಾರುತದ ಅಬ್ಬರ ನಿಂತರೂ ಮಳೆ ಕಡಿಮೆಯಾಗಿಲ್ಲ. ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ ಜಿಲ್ಲೆಗಳಲ್ಲಿ ಮಳೆಯಾಗಲಿದೆ. ಕರ್ನಾಟಕ ವಾಣಿಜ್ಯ ಹಾಗೆಯೇ ಕೊಡಗು, ಹಾಸನ, ಬೆಂಗಳೂರು ನಗರ, ತುಮಕೂರು, ರಾಯಚೂರು, ಬೀದರ್, ಧಾರವಾಡ, ಕೊಪ್ಪಳ, ಹಾವೇರಿ, ಗದಗ ಭಾಗದಲ್ಲಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ. (ಮನೋರಂಜನೆ ಕ್ರೈಂ ನ್ಯೂಸ್ ಆ ಆರೋಗ್ಯ ಚಿಕ್ಕಮಗಳೂರು ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಮೋಡ ಕವಿದ ವಾತಾವರಣವಿದ್ದು, ತುಂತುರು ಮಳೆಯಾಗುತ್ತಿದೆ. ವಾರವಿಡಿ ಇದೇ ವಾತಾವರಣವಿರಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಸರ್ಕಾರಿ ಹುದ್ದೆಗಳಲ್ಲಿ ಕ್ರೀಡಾ ಸಾಧಕರ ಶೇ.2 ರಷ್ಟು ಮೀಸಲಾತಿಗೆ ತಡೆ.!

• ಉದಯವಾಹಿನಿ ಬೆಂಗಳೂರು

ಕ್ರೀಡಾ ಸಾಧಕರಿಗೆ ಸರ್ಕಾರಿ ಹುದ್ದೆಗಳಲ್ಲಿ ಶೇ.2 ರಷ್ಟು ಮೀಸಲಾತಿಗೆ ರಾಜ್ಯ ಸರ್ಕಾರ ತಡೆ ನೀಡಿದೆ. ಹೌದು, ನೇರ ನೇಮಕಾತಿಯಲ್ಲಿ ಕ್ರೀಡಾ ಸಾಧಕರಿಗೆ ಸರ್ಕಾರಿ ಹುದ್ದೆಗಳನ್ನು ಮೀಸಲಿರಿಸಿ ಹೊರಡಿಸಲಾಗಿದ್ದ 18:09:2024 ರ ಅಧಿಸೂಚನೆ ಅನ್ವಯ ಯಾವುದೇ ಕ್ರಮ ಕೈಗೊಳ್ಳದಂತೆ ಸೂಚನೆಗಳನ್ನು ನೀಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಹುದ್ದೆಗಳನ್ನು ಮೀಸಲಿರಿಸಿ ಹೊರಡಿಸಲಾಗಿರುವ ದಿನಾಂಕ: 18.09.2024ರ ಅಧಿಸೂಚನೆ ಅನ್ವಯ ಯಾವುದೇ ಕ್ರಮ ಕೈಗೊಳ್ಳದಂತೆ ಸೂಚನೆಗಳನ್ನು ನೀಡಿದೆ. ಏನಿದೆ ಆದೇಶದಲ್ಲಿ... ದಿ:18.09.2024ರ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 295 ಸೇನನಿ 2023ರಲ್ಲಿ ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ 9ಕ್ಕೆ ತಿದ್ದುಪಡಿ ಮಾಡಿ ಸದರಿ ನಿಯಮದ ಉಪ-ನಿಯಮ (1) ಖಂಡ (1ಆ) ನಂತರ (1ಇ) ಯನ್ನು ಸೇರ್ಪಡೆಗೊಳಿಸಿ, ರಾಜ್ಯ ಸಿವಿಲ್ ಸೇವೆಯಲ್ಲಿನ ನೇರ ನೇಮಕಾತಿಯಲ್ಲಿ ಸಾಮಾನ್ಯ ವರ್ಗ, ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಮತ್ತು ಇತರೆ ಹಿಂದುಳಿದ ವರ್ಗಗಳ ಪ್ರತಿಯೊಂದು ಪ್ರವರ್ಗದಿಂದಲೂ ಎಲ್ಲಾ ಇಲಾಖೆಗಳ ಮಂಜೂರಾದ ವೃಂದ ಬಲದಲ್ಲಿ ಶೇಕಡ 2% ರಷ್ಟು ಹುದ್ದೆಗಳನ್ನು ಕ್ರೀಡಾ ಸಾಧಕರಿಗೆ ಮೀಸಲಿರಿಸಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.

ಯಾವತ್ತಿದ್ದರೂ ರಾಜ್ಯ ಬಿಜೆಪಿ ಪಾಲಿಗೆ ಯತ್ನಾಳ್ ಬಿಸಿ ತುಪ್ಪವೇ..!

ಬಿ.ವೈ.ವಿಜಯೇಂದ್ರ ವಿರುದ್ಧ ಸಿಡಿದೆದ್ದಿರುವ ಶಾಸಕ ಬಸವನಗೌಡ ಯತ್ನಾಳ್‌ಗೆ ಈಗಾಗಲೇ ಹೈಕಮಾಂಡ್‌ನಿಂದ ಶೋಕಾಸ್ ನೋಟಿಸ್

• ಉದಯವಾಹಿನಿ ಬೆಂಗಳೂರು

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ವಿರುದ್ಧ ಸಿಡಿದೆದ್ದಿರುವ ಶಾಸಕ ಬಸವನಗೌಡ ಯತ್ನಾಳ್ ಅವರಿಗೆ ಈಗಾಗಲೇ ಹೈಕಮಾಂಡ್ ಶೋಕಾಸ್ ನೋಟಿಸ್ ನೀಡಿದೆ.

ಅದರ ಜೊತೆಗೆ ವಿಜಯೇಂದ್ರ ಬಣದ ನಾಯಕರು ಪಕ್ಷದಿಂದ ಅವರನ್ನು ಉಚ್ಚಾಟನೆ ಮಾಡಲೇ ಬೇಕೆಂದು ಹಠಕ್ಕೆ ಬಿದ್ದಿದ್ದಾರೆ. ಇನ್ನೊಂದೆಡೆ ಪಕ್ಷದಲ್ಲಿ ತಟಸ್ಥರಾಗಿ ಉಳಿದಿರುವ ಕೆಲವು ನಾಯಕರು ಯಾರನ್ನೂ ಉಚ್ಚಾಟನೆ ಮಾಡುವುದು ಬೇಡ, ಅದು ಈಗಿನ ಸಮಸ್ಯೆಗೆ ಪರಿಹಾರವಾಗಲಾರದು. ಆದ್ದರಿಂದ ಎಲ್ಲರನ್ನು ಒಂದಾಗಿಸಿಕೊಂಡು ಪಕ್ಷ ಸಂಘಟಿಸೋಣ ಎಂಬ ಅಭಿಪ್ರಾಯವನ್ನು ಮುಂದಿಡುತ್ತಿದ್ದಾರೆ. ಒಂದು ವೇಳೆ ಬಸವನಗೌಡ ಯತ್ನಾಳ್ ಅವರನ್ನು ಪಕ್ಷದಿಂದ ಉಚ್ಚಾಟನೆ ಮಾಡಿದರೆ ಅದರಿಂದ ಯಾವ ರೀತಿಯ ಪ್ರಯೋಜನವಾಗಲಾರದು ಏಕೆಂದರೆ ಉಚ್ಚಾಟನೆ ಶಿಕ್ಷೆ ಯತ್ನಾಳ್‌ಗೆ ಹೊಸತೇನಲ್ಲ. ಈ ಹಿಂದೆಯೇ ಅವರು ಪಕ್ಷವನ್ನು ಬಿಟ್ಟು ಹೋದವರೇ.. ಹಾಗೆಯೇ ಅವರನ್ನು ಮತ್ತೆ ಪಕ್ಷಕ್ಕೆ ಕರೆತಂದವರು ಬಿ.ಎಸ್.ಯಡಿಯೂರಪ್ಪನವರೇ.. ಆದರೀಗ ಯಡಿಯೂರಪ್ಪನವರೇ ಅವರ ಶತ್ರುಗಳಾಗಿರುವುದು ವಿಪರ್ಯಾಸವೇ ಸರಿ, ಯತ್ನಾಳ್ ಅವರ ಅಸಮಾಧಾನಕ್ಕೆ

ಉದಯವಾಹಿನಿ ಚಿತ್ರ

ಬಸವನಗೌಡ ಯತ್ನಾಳ್ ಅವರನ್ನು ಪಕ್ಷದಿಂದ ಉಚ್ಚಾಟನೆ

ಪಕ್ಷದಲ್ಲಿ ಸೂಕ್ತ ಸ್ಥಾನ ಮಾನ ನೀಡಿಲ್ಲ ಎಂಬುದೇ ಕಾರಣವಾಗಿದೆ.

ಇಂತಹ ಅಸಮಾಧಾನ ಬಿಜೆಪಿ ಮಾತ್ರವಲ್ಲದೆ ಕಾಂಗ್ರೇಸ್, ಜೆಡಿಎಸ್ ನಲ್ಲಿಯೂ ಇದೆ. ಹಾಗೆನೋಡಿದರೆ ಕಾಂಗ್ರೇಸ್, ಬಿಜೆಪಿ ಮತ್ತು ಜೆಡಿಎಸ್ ಮೂರು ಪಕ್ಷಗಳಲ್ಲಿಯೂ ಬಣಬಡಿ ದಾಟವಿದೆಯಾದರೂ ಅದನ್ನು ಪಕ್ಷದ ವೇದಿಕೆಯಿಂದ ಆಚೆ ತಂದು ರಾಡಿ ಮಾಡಿಕೊಳ್ಳುತ್ತಿರುವುದು ಬಿಜೆಪಿ ಮಾತ್ರ ಶಿಸ್ತಿನ ಪಕ್ಷವೆಂದು ಬೆನ್ನುತಟ್ಟಿಕೊಳ್ಳುತ್ತಲೇ ಬರುತ್ತಿರುವ ಕಮಲ ನಾಯಕರು ಇದೀಗ ನೇರನೇರವಾಗಿ ಸಮರಕ್ಕಿಳಿದಿದ್ದಾರೆ. ಸದ್ಯ ವಿಜಯೇಂದ್ರ, ಯತ್ನಾಳ್ ಬಣಗಳಲ್ಲಿ ಕೆಲವರು ಕಾಣಿಸಿಕೊಂಡರೆ ಮತ್ತೆ ಕೆಲವರು ತಟಸ್ಥರಾಗಿದ್ದಾರೆ. ಆದರೆ ಏನೇ ಆದರೂ ಅಂತಿಮವಾಗಿ ಪರಿಣಾಮ ಬೀರುವುದು ಪಕ್ಷಕ್ಕೆ ಎಂಬುದಂತು ನಿಜ. ಕೇಂದ್ರದಲ್ಲಿ ಆಡಳಿತವನ್ನು ಹೊಂದಿ ಹಲವು ರಾಜ್ಯಗಳಲ್ಲಿ ಅಧಿಕಾರ ಪಡೆದಿರುವ ಬಿಜೆಪಿಗೆ ರಾಜ್ಯದಲ್ಲಿ

> ಬಿಜೆಪಿಯಿಂದ ಉಚ್ಚಾಟನೆಗೊಂಡು ಹೊರ ಹೋಗಿದ್ದ ಯತ್ನಾಳ್ ರನ್ನು ಹಲವರ ವಿರೋಧಗಳ ನಡುವೆಯೇ 2018ರಲ್ಲಿ ಬಿ.ಎಸ್.ಯಡಿಯೂರಪ್ಪ ರಾಜ್ಯಾಧ್ಯಕ್ಷರಾದ ಬಳಿಕ ಪಕ್ಷಕ್ಕೆ ಸೇರ್ಪಡೆಗೊಳಿಸಿದ್ದರು. ಈ ವೇಳೆ ಬಸನಗೌಡ ಪಾಟೀಲ್ ಯತ್ನಾಳ್ ಜತೆ ಬಸವರಾಜ ಪಾಟೀಲ್ ಅನ್ವರಿ, ಮಾಜಿ ಶಾಸಕ ನಾಗಪ್ಪ ಸಾಲೋನಿ, ಮಾಜಿ ಸಂಸದ ಮಲ್ಲಿಕಾರ್ಜುನ ಖೂಬಾ ಅವರನ್ನು ಬಿಜೆಪಿಗೆ ಸೇರಿಸಿಕೊಳ್ಳಲಾಗಿತ್ತು. ಅದಕ್ಕೂ ಮೊದಲು ಬಿಜೆಪಿಯಲ್ಲಿದ್ದ ಬಸನಗೌಡ ಪಾಟೀಲ್ ಯತ್ನಾಳ್ ಅವರು ಅಟಲ್ ಬಿಹಾರಿ ವಾಜಪೇಯಿ ಅವರು ಪ್ರಧಾನಿಯಾಗಿದ್ದಾಗ ಜವಳಿ ಖಾತೆ ಸಚಿವರಾಗಿದ್ದರು.

> ವಿರೋಧಪಕ್ಷದಲ್ಲಿ ಕುಳಿತಿರುವ ಬಿಜೆಪಿ ನಾಯಕರು ಇವತ್ತು ಒಗ್ಗಟ್ಟಾಗಿ ಆಡಳಿತರೂಢ ಕಾಂಗ್ರೇಸ್‌ನ್ನು ಎದುರಿಸಬೇಕಾಗಿತ್ತು. ಆದರೆ ಪಕ್ಷದೊಳಗೆ ನಾಯಕರಲ್ಲಿರುವ ಅಸಮಾಧಾನ ಭುಗಿಲೆದ್ದಿದ್ದು ಬಣಗಳಾಗಿ ಪರಿವರ್ತನೆಗೊಂಡಿವೆ. ಅಷ್ಟೇ ಅಲ್ಲದೆ ಬಿ.ಎಸ್ ಯಡಿಯೂರಪ್ಪ ಮತ್ತು ವಿಜಯೇಂದ್ರ ವಿರುದ್ಧ ಸಿಡಿದೇಳುವಂತೆ ಮಾಡಿದೆ. ಯತ್ನಾಳ್ ಅವರ ಕಟುವಾದ ಟೀಕೆಗಳು ಯಡಿಯೂರಪ್ಪರವರ ಕುಟುಂಬದ ವಿರುದ್ಧವೇ ಆಗಿದ್ದರೂ ಪರಿಣಾಮ ಮಾತ್ರ ಪಕ್ಷದ ಮೇಲೆ ಆಗುತ್ತಿದೆ. ಹೀಗಾಗಿ ಪಕ್ಷದ ನಿಷ್ಠಾವಂತ ನಾಯಕರು ಮತ್ತು ಕಾರ್ಯಕರ್ತರಿಗೆ ತೊಂದರೆಯಾಗುತ್ತಿದೆ.

ಇಂತಹದೊಂದು ಶೋಚನೀಯ ಪರಿಸ್ಥಿತಿ ಬಂದಿದೆ ಎಂದರೆ ಅದನ್ನು ಒಪ್ಪಿಕೊಳ್ಳುವುದಕ್ಕೆ ಮುಖಂಡರು, ಪಕ್ಷದ ಮತ್ತು ಹಿಂದೂಸಂಘಟನೆಯ ಕಾರ್ಯಕರ್ತರಿಗೆ ಕಷ್ಟವಾಗುತ್ತಿದೆ. ಅಸಲಿಗೆ ರಾಜ್ಯದಲ್ಲಿ ಬಿಜೆಪಿ ಅಧಿಕಾರದಲ್ಲಿದ್ದಾಗಲೇ ಹಿಂದೂ ಕಾರ್ಯಕರ್ತರು ಸಾವನ್ನಪ್ಪಬೇಕಾಗಿ ಬಂದಿತ್ತು. ಇದು ಅವತ್ತಿನ ಬಿಜೆಪಿ ಅಧ್ಯಕ್ಷ ನಳೀನ್ ಕುಮಾರ್ ಕಟೀಲ್ ಮತ್ತು ಇತರೆ ಪಕ್ಷದ ನಾಯಕರ ವಿರುದ್ಧ ಹಿಂದೂಪರ ಸಂಘಟನೆಗಳು ತಿರುಗಿ ಬೀಳುವಂತಾಗಿತ್ತು. ಅವತ್ತಿನ ದಿನಗಳಲ್ಲಿ ಹಿಂದೂಪರವಾಗಿ ಮತ್ತು ತಮ್ಮದೇ ಸರ್ಕಾರದ ಮುಖ್ಯಮಂತ್ರಿಯಾಗಿದ್ದ ಬೊಮ್ಮಾಯಿ ವಿರುದ್ಧ ಟೀಕೆಗಳನ್ನು ಮಾಡಿದ್ದರೆ ಅದು ಶಾಸಕ ಬಸವನಗೌಡ ಯತ್ನಾಳ್ ಮಾತ್ರ ಉಳಿದಂತೆ ಅಂದಿನ ಸಂಸದರಾಗಿದ್ದ ಪ್ರತಾಪ್ ಸಿಂಹ ಕೂಡ ಧ್ವನಿ ಎತ್ತಿದ್ದರು. ಆದರೆ ಹಿಂದೂಪರ ಸಂಘಟನೆಗಳ ಸಹಕಾರದಿಂದ ಅಧಿಕಾರಕ್ಕೆ ಬಂದ ಬಿಜೆಪಿ ಹಿಂದೂ ಸಂಘಟನೆಗಳ ಪರವಾಗಿ ನಿಂತಿಲ್ಲ ಎಂಬ ಅಸಮಾಧಾನಗಳಿದ್ದವು. ಅದರ ಪರಿಣಾಮಗಳು ಏನಾಯಿತು ಎಂಬುದು 2023ರ ವಿಧಾನಸಭಾ ಚುನಾವಣೆಯಲ್ಲಿ ಗೊತ್ತಾಗಿದೆ.

ಕೊನೆಗೂ ಕಾಡಾನೆ ಹಾವಳಿಗೆ ಕಡಿವಾಣ ಹಾಕಲು ಸರ್ಕಾರ ಸಜ್ಜು

• ಉದಯವಾಹಿನಿ ಬೆಂಗಳೂರು

ಅರಣ್ಯದಂಚಿನ ಗ್ರಾಮಗಳಲ್ಲಿ ಜೀವ ಮತ್ತು ಬೆಳೆ ಹಾನಿ ಉಂಟು ಮಾಡುತ್ತಿರುವ ಕಾಡಾನೆ ಮತ್ತು ಕಾಡೆಮ್ಮೆ ಹಾವಳಿ ತಡೆಗೆ ಪರ್ಯಾಯ ಮಾರ್ಗೋಪಾಯಗಳ ಬಗ್ಗೆ ಅಧ್ಯಯನ ನಡೆಸಿ ವರದಿ ಸಲ್ಲಿಸಲು ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ್ ಖಂಡ್ರೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಕಾಡಾನೆ ಹಾವಳಿಗೆ ಸದ್ಯದ ಸಾಬೀತಾದ ಪರಿಹಾರ, ರೈಲ್ವೆ ಬ್ಯಾರಿಕೇಡ್ ಅಳವಡಿಕೆಯಾಗಿದೆ. ಪ್ರತಿ ಕಿ.ಮೀ. ಬ್ಯಾರಿಕೇಡ್ ಅಳವಡಿಕೆಗೆ ಸುಮಾರು 1.50 ಕೋಟಿ ರೂ. ವೆಚ್ಚವಾಗುತ್ತಿದೆ. ಮಿಗಿಲಾಗಿ ರೈಲ್ವೆ ಹಳಿಗಳು ಸಿಗುವುದಿಲ್ಲ. ತಮಿಳುನಾಡಿನಲ್ಲಿ ಅಳವಡಿಸಿರುವ ಉಕ್ಕಿನ ಹಗ್ಗದ ತಡೆಗಳಿಗೆ (ಸ್ಟೀಲ್ ರೋಪ್) ಪ್ರತಿ ಕಿ.ಮೀ.ಗೆ 45 ಲಕ್ಷ ರೂ. ವೆಚ್ಚವಾಗುತ್ತದೆ ಎನ್ನಲಾಗದ್ದು, ಈ ಬಗ್ಗೆ ಪರಿಶೀಲಿಸಿ 10 ದಿನಗಳ ಒಳಗಾಗಿ ವರದಿ ಸಲ್ಲಿಸಲು ಸೂಚಿಸಿದ್ದಾರೆ.

ರಾಜ್ಯದಲ್ಲಿ ಈಗಾಗಲೇ 312 ಕಿ.ಮೀ.

ಉದಯವಾಹಿನಿ ಚಿತ್ರ

ರೈಲ್ವೆ ಬ್ಯಾರಿಕೇಡ್ ಅಳವಡಿಸಲಾಗಿದೆ. ರೈಲ್ವೆ ಬ್ಯಾರಿಕೇಡ್ ಅಳವಡಿಕೆಗೆ ಮುನ್ನ ಮತ್ತು ಅಳವಡಿಕೆ ನಂತರದ ಜೀವಹಾನಿ ಮತ್ತು ಬೆಳೆಹಾನಿ ಕುರಿತಂತೆ ತುಲನಾತ್ಮಕ ವರದಿ ಸಲ್ಲಿಸುವಂತೆಯೂ ಸಚಿವ ಈಶ್ವರ ಖಂಡ್ರೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಚಿಕ್ಕಮಗಳೂರು: ಕಾಫಿನಾಡು ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಾಡಾನೆ ಮತ್ತು ಮಾನವ ಸಂಘರ್ಷ ಮುಂದುವರೆದಿದೆ. ನರಸಿಂಹರಾಜಪುರ ತಾಲೂಕಿನ ಸೀತೂರು ಗ್ರಾಮದಲ್ಲಿ ಕಾಫಿ ತೋಟದಲ್ಲಿ ಕೆಲಸ

ನೀರು ಪಾಲಾದ ಭತ್ತದ ಬೆಳೆ: ಕೃಷಿಕರಿಗೆ ಕಣ್ಣೀರು ತರಿಸಿದೆ ಅಕಾಲಿಕ ಮಳೆ

ದಿಢೀರನೆ ಎರಡು ದಿನಗಳ ಕಾಲ ಬಿದ್ದ ಅಕಾಲಿಕ ಮಳೆಗೆ ಕೈಗೆ ಬಂದ ರೈತರ ಬೆಳೆ ಬಾಯಿಗೆ ಬಾರದಂತಾಗಿದೆ

• ಉದಯವಾಹಿನಿ ಗೋಣಿಕೊಪ್ಪಲು

ದಿಢೀರನೆ ಎರಡು ದಿನಗಳ ಕಾಲ ಬಿದ್ದ ಅಕಾಲಿಕ ಮಳೆಗೆ ಕೈಗೆ ಬಂದ ರೈತರ ಬೆಳೆ ಬಾಯಿಗೆ ಬಾರದಂತಾಗಿದೆ. ಪೊನ್ನಂಪೇಟೆ ತಾಲ್ಲೂಕಿನಾದ್ಯಂತ ಬೆಳೆದಿದ್ದ ಭತ್ತ ಬಹುತೇಕ ಜಲಮಯವಾಗಿದೆ. ಮತ್ತೆ ಕೆಲವು ಕಡೆ ನೆಲಕ್ಕೆ ಬಿದ್ದು ಮಣ್ಣು ಪಾಲಾಗಿದೆ. ಹಳ್ಳಿಗಟ್ಟುವಿನ ಪ್ರಗತಿ ಪರ ಕೃಷಿಕ ರವಿಶಂಕರ್ ಅವರ 50 ಎಕರೆಯ ಭತ್ತದ ಕೃಷಿ ಅರ್ಧಕ್ಕೂ ಹೆಚ್ಚಿನ ಪ್ರಮಾಣದಲ್ಲಿ ನೀರಿನಲ್ಲಿ ಮುಳುಗಿದೆ. ಉತ್ತಮ ಕೃಷಿಕರಾಗಿರುವ ರವಿಶಂಕರ್ 30ಕ್ಕೂ ಹೆಚ್ಚಿನ ತಳಿಗಳನ್ನು ಬೆಳೆದಿದ್ದರು. ಇದರಲ್ಲಿ 17 ಬಗೆಯ ತಳಿಗಳ ಭತ್ತದ ಕೊಯ್ಲಿಗೆ ಮುಂದಾಗಿದ್ದರು. ವಿಶಾಲವಾದ ಗದ್ದೆ ಬಯಲಿನಲ್ಲಿ ಒಂದು ಕಡೆ ಕೊಯ್ದು ನಡೆಯುತ್ತಿದ್ದರೆ, ಮತ್ತೊಂದು ಕಡೆ ಒಕ್ಕಲು ಕೆಲಸ ನಡೆಯುತ್ತಿತ್ತು. ಶುಭ್ರವಾದ ವಾತಾವರಣದಲ್ಲಿ ಮಳೆಯ ಮುನ್ಸೂಚನೆ ಕಾಣದ ರವಿಶಂಕರ್ ಕೈಗೆ ಸಿಕ್ಕಿದ ನೂರಾರು ಕಾರ್ಮಿಕರನ್ನು ಕರೆದುಕೊಂಡು ಕೊಯ್ದು ಕೆಲಸಕ್ಕೆ ಮುಂದಾಗಿದ್ದರು.

ಮಳೆಯಿಂದಾಗಿ ಕಾರ್ಮಿಕರ ಸಮಸ್ಯೆ, ಕೂಲಿ ಹೆಚ್ಚಳ, ಹವಾಮಾನ ವೈಪರೀತ್ಯ ಇವುಗಳ ನಡುವೆ ಶ್ರಮಪಟ್ಟು ಬೆಳೆದಿದ್ದ ಬೆಳೆ ನೀರು ಪಾಲಾಗಿರುವುದನ್ನು ಕಂಡು ಕಣ್ಣೀರು ಹಾಕುವಂತಾಯಿತು. ಕೊಯ್ದು ಗದ್ದೆಯಲ್ಲೇ ಉಳಿದಿದ್ದು ಅದೆಲ್ಲ ನೀರಿನಲ್ಲಿ ಮುಳುಗಿದೆ. ಭತ್ತದ ಹುಲ್ಲನ್ನು ಮೇಲಕ್ಕೆ ಎತ್ತಿ ಅರಿ ಕಟ್ಟಲು ಹೋದರೆ ಬತ್ತವೆಲ್ಲ ನೀರಿನಲ್ಲಿ ಜುಳುಜುಳನೆ ಉದುರುತ್ತಿದೆ. ಉತ್ತಮ ಗುಣಮಟ್ಟದ ಮತ್ತು ಸಮೃದ್ಧಿಯಾಗಿ ಬೆಳೆದಿದ್ದ ಭತ್ತದ ಬೆಳೆ ನೀರು ಪಾಲಾದದುನ್ನು ಕಂಡು ಹೊಟ್ಟೆ ಉರಿಯುತ್ತಿದೆ ಎನ್ನುತ್ತಾರೆ ರವಿಶಂಕರ್. ಹಿಂದೆ ಭತ್ತ ಕೊಯ್ಲಿಗೆ ಬರುವ ವೇಳೆಯಲ್ಲಿ ಅಂದರೆ ನವೆಂಬರ್ ಕೊನೆಯ ವಾರ ಅಥವಾ ಡಿಸೆಂಬರ್ ನಲ್ಲಿ ಸಾಮಾನ್ಯ ಮೋಡವಾಗಿ ತುಂತುರು ಮಳೆ ಬರುವುದು ವಾಡಿಕೆಯಾಗಿತ್ತು. ಇದರಿಂದ ಬೆಳೆಗೆ ಹೆಚ್ಚಿನ ಹಾನಿ ಆಗುತ್ತಿರಲಿಲ್ಲ. ಆದರೆ ಇದೀಗ ಬಿದ್ದ ಮಳೆ ಭಾರಿ ಪ್ರಮಾಣದ ಹಾನಿ ಮಾಡಿದೆ ಎಂದು ನೋವು ತೋಡಿಕೊಂಡರು.

ಐನಂಡ ಕುಟುಂಬದ ಭತ್ತ ನೀರು ಪಾಲು: ಪೊನ್ನಂಪೇಟೆ ಬಳಿಯ ಮುಗಟಗೇರಿಯ ಐನಂಡ ಕುಟುಂಬಸ್ಥರ ವಿಶಾಲವಾದ ಭತ್ತದ ಬಯಲು ಕೂಡ ನೀರಿನಲ್ಲಿ ಮುಳುಗಿದೆ. ಉತ್ತಮ ಕೃಷಿಕರಾಗಿರುವ ಐನಂಡ ಕುಟುಂಬದ ಮಂದಣ್ಣ, ತಮ್ಮಯ್ಯ, ಬೋಪಣ್ಣ ಹಾಗೂ ಸೋಮಣ್ಣ ಅವರು ತಮ್ಮ ಯಾವುದೇ ಗದ್ದೆಯನ್ನು ಪಾಳು ಬಿಡದೆ ಪ್ರತಿ ವರ್ಷ ಕೃಷಿ ಮಾಡುತ್ತಾ ಬರುತ್ತಿದ್ದಾರೆ. ಹೀಗಾಗಿ ಭತ್ತವನ್ನು ಇವರು ಸಮೃದ್ಧವಾಗಿ ಬೆಳೆದಿದ್ದಾರೆ. ಉತ್ತಮ ಇಳುವರಿ ನೀಡುವ ತಳಿಯ ಭತ್ತ ಗೊನೆ ಬಾಗಿ ಕೊಯ್ಲಿಗೆ ಬಂದಿತ್ತು.

ಮುಗುಟಗೇರಿಯ ಐನಂಡ ಕುಟುಂಬಸ್ಥರ ಗದ್ದೆಯಲ್ಲಿ ಸಮೃದ್ಧವಾಗಿ ಬೆಳೆದಿರುವ ಭತ್ತಐನಂಡ ಬೋಪಣ್ಣ ಪೊನ್ನಂಪೇಟೆ ಹವಾಮಾನ ವೈಪರೀತ್ಯದಿಂದ ರೈತರಿಗೆ ಆಗುತ್ತಿರುವ ನಷ್ಟವನ್ನು ಸರಿದೂಗಿಸಲು ಸರ್ಕಾರ ಮುಂದಾಗಬೇಕು. ಇಲ್ಲದಿದ್ದರೆ ಈಗಾಗಲೆ ಕನಿಷ್ಟ ಮಟ್ಟಕ್ಕೆ ಬಂದಿರುವ ಕೊಡಗಿನ ಭತ್ತದ ಕೃಷಿ ಉಳಿಯಲಾರದುರವಿಸಂಶಕರ್ ಹಳ್ಳಿಗಟ್ಟು ಭತ್ತದ ಬೆಳೆ ಹಾನಿಯಿಂದ ಭಾರಿ ಪ್ರಮಾಣದ ನಷ್ಟವಾಗಿದೆ. ಗದ್ದೆ ಬದುವಲ್ಲಿ ನಿಂತು ನೀರಿನಲ್ಲಿ ಮುಳುಗಿರುವ ಭತ್ತ ನೋಡಿ ಬಹಳ ನೋವಾಗುತ್ತಿದೆ

ಉದಯವಾಹಿನಿ ಚಿತ್ರ

ಏರುತ್ತಿರುವ ಉತ್ಪಾದನಾ ವೆಚ್ಚ, ಹವಮಾನ ವೈಪರೀತ್ಯ

ಇನ್ನೇನು ಕೊಯ್ದು ಮಾಡಿ ಕಣಕ್ಕೆ ತುಂಬಿಸಿಕೊಳ್ಳಬೇಕು ಎಂಬ ಸಂತದಲ್ಲಿರುವಾಗ ಇದ್ದಕ್ಕಿದಂತೆ ಬಂದ ಅಕಾಲಿಕ ಮಳೆ ಬೆಳೆಯನ್ನೆಲ್ಲ ನೀರು ಪಾಲು ಮಾಡಿದೆ. ಈ ಬಗ್ಗೆ ತಮ್ಮ ನೋವು ತೋಡಿಕೊಂಡ ಐನಂಡ ಬೋಪಣ್ಣ ನಮ್ಮ ಅಣ್ಣನ ಮಗನಾದ ಡಾ.ಸೋಮಣ್ಣ ಉಪನ್ಯಾಸಕ ವೃತ್ತಿ ಬಿಟ್ಟು ಕೃಷಿಕನಾಗಿದ್ದ ಸಮೃದ್ಧಿಯಾಗಿ ಬೆಳೆದಿದ್ದ ಭತ್ತವನ್ನು ನೋಡುವುದೇ ಅನಂದ ವಾಗುತ್ತಿತ್ತು. ಅದೆಲ್ಲ ಈಗ ನೀರಿನಲ್ಲಿ ಮುಳುಗಿದೆ. ಇದರಿಂದ ಕೃಷಿ ಬಗ್ಗೆ ಒಂದು ರೀತಿಯ ಜುಗುಪ್ಸೆ ಬಂದಿದೆ. ಒಂದು ಕಡೆ ಏರುತ್ತಿರುವ ಉತ್ಪಾದನಾ ವೆಚ್ಚ, ಮತ್ತೊಂದು ಕಡೆ ಹವಮಾನ ವೈಪರೀತ್ಯದಿಂದ ಉತ್ತಮ ಕೃಷಿಕನಾಗುವ ಕನಸು ಭಗ್ನವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಮಳೆಯಿಂದ ಕಾರ್ಮಿಕರ ಸಮಸ್ಯೆ

ಚಕ್ರಬಾವಿ ಅಭಿವೃದ್ಧಿಗೆ ಆದ್ಯತೆ

• ಉದಯವಾಹಿನಿ, ಮಾಗಡಿ

ಗ್ರಾಮಗಳು ಅಭಿವೃದ್ಧಿ ಹೊಂದಿದರೆ ಮಾತ್ರ ದೇಶ ಪ್ರಗತಿ ಸಾಧಿಸಲು ಸಾಧ್ಯ. ಆದ್ದರಿಂದ ಚಕ್ರಬಾವಿ ಗ್ರಾಮಕ್ಕೆ ಮೂಲ ಸೌಲಭ್ಯ ಒದಗಿಸಲು ಆದ್ಯತೆ ನೀಡಲಾಗುತ್ತಿದೆ ಎಂದು ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಎಚ್.ಎನ್. ಅಶೋಕ್ ಹೇಳಿದರು.

ತಾಲ್ಲೂಕಿನ ಚಕ್ರಬಾವಿ ಗ್ರಾಮದಲ್ಲಿ ವಿಶ್ವೇಶ್ವರಯ್ಯ ಜಲ ನಿಗಮದ ವತಿಯಿಂದ 1.30 ಕೋಟಿ ವೆಚ್ಚದ ಕಾಂಕ್ರೀಟ್ ರಸ್ತೆ ಹಾಗೂ ಚರಂಡಿ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದರು. ಚಕ್ರಬಾವಿ ಗ್ರಾಮದ ಅಭಿವೃದ್ಧಿಗೆ ವಿಶೇಷ ಅನುದಾನವನ್ನು ತರಲಾಗಿದ್ದು, 4 ಕೋಟಿ ವೆಚ್ಚದಲ್ಲಿ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹೊಸ ಕಟ್ಟಡ ನಿರ್ಮಾಣ ಮಾಡಲಾಗುವುದು ಎಂದರು. ಶತಮಾನ ಕಳೆದಿರುವ ಚಕ್ರಬಾವಿ ಪ್ರಾಥಮಿಕ ಸರ್ಕಾರಿ ಶಾಲೆಯನ್ನೂ ಮೇಲ್ದರ್ಜೆಗೇರಿಸಬೇಕಾದ ಅಗತ್ಯವಿದೆ.

ಆದರೆ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿರುವುದು ಬೇಸರದ ಸಂಗತಿ. ಮಕ್ಕಳು ಖಾಸಗಿ ಶಾಲೆಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಹೋಗುತ್ತಿರುವುದರಿಂದ ಸರ್ಕಾರಿ ಶಾಲೆಗಳಿಗೆ ದಾಖಲಾತಿ ಕಡಿಮೆಯಾಗುತ್ತಿದೆ. ಈಗ ಚಕ್ರಬಾವಿ ಸರ್ಕಾರಿ ಶಾಲೆಯಲ್ಲಿ ಕೇವಲ 30 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ ಎಂದರು.

ಉದಯವಾಹಿನಿ ಚಿತ್ರ

ಜುಟ್ಟನಹಳ್ಳಿ ವಿಎಸ್‌ಎಸ್‌ಎನ್ ಅಧ್ಯಕ್ಷ ಜೆ.ಪಿ. ಚಂದ್ರೇಗೌಡ, ತಾ.ಪಂ.ಮಾಜಿ ಅಧ್ಯಕ್ಷರಾದ ಕಾಂತಾರಾಜು, ಸೀಗೇಕುಪ್ಪೆ ಶಿವಣ್ಣ. ಮಾರೇಗೌಡ, ಕೋರಮಂಗಲ ಶಿವಣ್ಣ, ಸಿ.ಎನ್.ದೀಪಕ್, ಸೀಗೇಕುಪ್ಪೆ ಗ್ರಾ.ಪಂ.ಅಧ್ಯಕ್ಷೆ ಶಶಿಕಲಾ ಸ್ವಾಮಿ, ಸದಸ್ಯರಾದ ಹನುಮೇಗೌಡ, ಶಿವಕುಮಾರ್, ರಂಗನಾಥ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬೈರೇಶ್, ಗುತ್ತಿಗೆದಾರ ಶ್ರೀಧರ್, ಜಗದೀಶ್, ಸುರೇಶ್, ದೇವರಾಜು, ಸೋಮಶೇಖರ್, ರಾಜಣ್ಣ ಸೇರಿದಂತೆ ಇತರರು ಭಾಗವಹಿಸಿದ್ದರು.

ಹಿಂದೂಗಳ ಮೇಲಿನ ದೌರ್ಜನ್ಯಕ್ಕೆ ಆಕ್ರೋಶ

• ಉದಯವಾಹಿನಿ, ರಾಮನಗರ

ನೆರೆಯ ಬಾಂಗ್ಲಾದೇಶದಲ್ಲಿ ಹಿಂದೂ ಧರ್ಮದವರ ಮೇಲೆ ನಡೆಯುತ್ತಿರುವ ದೌರ್ಜನ್ಯ ಖಂಡಿಸಿ, ಹಿಂದೂ ಹಿತರಕ್ಷಣಾ ಸಮಿತಿ ವತಿಯಿಂದ ನಗರದಲ್ಲಿ ಜನಾಂದೋಲನ ಸಭೆ ಹಾಗೂ ಜಾಥಾ ನಡೆಯಿತು. ಬೆಳಿಗ್ಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ ಬಳಿ ಜಮಾಯಿಸಿದ ಸಮಿತಿ ಸದಸ್ಯರು ಅಲ್ಲಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಜಾಥಾ ನಡೆಸಿದರು. ಜಾಥಾದುದ್ದಕ್ಕೂ ಸದಸ್ಯರು ಬಾಂಗ್ಲಾದೇಶದ ವಿರುದ್ಧ ಘೋಷಣೆಗಳನ್ನು ಕೂಗಿದರು. ಹಿಂದೂಗಳಿಗೆ ರಕ್ಷಣೆ ಒದಗಿಸುವಂತೆ ಆಗ್ರಹಿಸಿದರು.

ಬಂಧನಕ್ಕೊಳಗಾಗಿರುವ ಇಸ್ಕಾನ್‌ನ ಚಿನ್ಮಯ ಕೃಷ್ಣದಾಸ್ ಅವರನ್ನು ಕೂಡಲೇ ಬಿಡುಗಡೆಗೊಳಿಸಬೇಕು. ಈ ಕುರಿತು ಸರ್ಕಾರ ಬಾಂಗ್ಲಾದೊಂದಿಗೆ ಮಾತುಕತೆ ನಡೆಸಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಮಾತನಾಡಿದ ಚನ್ನಪಟ್ಟಣ ವಿರಕ್ತ ಮಠದ ಶಿವರುದ್ರ ಸ್ವಾಮೀಜಿ, 'ಬಾಂಗ್ಲಾದೇಶದಲ್ಲಿ ಕೋಭೆ ಉಂಟಾದ ಬಳಿಕ ಹಿಂದೂಗಳ ಮೇಲೆ ನಿರಂತರವಾಗಿ ದೌರ್ಜನ್ಯ ನಡೆಯುತ್ತಿದೆ. ಹಲವರ ಪ್ರಾಣ, ಆಸ್ತಿ ಹಾಗೂ ಧಾರ್ಮಿಕ ಕೇಂದ್ರಗಳಿಗೆ ಹಾನಿಯಾಗಿದೆ. ಇಷ್ಟಾದರೂ ಅಲ್ಲಿನ ಹಿಂದೂಗಳ ರಕ್ಷಣೆಗೆ ಭಾರತ ಎಚ್ಚೆತ್ತುಕೊಂಡಿಲ್ಲ. ಪ್ರಧಾನಿ ಮೋದಿ ಅವರು ಇನ್ನಾದರೂ ಹಿಂದೂಗಳ ರಕ್ಷಣೆ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

ಉದಯವಾಹಿನಿ ಚಿತ್ರ

ನಿರಂತರ ದೌರ್ಜನ್ಯಕ್ಕೆ ಒಳಗಾಗುತ್ತಿರುವ ಹಿಂದೂಗಳ ರಕ್ಷಣೆಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪ್ರಧಾನಿ ಮೋದಿ ಅವರಿಗೆ ಸೂಚನೆ ನೀಡಬೇಕು. ಬಂಧನದಲ್ಲಿರುವ ಚಿನ್ಮಯ ಕೃಷ್ಣದಾಸ್ ಅವರನ್ನು ಕೂಡಲೇ ಬಿಡುಗಡೆ ಮಾಡಿಸಬೇಕು

-ಸಂಜಯ್, ವಿಶ್ವ ಹಿಂದೂ ಪರಿಷತ್

ಧರ್ಮ ಜಾಗರಣ ವೇದಿಕೆ ತುಮಕೂರು ವಿಭಾಗದ ಮುಖಂಡ ಜಗದೀಶ್ ಮಾತನಾಡಿ, ಬಾಂಗ್ಲಾದಲ್ಲಿ ಅಲ್ಪಸಂಖ್ಯಾತರಾಗಿರುವ ಹಿಂದೂಗಳ ಪರಿಸ್ಥಿತಿ ನಿಕೃಷ್ಟವಾಗಿದೆ. ಅವರ ಜೀವಕ್ಕೆ ರಕ್ಷಣೆ ಇಲ್ಲವಾಗಿದೆ. ಬಹುಸಂಖ್ಯಾತ ಮುಸ್ಲಿಮರು ಹಿಂದೂಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸುತ್ತಿದ್ದಾರೆ. ಭಾರತವು ಆ ದೇಶದೊಂದಿಗೆ ರಾಜ ತಾಂತ್ರಿಕ ಮಾತುಕತೆ ನಡೆಸಿ ದೌರ್ಜನ್ಯಕ್ಕೆ ತಡೆಯೊಡ್ಡಬೇಕಾಗಿದೆ' ಎಂದರು.

ಹೆಚ್ಚುವರಿ ಜಿಲ್ಲಾಧಿಕಾರಿ ಕೆ. ಚಂದ್ರಯ್ಯ ಅವರ ಮೂಲಕ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಪ್ರತಿಭಟನಾಕಾರರು ಮನವಿ ಸಲ್ಲಿಸಿದರು.

ಕಡಿಮೆಯಾಗುತ್ತಿದೆ ಮಣ್ಣಿನ ರಸಸಾರ ಪರೀಕ್ಷೆ ಮಾಡಿಸಲು ಕೃಷಿ ವಿಜ್ಞಾನಿಗಳ ಮನವಿ

• ಉದಯವಾಹಿನಿ, ಮಡಿಕೇರಿ

ಕೊಡಗು ಜಿಲ್ಲೆಯಲ್ಲಿನ ಮಣ್ಣು ವರ್ಷದಿಂದ ವರ್ಷಕ್ಕೆ ತನ್ನ ಗುಣಮಟ್ಟ ಕಳೆದುಕೊಳ್ಳುತ್ತಿದ್ದು ಎಚ್ಚೆತ್ತುಕೊಳ್ಳದೇ ಹೋದರೆ ರಾಜ್ಯದ ಇತರೆ ಜಿಲ್ಲೆಗಳಲ್ಲಿರುವಂತೆ ಸಾರಹೀನವಾಗುವ ಭೀತಿ ಮೂಡಿದೆ.

ಹಾಗಾಗಿ ಎಲ್ಲಾ ರೈತರು, ಬೆಳೆಗಾರರು ಕಡ್ಡಾಯವಾಗಿ ಮಣ್ಣು ಪರೀಕ್ಷೆ ಮಾಡಿಸಿಕೊಂಡು, ಕೃಷಿ ತಜ್ಞರ ಸಲಹೆಯ ಪ್ರಕಾರವೇ ಭೂಮಿಗೆ ರಸಗೊಬ್ಬರ ಹಾಕಬೇಕಿದೆ. ಸಾಮಾನ್ಯವಾಗಿ ಮಣ್ಣಿನ ರಸಸಾರ ಕಾಫಿ ಬೆಳೆಗೆ 6.1ರಿಂದ 6.3ರವರೆಗೆ ಇರಬೇಕಿದೆ.

ಮಣ್ಣಿನ ರಸಸಾರ ನಿಗದಿತ ಪ್ರಮಾಣಕ್ಕಿಂತಲೂ ತೀರಾ ಕಡಿಮೆ ಇರುವುದು ಪರೀಕ್ಷೆಗಳಿಂದ ಗೊತ್ತಾಗಿದೆ' ಎಂದು ಚೆಟ್ಟಳ್ಳಿಯಲ್ಲಿರುವ ಕಾಫಿ ಸಂಶೋಧನಾ ಉಪಕೇಂದ್ರ ಹಾಗೂ ಗೋಣಿಕೊಪ್ಪಲಿನಲ್ಲಿರುವ ಕೃಷಿ ವಿಜ್ಞಾನ ಕೇಂದ್ರದ ತಜ್ಞರು ಹೇಳುತ್ತಾರೆ. ಇದು ನಿಜಕ್ಕೂ ಕೊಡಗಿನ ಮಣ್ಣಿಗೆ ಎಚ್ಚರಿಕೆಯ ಕರೆಗಂಟೆ ಎನಿಸಿದೆ. ಈಗಲೇ ಎಚ್ಚೆತ್ತುಕೊಂಡು ಕೃಷಿ ವಿಜ್ಞಾನಿಗಳ ಸಲಹೆ ಪ್ರಕಾರ ಮಣ್ಣು ಸಂರಕ್ಷಣಾ ವಿಧಾನಗಳನ್ನು ಅನುಸರಿಸಿದರೆ ಸುಸ್ಥಿರವಾದ ಇಳುವರಿ ಖಂಡಿತ ಸಾಧ್ಯವಿದೆ. ಈ ಕುರಿತು ಪ್ರತಿಕ್ರಿಯಿಸಿದ ಚೆಟ್ಟಳ್ಳಿಯ ಕಾಫಿ ಸಂಶೋಧನಾ ಉಪಕೇಂದ್ರದ ಮಣ್ಣು ವಿಜ್ಞಾನಿ ಡಾ.ನಡಾಫ್, 'ಕೇವಲ ಮಣ್ಣಿನ ರಸಸಾರ ಮಾತ್ರವಲ್ಲ ಸಾವಯದ ಪ್ರಮಾಣವೂ ಕಡಿಮೆ ಇರುವುದು ಪರೀಕ್ಷೆಗಳಿಂದ ಗೊತ್ತಾಗಿದೆ.

ಉದಯವಾಹಿನಿ ಚಿತ್ರ

ಒಂದೇ ಎಸ್ಟೇಟ್‌ನಲ್ಲಿ 5ರಿಂದ 6 ಕಡೆಯ ಮಣ್ಣು ಗಳನ್ನಾದರೂ ಪರೀಕ್ಷೆಗೆ ಒಳಪಡಿಸಬೇಕಿದೆ. ತಜ್ಞರ ಶಿಫಾರಸ್ಸುಗಳನ್ನು ಪಾಲಿಸಬೇಕಿದೆ. ಹೆಚ್ಚು ಮಳೆ ಸುರಿದಾಗ ಸಾಮಾನ್ಯವಾಗಿ ಹರಿಯುವ ಹೊಳೆಯ ನೀರಿನ ಬಣ್ಣ ಕೆಂಪಾಗುವುದು ಸಹ ಇತ್ತೀಚಿನ ವರ್ಷಗಳಲ್ಲಿ ಹೆಚ್ಚುತ್ತಿದೆ

-ಡಾ.ನಡಾಫ್, ಮಣ್ಣು ವಿಜ್ಞಾನಿ

ಹೆಚ್ಚಿನ ಜನರು ಯಾವುದೇ ಮಣ್ಣು ಪರೀಕ್ಷೆ ಮಾಡದೇ ತಮಗೆ ತಿಳಿದಂತೆ ಅಥವಾ ಬೇರೆ ಯಾರೋ ಹೇಳಿದಂತೆ ರಸಗೊಬ್ಬರಗಳನ್ನು ಹಾಕುವುದರಿಂದ ಮಣ್ಣು ಮತ್ತಷ್ಟೂ ಸತ್ವ ಕಳೆದುಕೊಳ್ಳುತ್ತಿದೆ. ಹಾಗಾಗಿ, ಕಡ್ಡಾಯವಾಗಿ ಎಲ್ಲರೂ ಮಣ್ಣು ಪರೀಕ್ಷೆ ಮಾಡಿಸಿಯೇ ರಸಗೊಬ್ಬರ ಹಾಕಬೇಕು' ಎಂದು ಹೇಳುತ್ತಾರೆ.

ಮಣ್ಣಿನ ಮೇಲ್ಮೈ ಪದರ ಬಹಳ ಸುಲಭವಾಗಿ ಮಳೆ ನೀರಿನಲ್ಲಿ ಕೊಚ್ಚಿಕೊಂಡು ಹೋಗುತ್ತಿದೆ.

ಇದರಿಂದ ಎಲೆಗಳು ಉದುರಿ ಅಲ್ಲಿಯೇ ಕೊಳೆತು ತಯಾರಾದ ಸಾವಯವ ಅಂಶಗಳೂ ಹೊಳೆ ಪಾಲಾಗುತ್ತಿದೆ. ಇದನ್ನು ತಪ್ಪಿಸಲು ತಜ್ಞರ ಸಲಹೆಯ ಪ್ರಕಾರ ಇಳಿಜಾರಿನಲ್ಲಿ ಸಮತಟ್ಟು ಭೂಮಿಯಲ್ಲಿ ಹಾಗೂ ಎತ್ತರದ ಪ್ರದೇಶದಲ್ಲಿ ಮಣ್ಣು ಸಂರಕ್ಷಣಾ ಕ್ರಮಗಳನ್ನು ಕೈಗೊಂಡರೆ ಮಣ್ಣಿನ ಸವಕಳಿ ತಪ್ಪಿಸಬಹುದು. ಸದ್ಯ, ಚೆಟ್ಟಳ್ಳಿಯ ಕಾಫಿ ಸಂಶೋಧನಾ ಉಪಕೇಂದ್ರದಲ್ಲಿ 150 ಶುಲ್ಕ ಪಡೆದು ಮಣ್ಣು ಪರೀಕ್ಷೆ ಮಾಡಲಾಗುತ್ತಿದೆ. ವರ್ಷಕ್ಕೆ 3,500 ಮಣ್ಣು ಮಾದರಿಗಳನ್ನು ಇಲ್ಲಿ ಪರೀಕ್ಷಿಸಲಾಗುತ್ತಿದೆ. ಕೃಷಿ ಇಲಾಖೆಗೆ ಸೇರಿದ ಮಣ್ಣು ಪರೀಕ್ಷಾ ಕೇಂದ್ರವು ಕೂಡಿಗೆಯಲ್ಲಿದ್ದು, 200 ಪಡೆದು, ಮಣ್ಣು ಪರೀಕ್ಷೆ ಮಾಡಲಾಗುತ್ತಿದೆ. ವರ್ಷಕ್ಕೆ ಸುಮಾರು 6ರಿಂದ 8 ಸಾವಿರ ಮಣ್ಣನ್ನು ಪರೀಕ್ಷಿಸಲಾಗುತ್ತಿದೆ. ಗೋಣಿಕೊಪ್ಪಲಿನ ಕೃಷಿ ವಿಜ್ಞಾನ ಕೇಂದ್ರದಲ್ಲಿ 300 ಶುಲ್ಕ ಪಡೆದು ಮಣ್ಣು ಪರೀಕ್ಷೆ ಮಾಡಲಾಗುತ್ತಿದ್ದು ವರ್ಷಕ್ಕೆ 900ರಿಂದ 1,200 ಮಾದರಿಗಳನ್ನು ಪರೀಕ್ಷಿಸಲಾಗುತ್ತಿದೆ.

72 ಇ-ಖಾತೆ: 7 ಲಕ್ಷ ತೆರಿಗೆ ಸಂಗ್ರಹ

• ಉದಯವಾಹಿನಿ ಕನಕಪುರ

ನಗರಸಭೆ ಆಯೋಜಿಸಿದ್ದ ಇ-ಖಾತೆ ಆಂದೋಲನದಲ್ಲಿ ಕ್ರಮಬದ್ಧವಾಗಿದ್ದ 72 ಸ್ವತ್ತುಗಳಿಗೆ ಇ-ಖಾತೆ ಮಾಡಲಾಗಿದ್ದು ಆಸ್ತಿ ಮಾಲಿಕರಿಗೆ ವಿತರಣೆ ಮಾಡಲಾಯಿತು. ನಗರದ ರಂಗನಾಥ ದೇವಾಲಯದ ಆವರಣದಲ್ಲಿ ಮೂರು ದಿನ ಇ-ಖಾತಾ ಆಂದೋಲನ ಹಮ್ಮಿಕೊಳ್ಳಲಾಗಿತ್ತು.

ಇ-ಖಾತಾ ಆಂದೋಲನದಲ್ಲಿ ಆಸ್ತಿಗೆ ಸಂಬಂಧಿಸಿದಂತೆ ತೆರಿಗೆ ಬಾಕಿ ಉಳಿಸಿಕೊಂಡಿದ್ದ ಮಾಲೀಕರು ಆಸ್ತಿ ತೆರಿಗೆ ಕಟ್ಟಿದ್ದರಿಂದ ಆಂದೋಲನದಲ್ಲಿ ಒಟ್ಟು 7 ಲಕ್ಷ ಆಸ್ತಿ ತೆರಿಗೆ ಸಂಗ್ರಹವಾಗಿದೆ.

ನಗರಸಭೆಯ ಮಳಗಾಳು ಮತ್ತು ಕೋಟೆ ವಾರ್ಡುಗಳಿಗೆ ಸಂಬಂಧಿಸಿದಂತೆ ನಡೆದ ಖಾತಾ ಆಂದೋಲನದಲ್ಲಿ ಸಾರ್ವಜನಿಕರು ತಮ್ಮ ಸ್ವತ್ತುಗಳಿಗೆ ಸಂಬಂಧಿಸಿದಂತೆ ಇ- ಖಾತೆ ಮಾಡಿಕೊಡಲು ತೆರಿಗೆ ಕಟ್ಟಿ, ಅಗತ್ಯ ದಾಖಲೆ ಸಲ್ಲಿಸಿದ್ದರು. ಅವುಗಳನ್ನು ಸ್ಥಳದಲ್ಲೇ ಪರಿಶೀಲನೆ ನಡೆಸಿದ ನಗರಸಭೆ ಅಧಿಕಾರಿಗಳು ಕ್ರಮಬದ್ಧವಾಗಿದ್ದ ಆಸ್ತಿಗಳಿಗೆ ಸ್ಥಳದಲ್ಲಿಯೇ ಈ ಖಾತೆ ಮಾಡಿಕೊಟ್ಟು ನಗರಸಭೆ ಕಚೇರಿಯಲ್ಲಿ ಆಸ್ತಿ ಮಾಲೀಕರಿಗೆ ವಿತರಣೆ ಮಾಡಿದರು.

ನಗರಸಭೆ ಅಧ್ಯಕ್ಷೆ ಲಕ್ಷ್ಮಿದೇವಮ್ಮ, ಉಪಾಧ್ಯಕ್ಷ ಸೈಯದ್ ಸಾದಿಕ್, ಕಮಿಷನರ್ ಎಂ.ಎಸ್. ಮಹದೇವ್, ಸದಸ್ಯರಾದ ವಿಜಯಕುಮಾರ್, ಕಾಂತರಾಜು (ಕಾಂತಪ್ಪ), ರಾಮದಾಸ್, ಹೇಮ ರಾಜು ಉಪಸ್ಥಿತರಿದ್ದರು. ಎಂ. ಎಸ್. ಮಹದೇವ್, ನಗರಸಭೆ ಆಯುಕ್ತರು ಕನಕಪುರ ಸಾರ್ವಜನಿಕರು ನಗರಸಭೆಗೆ ಅಲೆದಾಡುವುದನ್ನು ಮತ್ತು ಮಧ್ಯವರ್ತಿಗಳ ಹಾವಳಿ ತಪ್ಪಿಸಲು ಇ-ಖಾತಾ ಆಂದೋಲನವನ್ನು ಜನರ ಬಳಿಗೆ ಹೋಗಿ ನಡೆಸುತ್ತಿದ್ದೇವೆ ಮೊದಲ ಪ್ರಯತ್ನದಲ್ಲಿ ಉತ್ತಮ ಸ್ಪಂದನ

ಅಂತರಾಳದಿಂದ... EDITORIAL

ಸಂಭಲ್ ಹಿಂಸಾಚಾರ: ಜಿಲ್ಲಾಡಳಿತ ಮುಚ್ಚಿಡುತ್ತಿರುವುದೇನು?

ಈ ಬಾರಿ ಸಂಸತ್‌ನಲ್ಲಿ ದೊಡ್ಡ ಮಟ್ಟದಲ್ಲಿ ಚರ್ಚೆಯಾಗಬೇಕಾಗಿದ್ದುದು ಅದಾನಿ ಸಂಸ್ಥೆಗಳ ಮೇಲೆ ಅಮೆರಿಕ ಮಾಡಿರುವ ದೋಷಾರೋಪಗಳು ಅದಾನಿ ಅವರು ಸೋಲಾರ್ ಗುತ್ತಿಗೆಗಳನ್ನು ತನ್ನದಾಗಿಸಿಕೊಳ್ಳಲು ನೀಡಿದ್ದಾರೆನ್ನಲಾಗಿರುವ ಲಂಚ ಮತ್ತು ಹೂಡಿಕೆದಾರರಿಗೆ ನೀಡಿರುವ ಸುಳ್ಳುಮಾಹಿತಿಗಳು ಅಮೆರಿಕ ನಡೆಸಿರುವ ತನಿಖೆಯಿಂದ ಬೆಳಕಿಗೆ ಬಂದಿವೆ ಮತ್ತು ಈ ಸಂಬಂಧ ಅದಾನಿಗೆ ಅಲ್ಲಿನ ಆಡಳಿತ ಬಂಧನ ವಾರಂಟ್ ಜಾರಿಗೊಳಿಸಿದೆ ಅದಾನಿಗೂ ಪ್ರಧಾನಿ ಮೋದಿಗೂ ಇರುವ ಸಂಬಂಧ ಜಗಜ್ಜಾಹೀರು. ಅದಾನಿಯ ಕಾರ್ಪೊರೇಟ್ ಅಕ್ರಮಗಳಲ್ಲಿ ಪ್ರಧಾನಿ ಮೋದಿ ಶಾಮೀಲಾಗಿದ್ದಾರೆ ಎನ್ನುವ ಆರೋಪ ಇಂದು ನಿನ್ನೆಯದಲ್ಲ, ಈ ಬಗ್ಗೆ ತನಿಖೆಗೆ ಆಗ್ರಹಿಸಿದಾಗಲೆಲ್ಲ ಅದಾನಿ ನೆರವಿಗೆ ಕೇಂದ್ರ ಸರಕಾರ ಧಾವಿಸಿದೆ. ತನ್ನ ಪ್ರಭಾವವನ್ನು ಬಳಸಿ, ತನಿಖೆಯನ್ನು ವಿಫಲಗೊಳಿಸಿದೆ. ಇದೀಗ ಮತ್ತೆ ಅದಾನಿ ಅಕ್ರಮಗಳು ಮೇಲೆದ್ದು ಬಂದಿವೆ. ವಿರೋಧ ಪಕ್ಷಗಳೆಲ್ಲ ಅದಾನಿ ಪ್ರಕರಣವನ್ನು ಮುಂದಿಟ್ಟುಕೊಂಡು ಒಂದಾಗಿ ಸಂಸತ್ ನಲ್ಲಿ ಗದ್ದಲ ಎಬ್ಬಿಸಲು ಸಿದ್ಧತೆ ನಡೆಸಿದ್ದವು. ಆದರೆ ವಿರೋಧ ಪಕ್ಷಗಳ ಗಮನವನ್ನು ಬೇರೆಡೆಗೆ ತಿರುಗಿಸುವಲ್ಲಿ ಕೇಂದ್ರ ಸರಕಾರ ಕೊನೆಗೂ ಯಶಸ್ವಿಯಾಗಿದೆ. ಅದಾನಿಯ ವಿರುದ್ಧ ಒಂದಾಗಿ ಪ್ರತಿಭಟಿಸಬೇಕಾಗಿದ್ದವಿರೋಧ ಪಕ್ಷಗಳ ನಾಯಕರು, ಅನಿವಾರ್ಯವಾಗಿ ಸಂಭಲ್ ಹಿಂಸಾಚಾರದ ವಿರುದ್ಧ ಧ್ವನಿಯೆತ್ತಬೇಕಾದ ಸ್ಥಿತಿ ನಿರ್ಮಾಣವಾಗಿದೆ.

ದೇಶದ ಗಮನವನ್ನು ಅದಾನಿಯಿಂದ ಬೇರೆಡೆಗೆ ತಿರುಗಿಸಲು ಸಂಭಲ್ ಹಿಂಸಾಚಾರವನ್ನು ಸರಕಾರವೇ ಪ್ರಾಯೋಜಿಸಿದೆ ಎಂದು ವಿರೋಧ ಪಕ್ಷಗಳು ಆರೋಪಿಸುತ್ತಿವೆ. ಜೊತೆಗೆ ಇತ್ತೀಚೆಗೆ ನಡೆದಿರುವ ವಿಧಾನಸಭಾ ಚುನಾವಣೆಯ ಅಕ್ರಮಗಳ ವಿರುದ್ಧವೂ ರಾಜಕೀಯ ಪಕ್ಷಗಳು ಸಂಘಟಿತವಾಗುತ್ತಿದ್ದವು. ಈ ಹೊತ್ತಿಗೆ ಸಂಭಲ್ ಹಿಂಸಾಚಾರ ಮುನ್ನೆಲೆಗೆ ಬಂದಿದೆ. ಮಹಾರಾಷ್ಟ್ರದಲ್ಲಿ ಚಲಾವಣೆಗೊಂಡಿರುವ ಮತಗಳಲ್ಲಿ ವಿರೋಧಾಭಾಸಗಳು ಕಾಣಿಸಿಕೊಂಡಿದ್ದು, ಇವಿಎಂನ್ನು ತಿರುಚಲಾಗಿದೆ ಎಂದು ವಿರೋಧ ಪಕ್ಷಗಳು ಆಕ್ಷೇಪಗಳನ್ನು ವ್ಯಕ್ತಪಡಿಸುತ್ತಿವೆ. ಉದ್ಧವ್ ಠಾಕ್ರೆಯ ಶಿವಸೇನೆ ಮತ್ತು ಕಾಂಗ್ರೇಸ್ ನಮಗೆ ಇವಿಎಂ ಬೇಡ. ಮತ ಪತ್ರಗಳ ಮೂಲಕ ಚುನಾವಣೆಯಾಗಲಿ' ಎಂದು ಪ್ರತಿಭಟನೆಗಳನ್ನು ಆರಂಭಿಸಿವೆ. ಮತ್ತು ಈ ಪಿತೂರಿಯ ಜೊತೆಗೆ ನಮ್ಮ ನ್ಯಾಯ ವ್ಯವಸ್ಥೆಯೂ ಕೈ ಜೋಡಿಸಿದೆ ಎನ್ನುವುದೇ ಸದ್ಯದ ಅತ್ಯಂತ ಕಳವಳಕಾರಿ ಸಂಗತಿಯಾಗಿದೆ. ಒಂದಾನೊಂದು ಕಾಲದಲ್ಲಿ ದೇವಸ್ಥಾನವನ್ನು ಕೆಡವಿ ಮಸೀದಿ ಕಟ್ಟಲಾಗಿದೆ ಎಂದು ಆರೋಪಿಸಿ ಯಾವನೋ ಒಬ್ಬ ಸ್ಥಳೀಯ ನ್ಯಾಯಾಲಯಕ್ಕೆ ಅರ್ಜಿ ಹಾಕಿದ್ದಾನೆ ಎನ್ನುವ ಕಾರಣಕ್ಕೆ ಏಕಾಏಕಿ 500 ವರ್ಷಗಳಷ್ಟು ಹಿಂದಿನ ಮಸೀದಿಯ ಸಮೀಕ್ಷೆ ನಡೆಸಲು ಅತುರಾತುರವಾಗಿ ನ್ಯಾಯಾಲಯ ಆದೇಶಿಸುವುದೇ ನ್ಯಾಯ ವ್ಯವಸ್ಥೆಯ ಅತಿ ದೊಡ್ಡ ಅಣಕವಾಗಿದೆ. ಬಳಿಕ ಇದರ ವಿಚಾರಣಾ ಕಲಾಪಕ್ಕೆ ಸುಪ್ರೀಂ ಕೋರ್ಟ್ ತಡೆಯಾಜ್ಞೆಯನ್ನು ನೀಡಿತು ಎನ್ನುವುದು ಬೇರೆ ವಿಷಯ. ಆದರೆ ಅಷ್ಟರಲ್ಲಿ ಉತ್ತರ ಪ್ರದೇಶ ಸರಕಾರಕ್ಕೆ ಏನು ನಡೆಯಬೇಕಾಗಿತ್ತೋ ಅದು ನಡೆದು ಹೋಗಿತ್ತು. ಸ್ಥಳೀಯ ಅಮಾಯಕ ಎಳು ಮಂದಿ ಮುಸ್ಲಿಮರನ್ನು ಪೊಲೀಸರ ಗುಂಡುಗಳು ಬರ್ಬರವಾಗಿ ಕೊಂದು ಹಾಕಿದ್ದವು. ಇದೀಗ ಈ ಹಿಂಸೆ ಹೇಗೆ ನಡೆಯಿತು, ಯಾಕೆ ನಡೆಯಿತು ಎನ್ನುವುದು ತನಿಖೆಗೊಳಗಾಗಬೇಕಾಗಿದೆ. ಘಟನೆಗೆ ಸಂಬಂಧಿಸಿ ಸ್ಥಳೀಯ ಜಿಲ್ಲಾಡಳಿತ ಕೂಡ ಆರೋಪಿ ಸ್ಥಾನದಲ್ಲಿ ನಿಂತಿರುವುದರಿಂದ ಸಂತ್ರಸ್ತರು ಏನು ಹೇಳುತ್ತಾರೆ ಎನ್ನುವುದು ಮುಖ್ಯವಾಗುತ್ತದೆ. ಜಿಲ್ಲಾಡಳಿತದ ಪ್ರಕಾರ, ದುಷ್ಕರ್ಮಿಗಳು ಪೊಲೀಸರ ವಿರುದ್ಧ ಶಸ್ತ್ರಾಸ್ತ್ರಗಳ ಜೊತೆಗೆ ದಾಳಿ ನಡೆಸಿದರು. ಕಲ್ಲು ತೂರಾಟ ನಡೆಸಿದರು ಮತ್ತು ಅಕ್ರಮ ಬಂದೂಕುಗಳನ್ನು ಪ್ರಯೋಗಿಸಿದರು ಎನ್ನುವುದಾಗಿದೆ. ಆದರೆ ಸ್ಥಳೀಯರು ಬೇರೆಯೇ ಆರೋಪಗಳನ್ನು ಮಾಡುತ್ತಿದ್ದಾರೆ. ಮುಖ್ಯವಾಗಿ ಸಮೀಕ್ಷೆಗೆ ಆಗಮಿಸಿದ ಅಧಿಕಾರಿಗಳ ಜೊತೆಗೆ ಸಂಘಪರಿವಾರ ಮುಖಂಡರು, ಕಾರ್ಯಕರ್ತರೂ ಸೇರಿಕೊಂಡಿದ್ದರು ಎನ್ನುವುದು ಅವುಗಳಲ್ಲಿ ಒಂದು ಸಮೀಕ್ಷೆ ನಡೆಸುವ ಸಂದರ್ಭದಲ್ಲಿ ಅಧಿಕಾರಿಗಳ ಜೊತೆಗಿದ್ದ ಗುಂಪು ಜೈ ಶ್ರೀರಾಮ್ ಎನ್ನುವ ಘೋಷಣೆಗಳನ್ನು ಕೂಗುತ್ತಿತ್ತು. ಅಂದರೆ, ಸಮೀಕ್ಷೆ ನಡೆಸುವ ಮಂದಿ ಒಂದು ನಿರ್ದಿಷ್ಟ ಅಜೆಂಡಾವನ್ನು ಇಟ್ಟುಕೊಂಡೇ ಅಲ್ಲಿಗೆ ಬಂದಿದ್ದರು. ಅವರು ಸಮೀಕ್ಷೆಯ ನೆಪದಲ್ಲಿ ಸ್ಥಳೀಯ ಮುಸ್ಲಿಮರನ್ನು ಪ್ರಚೋದಿಸಲು ಗರಿಷ್ಠ ಪ್ರಯತ್ನ ನಡೆಸಿದ್ದಾರೆ.

ಉಳಿದಂತೆ ಪೊಲೀಸರಿಗೆ ಗೋಲಿಬಾರ್ ನಡೆಸಲು ಅನಿವಾರ್ಯವಾದುದು ಹೇಗೆ? ಗೋಲಿಬಾರ್ ನಿಂದ ಮೃತಪಟ್ಟವರಲ್ಲಿ ಹಲವರು ಪ್ರತಿಭಟನೆಯಲ್ಲಿ ಭಾಗವಹಿಸಿರಲೇ ಇಲ್ಲ ಎಂದು ಸ್ಥಳೀಯರು ಆರೋಪಿಸುತ್ತಿದ್ದಾರೆ. ಇಷ್ಟಾದರೂ ಅವರಡೆ ಪೊಲೀಸರು ಯಾಕೆ ಗೋಲಿಬಾರ್ ನಡೆಸಿದರು ಸಮೀಕ್ಷೆ ನಡೆಯುವ ಸಂದರ್ಭದಲ್ಲಿ ಇಂತಹ ಅನಾಹುತಗಳು ಸಂಭವಿಸಬಹುದು ಎನ್ನುವ ಮುನ್ನೆಚ್ಚರಿಕೆ ಪೊಲೀಸರಲ್ಲಿ ಇರಲಿಲ್ಲವೇ? ಮೊದಲಾದ ಪ್ರಶ್ನೆಗಳಿಗೆ ಉತ್ತರ ಸಿಗಬೇಕಾದರೆ ಸತ್ಯಾನ್ವೇಷಣೆಗಾಗಿ ಮಾನವ ಹಕ್ಕು ಸಂಘಟನೆಗಳಿಗೆ ಅವಕಾಶ ನೀಡಬೇಕು. ಆದರೆ ಹಿಂಸಾಚಾರ ಸಂಭವಿಸಿದ ದಿನದಿಂದ ಸ್ಥಳಕ್ಕೆ ಯಾವುದೇ ಪ್ರಜಾಸತ್ತಾತ್ಮಕವಾದ ಸಂಘಟನೆಗಳನ್ನು ಭೇಟಿ ನೀಡಲು ಜಿಲ್ಲಾಡಳಿತ ಅವಕಾಶ ನೀಡುತ್ತಿಲ್ಲ. ಸ್ಥಳೀಯ ರಾಜಕೀಯ ಪಕ್ಷಗಳ ನಾಯಕರು ಭೇಟಿ ನೀಡುವ ಪ್ರಯತ್ನ ನಡೆಸಿದರಾದರೂ ಅವರನ್ನು ಪೊಲೀಸರು ಬಂಧಿಸಿದ್ದಾರೆ.

ಉತ್ತರ ಪ್ರದೇಶದಲ್ಲಿ ನಡೆದಿರುವ ಉಪಚುನಾವಣೆಗಳಲ್ಲೂ ಅಕ್ರಮಗಳು ನಡೆದಿರುವುದಾಗಿ ವಿರೋಧ ಪಕ್ಷಗಳು ಆರೋಪಿಸುತ್ತಿವೆ ಮತ್ತು ಇದರ ವಿರುದ್ಧ ಸಂಘಟಿತ ಹೋರಾಟಗಳನ್ನು ಶುರು ಮಾಡಿವೆ. ಇದರ ಜೊತೆ ಜೊತೆಗೇ ಅದಾನಿ-ಮೋದಿ ಸಂಬಂಧವನ್ನು ಮುಂದಿಟ್ಟುಕೊಂಡು ರಾಹುಲ್ ಗಾಂಧಿ ಸಂಸತ್‌ನಲ್ಲಿ ಪ್ರತಿಭಟನೆಗೆ ಸಿದ್ಧತೆ ನಡೆಸುತ್ತಿದ್ದರು. ಅದಾನಿಯನ್ನು ಬಂಧಿಸಬೇಕು ಎಂದು ಅವರು ಸರಕಾರವನ್ನು ಒತ್ತಾಯ ಮಾಡುತ್ತಿದ್ದರು. ಇವೆಲ್ಲವುಗಳಿಂದ ಪಾರಾಗುವುದಕ್ಕಾಗಿಯೇ ಸಂಭಲ್ ಹಿಂಸಾಚಾರವನ್ನು ಸೃಷ್ಟಿಸಲಾಗಿದೆ ಎಂದು ಅನುಮಾನಿಸಲಾಗುತ್ತಿದೆ. ಸಮಾಜವಾದಿ ಪಕ್ಷದ ನಾಯಕ ಅಖಿಲೇಶ್ ಯಾದವ್ ಅವರು ಸಂಸತ್‌ನಲ್ಲಿ ಸಂಭಲ್ ಹಿಂಸಾಚಾರವನ್ನು ಪ್ರಸ್ತಾಪಿಸುತ್ತಾ ಇದೊಂದು ಯೋಜಿತ ಪಿತೂರಿ ಎಂದು ಆರೋಪಿಸಿದ್ದಾರೆ

ಕಲಾ ಸಾಹಿತ್ಯ

ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ, ವಿಮರ್ಶಕರು

ಶಿಲ್ಪಿ, ಭಾರತರತ್ನ ಡಾ:ಬಾಬಾ ಸಾಹೇಬ್ ಅಂಬೇಡ್ಕರ್ ರವರ 68 ನೇ ವರ್ಷದ ಪುಣ್ಯಸ್ಮರಣೆ

• ಉದಯವಾಹಿನಿ, ವಿಶೇಷ

ಡಾ:ಬಿಆರ್ ಅಂಬೇಡ್ಕರ್ ರವರು 1891 ಏಪ್ರಿಲ್ 14 ರಂದು ಮಧ್ಯಪ್ರದೇಶದ ಮೋಹಿ ಎಂಬಲ್ಲಿ ಜನಿಸಿದರು. ತಂದೆ ರಾಮ್ಜೀ ಸತ್ಪಾಲ್ ತಾಯಿ ಭೀಮಾಬಾಯಿ.

ಅಂಬೇಡ್ಕರ್ ರವರು 06ನೇ ವಯಸ್ಸಿನಲ್ಲಿದ್ದಾಗ ಅವರ ತಾಯಿಯನ್ನು ಮತ್ತು 21ನೇ ವಯಸ್ಸಿನಲ್ಲಿ ತನ್ನ ತಂದೆಯನ್ನು ಕಳೆದುಕೊಂಡರು. ನಂತರ ತನ್ನ ತಂದೆಯ ತಂಗಿ ಸೋದರತ್ತೆಯಾದ ಮೀರಾಬಾಯಿರವರ ಆಶ್ರಯದಲ್ಲಿ ಬೆಳೆದರು.

ಬಾಲ್ಯದಲ್ಲಿ ಸಂಸ್ಕಾರ, ಸದ್ಬುದ್ಧಿ, ಸನ್ಮಾರ್ಗ, ಶಿಸ್ತನ್ನು ಮೈಗೂಡಿಸಿಕೊಂಡು, ಅಸ್ಪೃಶ್ಯ ನೋವನ್ನು ಮರೆತು ತನ್ನ ಪ್ರತಿಭೆಯಿಂದ ಗುಣಮಟ್ಟದ ಶಿಕ್ಷಣವನ್ನು ಪಡೆದು, ಹೆಚ್ಚಿನ ವ್ಯಾಸಂಗವನ್ನು ವಿದೇಶದಲ್ಲಿ ಮುಂದುವರಿಸಲು ಕೆಲವು ಉದಾರದಾನಿಗಳು ನೆರವಾದರು. ಅವರ ಕಠಿಣ ಶ್ರಮಕ್ಕೆ ತಕ್ಕಂತೆ ಒಳ್ಳೆಯ ಸೌಕರ್ಯಗಳು ದೊರೆತು ಪ್ರತಿಭಾವಂತ ವಿದ್ಯಾರ್ಥಿಯಾಗಿ ಕಾನೂನು ಪದವೀಧರರಾಗಿ ಹಾಗೂ ಅನೇಕ ಡಾಕ್ಟರೇಟ್ ಪದವಿಗಳನ್ನು ಗಳಿಸಿರುವ ಪೈಕಿ ಒಬ್ಬರಾಗಿರುತ್ತಾರೆ. ಶತ-ಶತಮಾನಗಳಿಂದ ಸಾಮಾಜಿಕ ಅನ್ಯಾಯಗಳಿಂದ ನಲುಗಿ ಹೋಗಿದ್ದ ದಲಿತರನ್ನು ಜಾಗೃತಗೊಳಿಸಿ ಅವರಿಗೆ ನ್ಯಾಯವಾಗಿ ಲಭಿಸಬೇಕಾಗಿದ್ದ ನಾಗರೀಕ ಹಕ್ಕುಗಳು, ಸೌಲಭ್ಯಗಳು, ರಾಜಕೀಯ ಪ್ರಾತಿನಿಧ್ಯಗಳನ್ನು ದೊರಕಿಸಿಕೊಳ್ಳಲು ಅವರನ್ನು ಹೋರಾಟಕ್ಕೆ ಸಜ್ಜುಗೊಳಿಸಿದರು. ಭಾರತೀಯ ಸಮಾಜದಿಂದ ಅಸ್ಪೃಶ್ಯ ಎಂಬ ಕಳಂಕವನ್ನು ತೊಡೆದುಹಾಕುವುದು ಅವರ ಬಾಳಿನ ಮುಖ್ಯ ಗುರಿ ಮತ್ತು ಉದ್ದೇಶವಾಗಿತ್ತು. ದಲಿತರನ್ನು ಸೈನ್ಯಕ್ಕೆ ಸೇರಿಸಿಕೊಳ್ಳದಿರುವುದರ ಬಗ್ಗೆ ಬ್ರಿಟೀಷ್ ಸರ್ಕಾರವನ್ನು ಹಾಗೂ ಮೇಲಾಜ್ಞಿಯವರಿಂದ ಆಗುವ ಶೋಷಣೆಗೂ ಕೂಡ ಬಹಳವಾಗಿ ಖಂಡಿಸಿದರು. ಅಷ್ಟೇ ಅಲ್ಲದೇ ಯಾವ ಧರ್ಮದಲ್ಲಿ ನಮಗೆ ಪ್ರೀತಿ ಆದರ ಸಮಾನತೆಗಳು ದೊರೆಯಲಿಲ್ಲವೋ ಅಂತಹ ಧರ್ಮವನ್ನು ಬಿಟ್ಟು ಸಮತಾ ಭಾವನೆಯಿಂದ ಕಾಣುವ ಧರ್ಮವನ್ನು ಸೇರಬೇಕೆಂದು ಸಲಹೆ ಮಾಡಿದರು. ಅಂಬೇಡ್ಕರ್ ಅವರ ಈ ಸಲಹೆ ಇಡೀ ರಾಷ್ಟ್ರವನ್ನು ದಿಗ್ಭ್ರಮೆಗೊಳಿಸಿತು. ಸ್ವತಂತ್ರ ಭಾರತದ ಪ್ರಧಾನಿ ನೆಹರುರವರ ಮಂತ್ರಿಮಂಡಲದಲ್ಲಿ ಕಾನೂನು ಸಚಿವರಾದರು. ಅಂಬೇಡ್ಕರ್ ಅವರ ಪಾಲಿಗೆ ಮತ್ತೊಂದು ಗುರುತರವಾದ ಹೊಣೆಗಾರಿಕೆ ಬಂದಿತ್ತು. ಸ್ವತಂತ್ರ ಭಾರತದ ಸಂವಿಧಾನ ರಚಿಸಲು ಕರಡು ಸಮಿತಿ ಅಧ್ಯಕ್ಷರಾಗಿ ಅಂಬೇಡ್ಕರ್ ರವರು ಆಯ್ಕೆಗೊಂಡರು.

ಅಂಬೇಡ್ಕರ್ ಅವರು ಹಲವಾರು ದೇಶಗಳ ಸಂವಿಧಾನವನ್ನು ಅಧ್ಯಯನ ಮಾಡಿ ವೈವಿಧ್ಯಮಯವಾದ ಭಾರತಕ್ಕೆ ಹೊಂದುವಂತಹ ರಾಜಕೀಯ, ಸಾಮಾಜಿಕ-ಆರ್ಥಿಕ ಅಸಮಾನತೆಗಳನ್ನು ಹೋಗಲಾಡಿಸುವಂತ ಶಾಸನಗಳನ್ನು ಜಾರಿಗೊಳಿಸಿ, ಸರ್ವ ಸಮಾನತೆಯ ಸಮಾಜವನ್ನು ರಚಿಸಲು ಸಾಧ್ಯವಾಗುವಂಥ ಭಾರತ ಸಂವಿಧಾನವನ್ನು ರೂಪಿಸಿ ಕೊಟ್ಟು ಸಂವಿಧಾನ ಶಿಲ್ಪಿ ಎಂಬ ಬಿರುದಿಗೆ ಪಾತ್ರರಾದರು. ಸ್ವಾತಂತ್ರ್ಯ ಹೋರಾಟದ ಚಳುವಳಿಯಲ್ಲಿ ಭಾಗವಹಿಸಿದ್ದರೂ ಸಹ ಇವರಿಗೆ ಸೆರೆಮನೆ ವಾಸಕ್ಕೆ ಕಳುಹಿಸಲು ಬ್ರಿಟಿಷ್ ಸರ್ಕಾರಕ್ಕೆ ಅರ್ಹತೆ ಇರಲಿಲ್ಲ. ಕಾರಣ ಜಗತ್ತಿನ ಎಲ್ಲಾ ದೇಶಗಳ ಸಂವಿಧಾನದ ಬಗ್ಗೆ ಸಂಪೂರ್ಣವಾಗಿ ಅಧ್ಯಯನ ಮಾಡಿರುವವರು ಹಾಗೂ ಇಂಗ್ಲೆಂಡಿನಲ್ಲಿ ಕಾನೂನು ಶಿಕ್ಷಣದಲ್ಲಿ ಡಾಕ್ಟರೇಟ್ ಪಡೆದವರು ಮಾತ್ರ ಬ್ರಿಟಿಷ್ ಆಫೀಸರ್ಸ್ ಕ್ಲಬ್ ನಲ್ಲಿ ಸಜೀವ ಸದಸ್ಯರಾಗಿ ಆಯ್ಕೆಯಾಗಿದ್ದರು. ಆದ್ದರಿಂದ ಅಲ್ಲಿಂದ ಅನುಮತಿ ಇಲ್ಲದೇ ಅವರಿಗೆ ಮುಟ್ಟುವ ಅಧಿಕಾರ ಬ್ರಿಟಿಷ್ ಸರ್ಕಾರಕ್ಕೆ ಇರಲಿಲ್ಲ. ಇವರು ಒಬ್ಬ ಏಕೈಕ ಭಾರತೀಯ ಸದಸ್ಯರು ಹೌದು. 1956 ಮೇ 27ರಂದು ಬುದ್ಧ ಜಯಂತಿಯಂದು ಡಾ:ಅಂಬೇಡ್ಕರ್ ಅವರು ಬೌದ್ಧಧರ್ಮಕ್ಕೆ ಸೇರಿಕೊಳ್ಳುವ ಮೂಲಕ ಅವರೊಡನೆ ಸುಮಾರು 3 ಲಕ್ಷ ಅನುಯಾಯಿಗಳು ಸ್ವಇಚ್ಛೆಯಿಂದ ಬೌದ್ಧಧರ್ಮಕ್ಕೆ ಸೇರಿಕೊಂಡರು. 1956 ಡಿಸೆಂಬರ್ 06ರಂದು ಡಾ:ಬಿಆರ್ ಅಂಬೇಡ್ಕರ್ ಅವರು ತನ್ನ 65 ನೇ ವಯಸ್ಸಿನಲ್ಲಿ ರಾತ್ರಿ ನಿದ್ರಾವಸ್ಥೆಯಲ್ಲಿದ್ದಾಗ ಇಹ ಲೋಕವನ್ನು ತ್ಯಜಿಸಿದರು. ಭಾರತದ ಸಂವಿಧಾನ ಶಿಲ್ಪಿ, ಸಮಾಜ ಸುಧಾರಕ, ಅಸ್ಪೃಶ್ಯ ಜನಾಂಗದ ನಾಯಕ, ಮಾನವ ಹಕ್ಕುಗಳನ್ನು ಕಾಪಾಡಲು ಶ್ರಮಿಸಿದ ಅಪ್ರತಿಮ ಹೋರಾಟಗಾರ ಬಾಬಾ ಸಾಹೇಬ್ ಅಂಬೇಡ್ಕರ್ ರವರ ಸಾವಿಗಾಗಿ ಇಡೀ ದೇಶ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಿತು. 1990 ರಲ್ಲಿ ಡಾ:ಬಿಆರ್ ಅಂಬೇಡ್ಕರ್ ರವರ ಮರಣೋತ್ತರವಾಗಿ ಭಾರತ ಸರ್ಕಾರ ಈ ಮಹಾನ್ ನಾಯಕರಿಗೆ ಭಾರತ ರತ್ನ ಪ್ರಶಸ್ತಿ ನೀಡಿ ಗೌರವಿಸಿತು.

ಇಂತಹ ಮಹಾನ್ ಮಾನವತಾವಾದಿ ಎಲ್ಲಾ ಧರ್ಮವೂ ಒಂದೇ ಎಂಬ ಘೋಷವಾಕ್ಯದಲ್ಲಿ ತಿಳಿಸಿರುವ, ಕಾಲ ದೇಶ, ಜಾತಿ, ಧರ್ಮ, ಪಕ್ಷ ಮೀರಿ ಬಾಳಿ ಬದುಕಿ ಮನುಕುಲಕ್ಕೆ ಮಿಗಿಲಾಗಿ ದೀನದಲಿತರ ಬಾಳಿಗೆ ಆಶಾಕಿರಣ ಹಿರಿಯ ಚೇತನ ಅವರೇ ಜ್ಞಾನ ಸಂದೇಶ ಅಜರಾಮರ ಹಾಗೂ ಸತ್ಯ ಸಂದೇಶ ಸಂಜೀವಿನಿ. ಭಾರತೀಯರಾದ ನಮ್ಮೆಲ್ಲರ ಜವಾಬ್ದಾರಿ, ಹೊಣೆಗಾರಿಕೆ ಮತ್ತು ಕರ್ತವ್ಯ ಎಂದು ತಿಳಿದು ಡಾ:ಬಿಆರ್ ಅಂಬೇಡ್ಕರ್ ಅವರ 68ನೇ ವರ್ಷದ ಪುಣ್ಯಸ್ಮರಣೆ ದಿನವಾದ ಇಂದು ಅವರನ್ನು ಸ್ಮರಿಸಿ ನೆನೆಯುತ್ತಾ ಅವರ ಆದರ್ಶಗಳನ್ನ ಹಾಗೂ ಅವರ ದೂರದೃಷ್ಟಿ ಚಿಂತನೆಗಳನ್ನು ಸಾರ್ವಜನಿಕ ಆಡಳಿತದಲ್ಲಿ ಹಾಗೂ ಪ್ರತಿಯೊಬ್ಬರ ಜೀವನದ ಬದುಕಿನಲ್ಲಿ ಅಳವಡಿಸಿಕೊಂಡರೆ ಅದುವೇ ಅವರಿಗೆ ಕೊಡಬೇಕಾದ ಗೌರವ.

ಅಷ್ಟೇ ಅಲ್ಲದೇ ಯಾವ ಧರ್ಮದಲ್ಲಿ ನಮಗೆ ಪ್ರೀತಿ ಆದರ ಸಮಾನತೆ

1935 ರಲ್ಲಿ ಅಂಬೇಡ್ಕರ್ ರವರಿಗೆ 44 ವರ್ಷ ವಯಸ್ಸಿದ್ದಾಗ ಅವರ ಪ್ರೀತಿಯ ಧರ್ಮಪತ್ನಿ ರಮಾಬಾಯಿರವರು ತೀರಿಕೊಂಡರು. ತಮ್ಮ ಜನಾಂಗ ವಿದ್ಯಾವಂತರಾಗಬೇಕು ಎಂದು ತಿಳಿಸಿ, ಆ ಮೂಲಕ ಉನ್ನತವರ್ಗದವರ ಆಶ್ರಯಕ್ಕೆ ಕೈಚಾಚದೇ ಸ್ವಾಭಿಮಾನದಿಂದ ಬಾಳುವುದನ್ನು ಕಲಿಯ ಬೇಕೆಂದು ತಿಳಿಸಿದರು.

ಕುಟುಂಬವೊಂದಕ್ಕೆ ಕುಡಿಯುವ ನೀರಿಗೆ 20,000 ರೂ. ಬೇಕು

• ಉದಯವಾಹಿನಿ ಬೆಂಗಳೂರು

• ಉದಯವಾಹಿನಿ ಚಿತ್ರ

ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರು ಬೆಂಗಳೂರಿನ ನೀರಿನ ತೀವ್ರ ಸಮಸ್ಯೆ ಬಗ್ಗೆ ರಾಜ್ಯಸಭೆಯಲ್ಲಿ ಪ್ರಸ್ತಾಪಿಸಿದ್ದು ನಾಲ್ಕು ಜನರ ಕುಟುಂಬವೊಂದು ತಿಂಗಳಿಗೆ 20,000 ರೂ.ಗಳನ್ನು ನೀರಿಗಾಗಿ ಖರ್ಚು ಮಾಡಬೇಕಾದ ಅನಿವಾರ್ಯತೆ ಇದೆ ಎಂದು ಧ್ವನಿಯೆತ್ತಿದ್ದಾರೆ. ದೇಶದ ಪ್ರಮುಖ ನಗರಗಳಲ್ಲಿ ಒಂದಾಗಿರುವ, ಭಾರತದ ಮಾಹಿತಿ ತಂತ್ರಜ್ಞಾನ ರಾಜಧಾನಿ ಆಗಿರುವ ಬೆಂಗಳೂರು ಎದುರಿಸುತ್ತಿರುವ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಕೇಂದ್ರ ಸರ್ಕಾರದ ಗಮನ ಸೆಳೆದರು. ಬೆಂಗಳೂರು ನಗರ ಅಗಾಧವಾಗಿ ಬೆಳೆಯುತ್ತಿದೆ. ಉದ್ಯೋಗ ಅರಸಿ ದೇಶದ ಎಲ್ಲಾ ಮೂಲೆಗಳಿಂದ ಜನರು ಅಲ್ಲಿಗೆ ಹೋಗುತ್ತಿದ್ದಾರೆ. ಎಲ್ಲರಿಗೂ ಆಶ್ರಯ ನೀಡುವ ಬೆಂಗಳೂರು ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ಗಂಭೀರವಾಗಿದೆ ಎಂದು ಮಾಜಿ ಪ್ರಧಾನಿ ಹೆಚ್ ಡಿ ದೇವೇಗೌಡ್ರು ಹೇಳಿದ್ದಾರೆ.

1.45 ಕೋಟಿ ಜನಸಂಖ್ಯೆ ಇರುವ ಬೆಂಗಳೂರಿಗೆ 16 ಟಿಎಂಸಿ ಅಡಿಯಷ್ಟು ಕಾವೇರಿ ನೀರನ್ನು ಪೂರೈಕೆ ಮಾಡಲಾಗುತ್ತಿದೆ. ಆದರೆ, ನಗರದ ಬೇಡಿಕೆಗೆ ಹೋಲಿಸಿದರೆ ಈ ನೀರು ಬಹಳ ಕಡಿಮೆ. ಇದನ್ನೇ ಅಸ್ತ್ರ ಮಾಡಿಕೊಂಡಿರುವ ಟ್ಯಾಂಕರ್ ಮಾಫಿಯಾ ಜನರನ್ನು ಸುಲಿಗೆ ಮಾಡುತ್ತಿದೆ. ಒಂದು ಟ್ಯಾಂಕರ್ ನೀರಿಗೆ ?3000 ತೆರಬೇಕಿದೆ. ಇದು ಎಷ್ಟು ಅನ್ಯಾಯ ಎಂದರೆ ಕೇವಲ ನಾಲ್ಕು ಜನರಿರುವ ಒಂದು ಕುಟುಂಬ ಪ್ರತೀ ತಿಂಗಳು ನೀರಿಗಾಗಿ ರೂ.20,000 ಖರ್ಚು ಮಾಡಬೇಕಿದೆ. ಇದು ಕಳವಳಕಾರಿ ಎಂದು ಹೆಚ್ ಡಿ ದೇವೇಗೌಡ್ರು ಆತಂಕ ವ್ಯಕ್ತಪಡಿಸಿದರು. ಈ ಹಿನ್ನೆಲೆಯಲ್ಲಿ ಎಲ್ಲರೂ ರಾಜಕೀಯ ಬದಿಗಿಟ್ಟು ಮೇಕೆದಾಟು ಯೋಜನೆ ಬಗ್ಗೆ ಬೆಂಬಲ ನೀಡಬೇಕಿದೆ. ಈ ಯೋಜನೆ ಕಾರ್ಯಗಾಯವಾದರೆ ಈ ಸಮಸ್ಯೆಗೆ ಮುಕ್ತಿ ದೊರೆಯಲಿದೆ ಎಂದು ಮಾಜಿ ಪ್ರಧಾನಿ ಎಚ್.ಡಿ. ದ

ಗಾಳಿ ಮಳೆ ಹೊಡೆತಕ್ಕೆ ಭತ್ತ ನೆಲಕಚ್ಚಿ ಸಂಪೂರ್ಣ ಹಾನಿ

ಫೆಂಗಲ್ ಮಳೆಯಿಂದ ಬೆಳೆದ ಭತ್ತ, ರಾಗಿ, ತೊಗರಿ ಸೇರಿದಂತೆ ಇತರ ಬೆಳೆಗಳು ಸಮೃದ್ಧವಾಗಿ ಬೆಳೆಯುವುದಕ್ಕೆ ಸಾಧ್ಯವಾಗುತ್ತಿಲ್ಲ

• ವೀರೇಶ್ ಹೊಸಳ್ಳಿ
• ಉದಯವಾಹಿನಿ, ಸಿಂಧನೂರು

ಉದಯವಾಹಿನಿ ಚಿತ್ರ

ಕೈಗೆ ಬಂದ ತುತ್ತು ಬಾಯಿಗೆ ಬಾರದಂತೆ

ಭತ್ತ ಬೆಳೆದ ರೈತರು ಇನ್ನೇನು ಕಟಾವು ಮಾಡಬೇಕು ಅನ್ನುವುದರಲ್ಲಿ ಕಟಾವು ಗೆ ಅಡ್ಡಿ ಪಡಿಸಿದ ಫೆಂಗಲ್ ಮಳೆರಾಯ, ಗಾಳಿ ಮಳೆ ಹೊಡೆತಕ್ಕೆ ಭತ್ತ ನೆಲಕಚ್ಚಿ ಸಂಪೂರ್ಣ ಹಾನಿಯಾಗಿದ್ದು. ಒಂದು ಕಡೆಗೆ ಯಾದರೆ ಮತ್ತೊಂದು ಕಡೆ ಮಿಷನ್ ಸಿಗದೇ ಆತಂಕದಲ್ಲಿ ರೈತ. ಸುಮಾರು 45 – 50 ವರ್ಷಗಳ ಹಿಂದೆ ಮಳೆಗಾಲದಲ್ಲಿ ಸರಿ ಯಾಗಿ ಮಳೆ ಆಗುತ್ತಿತ್ತು. ಯಾವುದೇ ಕಟಾವು ಮಿಷನ್ ಇಲ್ಲದೆ. ಕೂಲಿಕಾರರು ಭತ್ತವನ್ನು ತಿಂಗಳುಗಟ್ಟಲೆ. ಹೊಲದಲ್ಲಿ ಭತ್ತ ರಾಶಿ ಮಾಡುತ್ತಾ. ಯಾವುದೇ ಸೈಕ್ಲೋನ್. ಫೆಂಗಲ್ ತರ ಮಳೆ ಬರುತ್ತಿರಲಿಲ್ಲ. ಕಳೆದ ಐದಾರು ವರ್ಷಗಳಿಂದಲೂ ಸುನಾಮಿ, ಸೈಕ್ಲೋನ್, ಫೆಂಗಲ್, ಈ ತರದ ವರುಣ ಬರುತ್ತಿರುವುದರಿಂದ ಇಡೀ ದೇಶಕ್ಕೆ ಅನ್ನ ನೀಡುವ ಅನ್ನದಾತನ ಬದುಕು ನಲ್ಲೂ ಆಟ ಆಡುತ್ತಾ. ಫೆಂಗಲ್ ಮಳೆರಾಯ ಒಂದು ವಾರದಿಂದ ಪ್ರತಿ ನಿತ್ಯವೂ ಸುರಿಯುತ್ತಿರುವುದು ಎಲ್ಲೆಂದರಲ್ಲಿ ರೈತ ಬೆಳೆದ ಭತ್ತ, ರಾಗಿ, ತೊಗರಿ ಸೇರಿದಂತೆ ಇತರರ ಸಮೃದ್ಧವಾಗಿ ಬೆಳೆಯುವುದಕ್ಕೆ ಸಾಧ್ಯವಾಗುತ್ತಿಲ್ಲ. ಕೈಗೆ ಬಂದ ತುತ್ತು ಬಾಯಿಗೆ ಬಾರದಂತೆ ಆಗಿದೆ ರೈತರ ಬದುಕು. ಆದ್ದರಿಂದ ಎಕರೆಗೆ ಕನಿಷ್ಠ 20 ರಿಂದ 25 ಸಾವಿರ ರೂ ಪರಿಹಾರ ನೀಡಬೇಕು. ಭತ್ತಕ್ಕೆ 01ಸಾವಿರ ರಿಂದ 15 ನೂರು ರೂ ಬೆಂಬಲ ಬೆಲೆ ಘೋಷಣೆ ಮಾಡಿ ರೈತರ ಸಾಲ ಸೋಲದಿಂದ ರಕ್ಷಿಸಬೇಕಾಗಿದೆ ಎಂದು ರೈತ ಗುಡಿಯಪ್ಪ ಹೊಸಳ್ಳಿ ಅವರು ಪತ್ರಿಕೆಗೆ ಹೇಳಿಕೆ ನೀಡಿದರು.

ಮತ್ತು ಭತ್ತ ಕಟಾವು ಯಂತ್ರ ಮಾಲೀಕರು ಸಹ ಜಿಲ್ಲಾಧಿಕಾರಿ ನೀಗದಿ ಪಡಿಸಿದ ಎಕರೆ 2450 ರೂ ಮೀರಿ ಯಾರಾದರೂ ರೈತರಿಂದ ಹಣ ವಸೂಲಿ ಮಾಡಿದ್ದ ಏನಾದರೂ ಕಂಡು ಬಂದರೆ ತಕ್ಷಣ ಕ್ರಮ ಕೈಗೊಳ್ಳಲಾಗುವುದು
– ಅರುಣ್ ಕುಮಾರ್ ಎಚ್. ದೇಸಾಯಿ
ತಾಲ್ಲೂಕು ತಹಶೀಲ್ದಾರ್

ಸಂಕಷ್ಟ ರೈತರಿಗೆ ಯಾವ ರೀತಿ ಪರಿಹಾರ ಮುಂದಾಗಿದ್ದಾರೆ ?

ತಾಲ್ಲೂಕು ತಹಶೀಲ್ದಾರ್ ಅವರಿಗೆ ದೂರವಾಣಿ ಮೂಲಕ ಸಂಪರ್ಕಿಸಿದಾಗ.ಸುಮಾರು 23 ಸಾವಿರ ಎಕರೆ ಮಳೆಯಿಂದ ಹಾನಿಯಾಗಿದ್ದು. ಸಮೀಕ್ಷೆ ಮಾಡಿ ಈಗಾಗಲೇ ಜಿಲ್ಲಾಧಿಕಾರಿಗಳಿಗೆ ವರದಿಯನ್ನು ಕಳಿಸಿದ್ದೇವೆ. ಡೇಟ್ ಆಫ್ನಲ್ಲಿ ಓಪನ್ ಮಾಡಿದ್ದಾರೆ. ಎಲ್ಲವನ್ನು ಎಂಟ್ರಿ ಮಾಡಿ ರವಾನೆ ಮಿನಿಸ್ಟರ್ ಹೇಳಿದ ಹಾಗೆ ಇನ್ನೊಂದು ವಾರ ಅಥವಾ 10 ದಿನದಲ್ಲಿ ಪರಿಹಾರ ಹಣವನ್ನು ರೈತರ ಖಾತೆಗೆ ಮಾಡಲಾಗುತ್ತದೆ.

ಮಾರುಕಟ್ಟೆಯಲ್ಲಿ ಭತ್ತದ ಬೆಲೆ ಕುಸಿತ ಅಕಾಲಿಕ ವರ್ಣ

ಮುಸುಕಿನ ಮೋಡದಿಂದ ಅಲ್ಪ ಸ್ವಲ್ಪ ಕಟಾವು ಮಾಡಿದ ಭತ್ತವನ್ನು ಮುಚ್ಚಿ ಹಾಕಿದ್ದು. ಬಿಸಿಲು ಬಾರದೆ ಭತ್ತ ಸರಿಯಾಗಿ ಒಣಗಿದೆ ಇರುವುದೇ ಭತ್ತದ ಬೆಲೆ ಏರಿಕೆ ಕಂಡು ಬರುತ್ತಿಲ್ಲ. ಯಾರು ಸಹ ಭತ್ತ ಖರೀದಿಗೆ ಮುಂದೆ ಬರುತ್ತಿಲ್ಲ. ಎಂದು ರೈತರ ಸಮಸ್ಯೆ ಎದುರಿಸುತ್ತಿದ್ದಾರೆ. ಈ ಸಮಸ್ಯೆಗೆ ಸ್ಥಳಿಯ ಶಾಸಕರು ಹಂಪನಗೌಡ ಬಾದರ್ಲಿ.ಹಾಗೂ ಎಂಎಲ್ಸಿ ಬಸನಗೌಡ ಬಾದರ್ಲಿ ಅವರು ರೈತರು ಪರವಾಗಿ ನಿಲ್ಲುತ್ತಾವರೂ ಅಥವಾ ಇಲ್ಲೋ ಕಾದು ನೋಡಬೇಕಾಗಿದೆ.

ಪುರಾಣ ಪ್ರವಚನ ಕೀರ್ತನೆಗಳು ಆಚರಣೆಯಲ್ಲಿರಲಿ

ಉದಯವಾಹಿನಿ ಚಿತ್ರ

ಡಿ.13ರವರೆಗೆ ಪ್ರತಿದಿನ ಸಾಯಂಕಾಲ 7.30ರಿಂದ ಪ್ರವಚನಕಾರ್ಯಕ್ರಮ ನಡೆಯಲಿದ್ದು,ಪ್ರತಿದಿನ ದಾಸೋಹದ ವ್ಯವಸ್ಥೆಕೂಡಾ ಮಾಡಲಾಗಿದೆ. ಸಕಲ ಭಕ್ತಾಧಿಗಳು ಆಗಮಿಸಿ ಪ್ರವಚನ ಆಲಿಸಿ ದೇವರ ಕೃಪೆಗೆ ಪಾತ್ರರಾಗಬೇಕು
-ಸಾಹೇಬಗೌಡ ಹೂಗಾರ
ದೇವಸ್ಥಾನದಅರ್ಚಕ

ಕೆಂಭಾವಿ: ಭಾರತದ ಸನಾತನ ಸಂಸ್ಕೃತಿಯಲ್ಲಿ ಹೋಮ-ಹವನ, ಯಜ್ಞಯಾಗಾದಿಗಳು, ಪುರಾಣ ಪ್ರವಚನ ಕೀರ್ತನೆಗಳು ಸದಾ ಕಾಲ ಆಚರಣೆಯಲ್ಲಿರಬೇಕೆಂದು ಪ್ರವಚನಕಾರ ಮಧು ಗೊಂಡ ಮಹಾರಾಜರಅಭಿಪ್ರಾಯಪಟ್ಟರು.

ಪಟ್ಟಣದ ರೇವಣಸಿದ್ದೇಶ್ವರ ದೇವಸ್ಥಾನದಲ್ಲಿ ಕಾರ್ತಿಕ ಮಾಸದ ಅಂಗವಾಗಿ ಮ್ಯಾಗೇರಿ ಗೆಳೆಯರ ಬಳಗದ ವತಿಯಿಂದ ಹಮ್ಮಿಕೊಂಡಿದ್ದ 3ನೇ ವರ್ಷದ ಪ್ರವಚನ ಕಾರ್ಯಕ್ರಮದ ಪ್ರಾರಂಭೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಯೊಬ್ಬರು ಪುರಾಣ, ಪ್ರವಚನಗಳನ್ನು ಆಲಿಸುವುದರ ಜೊತೆಗೆ ಅವುಗಳಿಂದ ಸಿಗುವ ಮೌಲ್ಯಯುತ ಆದರ್ಶಗಳನ್ನು ಅಳವಡಿಸಿಕೊಂಡು ಜೀವನ ಸಾಗಿಸಬೇಕೆಂದರು.

ದೇವಾನುದೇವತೆಗಳಿಗಿಂತ ಮನುಷ್ಯನಜನ್ಮ ಮಿಗಿಲಾಗಿದ್ದು, ಹಾಗಾಗಿ ಬಸವಣ್ಣನವರ ವಚನದಂತೆ ಯಾವುದೇ ಕಳ್ಳತನ ಮಾಡದೆ, ಯಾರನ್ನುಕೊಲ್ಲದೆ ಹಾಗೂ ಮತ್ತೊಬ್ಬರ ಕುರಿತು ಮಾತನಾಡದೆ ಸಹ ಬಾಳ್ವೆ ದೊಂದಿಗೆ ಇರುವದರಲ್ಲಿ ಖುಷಿಯಿಂದ ಬದುಕು ರೂಪಿಸಿಕೊಂಡು ಶ್ರೇಷ್ಠರಿನ್ನಿಸಿಕೊಳ್ಳಿ ಎಂದು ಸಲಹೆ ನೀಡಿದರು. ಈ ಸಂದರ್ಭದಲ್ಲಿ ಮಾಲಹಳ್ಳಿ ಕೆಂಚರಾಯ ಪೂಜಾರಿ, ಹಾರ್ಮೋನಿಯಂ ವಾದಕರಾದ ನಾಗರಾಜಪಿವೂರ, ತಬಲ ವಾದಕಾರಾದರಮೇ ಶಕರಡಕಲ್ ಸೇರಿ ಅನೇಕ ಭಕ್ತಾಧಿಗಳಿದ್ದರು. ರೇವಣಸಿದ್ದಯ್ಯ ಮಠ ಅವರು ನಿರೂಪಿಸಿ,ವಂದಿಸಿದರು.

ಕಬ್ಬು ಬೆಳೆಗಾರರಿಗೆ ಸಕಾಲಕ್ಕೆ ಕಬ್ಬು ದರ ಪಾವತಿಸಲು ಸೂಚನೆ

• ಉದಯವಾಹಿನಿ, ಯಾದಗಿರಿ

ಉದಯವಾಹಿನಿ ಚಿತ್ರ

ರೈತರಿಗೂ ಮಾಹಿತಿ ನೀಡುವಂತೆ ಸೂಚನೆ

ಜಿಲ್ಲೆಯ ರೈತ ಕಬ್ಬು ಬೆಳೆಗಾರರಿಗೆ ಪ್ರಸಕ್ತ ವರ್ಷ ಪ್ರತಿ ಟನ್ ಕಬ್ಬಿಗೆ 2,700 ರೂ.ಗಳ ದರ ನಿಗದಿಪಡಿಸಲು ನಿರ್ಣಯ ಕೈಗೊಳ್ಳಲು ಸಕ್ಕರೆ ಕಾರ್ಖಾನೆ ಮಾಲೀಕರಿಗೆ ಜಿಲ್ಲಾಧಿಕಾರಿ ಡಾ.ಸುಶೀಲಾ. ಬಿ.ಅವರು ತಿಳಿಸಿದ್ದಾರೆ. ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ಕಬ್ಬು ಬೆಳೆಗಾರ ರೈತರ ಸಮಸ್ಯೆ ಆಲಿಸಲು ಕರೆಯಲಾಗಿದ್ದ ಸಭೆಯ ಅಧ್ಯಕ್ಷತೆ ವಹಿಸಿದ್ದ ಅವರು, ಈವರೆಗೆ ಕಬ್ಬು ಬೆಳೆಗಾರರಿಗೆ ಪ್ರತಿ ಟನ್ ಕಬ್ಬಿಗೆ 2,650 ರೂ ನೀಡಲಾಗಿದೆ. ಈ ಬಾರಿ ಈದರ ವನ್ನು 2700ಕ್ಕೆ ಹೆಚ್ಚಿಸಲು ಕ್ರಮ ಕೈಗೊಳ್ಳುವಂತೆ ಸಕ್ಕರೆ ಕಾರ್ಖಾನೆ ಮಾಲೀಕರಿಗೆ ಸೂಚಿಸಿದರು.

ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ನೀಡುವ ರೈತರಿಗೆ ಸಕಾಲಕ್ಕೆ ಕಬ್ಬು ದರ ಪಾವತಿಯಾಗಬೇಕು. ಬಹುತೇಕ ರೈತರು ಕಬ್ಬು ಕಟಾವು ಸಂದರ್ಭದಲ್ಲಿ ಕೃತಕ ಕಾರ್ಮಿಕರ ಅಭಾವ ಸೃಷ್ಟಿ, ಕಬ್ಬು ದರ ಪಾವತಿಯಲ್ಲಿ ವಿಳಂಬಧೋರಣೆ ಅನುಸರಿಸುತ್ತಿರುವದರಿಂದ ರೈತರಿಗೆ ತೊಂದರೆಯಾಗುತ್ತಿದ್ದು, ಈ ಸಮಸ್ಯೆ ನಿವಾರಣೆಗೆ ವಿಶೇಷ ಆದ್ಯತೆ ನೀಡುವಂತೆ ಸಲಹೆ ನೀಡಿದರು.

ರೈತರೊಂದಿಗಿನ ಒಡಂಬಡಿಕೆ ಅನ್ವಯ ಕಬ್ಬು ಕಟಾವು ಆಗಬೇಕು. ಗ್ರಾಮವಾರು, ರೈತರ ಕಬ್ಬು ಕಟಾವು ಬಗ್ಗೆ ಕೃಷಿ ಜಂಟಿನಿರ್ದೇಶಕರ ಸಮನ್ವಯ ದೊಂದಿಗೆ ಆಯಾ ರೈತ ಸಂಪರ್ಕ ಕೇಂದ್ರಗಳ ಮೂಲಕ ವೇಳಾಪಟ್ಟಿ ಪ್ರಕಟಿಸಬೇಕು. ಅದರಂತೆ ಕಬ್ಬು ದರ ಸಂದಾಯ, ಪಾವತಿಯಾದ ಮಾಹಿತಿಯು ಪ್ರಚುರಪಡಿಸಿ, ರೈತರಿಗೂ ಮಾಹಿತಿ ನೀಡುವಂತೆ ಅವರು ಸೂಚನೆ ನೀಡಿದರು.

ಸಭೆಯಲ್ಲಿ ಸಹಾಯಕ ಆಯುಕ್ತರು ಹಂಪಣ್ಣ ಸಜ್ಜನ್, ಕೃಷಿ ಇಲಾಖೆ ಜಂಟಿ ನಿರ್ದೇಶಕರು ರತೀಂದ್ರ ನಾಥ ಸುಗೂರ, ಜೆಸ್ಕಾಂ ಕಾರ್ಯನಿರ್ವಾಹಕ ಅಭಿಯಂತರ ರಾಘವೇಂದ್ರ, ಆಹಾರ ಇಲಾಖೆ ಉಪನಿರ್ದೇಶಕ ಆನಿಲಕುಮಾರ್ ಧವಳಗಿ , ರೈತ ಮುಖಂಡರಾದ ಲಕ್ಷ್ಮಿ ಕಾಂತ, ಮಹೇಶ್ ಗೌಡ ಸುಬೇದಾರ,ಚನ್ನಪ್ಪ ಆನೆಗುಂದಿ, ರಾಕೇಶಗೌಡ,ಚಂದ್ರಶೇಖರ, ಕಾಂತು ಪಾಟೀಲ್,ಮಲ್ಲಿಕಾರ್ಜುನ,ಶರಣಪ್ಪ, ಇತರರು ಉಪಸ್ಥಿತರಿದ್ದರು.

ಸಭೆ ನಡೆಸಲು ಸೂಚನೆ

ರೈತರಿಗೆ ಕಬ್ಬು ದರದಲ್ಲಿ ವ್ಯತ್ಯಾಸ ಆಗದಂತೆ ನೋಡಿಕೊಳ್ಳಲು ಕೃಷಿ,ಆಹಾರ ಇಲಾಖೆ,ಕಾನೂನು ಮಾಪನಾ ಶಾಸ್ತ್ರ ಇಲಾಖೆ ಅಧಿಕಾರಿಗಳ ಸಮಿತಿ ರಚನೆ ಮಾಡಿಕೊಂಡು ಕ್ರಮ ಕೈಗೊಳ್ಳಬೇಕು, ರೈತರ ಕಬ್ಬು ಬೆಳೆ ದರ ನಿಗದಿಗೆ ಸಂಬಂಧಿಸಿದಂತೆ ಪರಿಹಾರ ಕಂಡುಕೊಳ್ಳಲು ಕೃಷಿ ಜಂಟಿ ನಿರ್ದೇಶಕರು ನೇತೃತ್ವದಲ್ಲಿ ಇದೇ ಸೋಮವಾರ ರೈತ ಮುಖಂಡರು ಹಾಗೂ ಸಕ್ಕರೆ ಕಾರ್ಖಾನೆಯ ವ್ಯವಸ್ಥಾಪಕ ರೊಂದಿಗೆ ಸಭೆ ನಡೆಸಲು ಅವರು ಸೂಚಿಸಿದರು.

• ಉದಯವಾಹಿನಿ, ಮುದ್ದೇಬಿಹಾಳ

ವಸತಿ ಶಾಲೆಗಳಿಗೆ ನೋಡಲ್ ಅಧಿಕಾರಿ ಭೇಟಿ ; ಸ್ವಚ್ಛತೆಗೆ ಸೂಚನೆ

ಉದಯವಾಹಿನಿ ಚಿತ್ರ

ಹೊಸ ಹಾಸ್ಟೇಲುಗಳಲ್ಲಿ ಕಾಟ್, ಬೆಡ್ ಸೌಲಭ್ಯ ಇಲ್ಲದ್ದರಿಂದ ವಿದ್ಯಾರ್ಥಿಗಳು ನೆಲದ ಮೇಲೆ ಮಲಗುವ ಸ್ಥಿತಿ ಇರುವುದು ಕಂಡುಬಂದಿದೆ. ಈ ಕೂಡಲೇ ಮೇಲಧಿಕಾರಿಗಳಿಗೆ ವರದಿ ಸಲ್ಲಿಸಿ ಅವುಗಳ ಪೂರೈಕೆಗೆ ಬೇಡಿಕೆ ಮಂಡಿಸುತ್ತೇನೆ
-ಶಂಕರಗೌಡ ಸೋಮನಾಳ, ಮಹಿಳಾ ವಿವಿ ರಜಿಸ್ಟಾರ್ ಹಾಗೂ ತಾಲ್ಲೂಕು ಉಸ್ತುವಾರಿ ನೋಡಲ್ ಅಧಿಕಾರಿ.

ಪಟ್ಟಣದಲ್ಲಿರುವ ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಹಾಸ್ಟೇಲುಗಳು ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ತಾಲ್ಲೂಕು ಉಸ್ತುವಾರಿ ನೋಡಲ್ ಅಧಿಕಾರಿಯೂ ಆಗಿರುವ ವಿಜಯಪುರದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ರಜಿಸ್ಟಾರ್ ಶಂಕರಗೌಡ ಸೋಮನಾಳ ಬುಧವಾರ ಸಂಜೆ ಭೇಟಿ ನೀಡಿ ಮೂಲಸೌಕರ್ಯ, ಆಹಾರ ಮತ್ತು ಸರ್ಕಾರದ ಸೌಲಭ್ಯಗಳ ಪೂರೈಕೆಯ ತಪಾಸಣೆ ನಡೆಸಿದರು.

ಕೆಲ ಹಾಸ್ಟೇಲುಗಳಲ್ಲಿ ಸ್ವಚ್ಛತೆ ಇಲ್ಲದಿರುವುದನ್ನು ಕಂಡು ಅಲ್ಲಿದ್ದ ವಾರ್ಡನ್‌ಗಳಿಗೆ ಕೂಡಲೇ ಸ್ವಚ್ಛತೆಗೆ ಕ್ರಮ ಜರುಗಿಸುವಂತೆ ಮತ್ತು ಮುಂಬರುವ ದಿನಗಳಲ್ಲಿ ಸ್ವಚ್ಛತೆ ಇರುವಂತೆ ನೋಡಿಕೊಳ್ಳಲು ತಿಳಿಸಿದರು. ಕೆಲವೆಡೆ ಶೌಚಾಲಯಗಳಿಗೆ ನೀರಿನ ಸಮಸ್ಯೆ ಇರುವುದನ್ನು ತಿಳಿದು ಅಗತ್ಯ ಕ್ರಮಕ್ಕೆ ಸಲಹೆ ನೀಡಿದರು. ಒಂದೆರಡು ಹಾಸ್ಟೇಲ್‌ಗಳಲ್ಲಿ ಸೋಲಾರ್ ಸೌಲಭ್ಯ ಇಲ್ಲದ್ದರಿಂದ ಸ್ನಾನಕ್ಕೆ ಬಿಸಿ ನೀರು ಸಿಗುತ್ತಿಲ್ಲ ಎನ್ನುವ ವಿಷಯ ವಿದ್ಯಾರ್ಥಿಗಳಿಂದ ತಿಳಿದುಕೊಂಡ ಅವರು ಈ ಬಗ್ಗೆ ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ತಂದು ಕ್ರಮ ಜರುಗಿಸುವಂತೆ ತಿಳಿಸಿದರು. ಆಹಾರ ವಿಷಯಕ್ಕೆ ಸಂಬಂಧಿಸಿದಂತೆ ಮೆನು ಪ್ರಕಾರವೇ ಗುಣಮಟ್ಟದ ಆಹಾರ ನೀಡುತ್ತಿದ್ದರೂ ಕೆಲವೆಡೆ ವಿದ್ಯಾರ್ಥಿಗಳ ಸಾಮೂಹಿಕ ಬೇಡಿಕೆಗನುಗುಣವಾಗಿ ಆಹಾರದ ಮೆನು ಬದಲಾಯಿಸಲಾಗುತ್ತಿದೆ ಎನ್ನುವ ಮಾಹಿತಿಯನ್ನು ವಿದ್ಯಾರ್ಥಿಗಳಿಂದ ಪಡೆದುಕೊಂಡರು.

ಭೇಟಿಯ ನಂತರ ಮಾತನಾಡಿದ ಅವರು, ತಿಂಗಳ ಟಾಸ್ಕ್ ಹಿನ್ನೆಲೆ ಈ ಭೇಟಿ ನೀಡಲಾಗಿತ್ತು. ವಿದ್ಯಾರ್ಥಿಗಳಿಂದ ಕೇಳಿಬಂದ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವಂತೆ ಸಂಬಂಧಿಸಿದ ಅಧಿಕಾರಿಗಳು, ಆಯಾ ಹಾಸ್ಟೇಲುಗಳ ವಾರ್ಡನ್‌ಗಳಿಗೆ ಸೂಚಿಸಿದ್ದೇನೆ. ಭೇಟಿ ಮತ್ತು ಪರಿಶೀಲನೆಯ ವರದಿಯನ್ನು ಜಿಲ್ಲಾಧಿಕಾರಿಗಳಿಗೆ, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರಿಗೆ ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಸಲ್ಲಿಸುತ್ತೇನೆ ಎಂದು ತಿಳಿಸಿದರು.

ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕಿ ಬಸಂತಿ ಮಠ, ಬಿಸಿಎಂ ಅಧಿಕಾರಿ ಶಿವಲೀಲಾ ಕೊಣ್ಣೂರ, ಮೊರಾರ್ಜಿ ದೇಸಾಯಿ ಅಲ್ಪಸಂಖ್ಯಾತರ ವಸತಿ ಶಾಲೆಯ ಕೊಣ್ಣೂರ ಸೇರಿ ಆಯಾ ಹಾಸ್ಟೇಲುಗಳ ವಾರ್ಡನ್‌ಗಳು ಹಾಜರಿದ್ದು ಅಗತ್ಯ ಮಾಹಿತಿ ನೀಡಿ ಸಹಕರಿಸಿದರು. ಶಂಕರಗೌಡರು ವಿದ್ಯಾರ್ಥಿಗಳೊಂದಿಗೆ ಸಂವಹನ ನಡೆಸಿ ಪೂರಕ ಮಾಹಿತಿ ಕಲೆಹಾಕಿದರು.

ವಕ್ಫ್ ವಿರುದ್ಧ ಪ್ರತಿಭಟನೆ ವಿಚಾರ : ಬೊಮ್ಮಾಯಿ ಅವಧಿಯಲ್ಲೇ ಹೆಚ್ಚು ನೋಟಿಸ್ ನೀಡಲಾಗಿದೆ

• ಉದಯವಾಹಿನಿ, ಹಾಸನ

ಹಾಸನದಲ್ಲಿ ಕಾಂಗ್ರೇಸ್ ಪಕ್ಷವು ಗುರುವಾರ ಬೃಹತ್ ಜನಕಲ್ಯಾಣ ಸಮಾವೇಶವನ್ನು ಹಮ್ಮಿಕೊಂಡಿದ್ದು, ಎಸ್.ಎಂ ಕೃಷ್ಣನಗರದಲ್ಲಿ ಈಗಾಗಲೇ ಬೃಹತ್ ವೇದಿಕೆ ಸಿದ್ಧಾವಾಗಿದೆ. ಈಗಾಗಲೇ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿಕೆ ಶಿವಕುಮಾರ್ ಹಾಗೂ ರಾಜ್ಯ ಕಾಂಗ್ರೇಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲಾ ಅವರು ಹಾಸನಕ್ಕೆ ಹೆಲಿಕ್ಯಾಪ್ಟರ್ ಮೂಲಕ ಆಗಮಿಸಿದ್ದಾರೆ. ಬಳಿಕ ರಸ್ತೆ ಮಾರ್ಗವಾಗಿ ಸಮಾವೇಶದ ವೇದಿಕೆಗೆ ತೆರಳಿದ್ದಾರೆ. ಹಾಸನ ಹೊರವಲಯದ ಭುವನಹಳ್ಳಿ ಹೆಲಿಪ್ಯಾಡ್ ನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಸಿಎಂ ಸಿದ್ದರಾಮಯ್ಯ, ಬಿಜೆಪಿಯು ವಕ್ಫ್ ವಿರುದ್ಧ ಪ್ರತಿಭಟನೆ ನಡೆಸುತ್ತಿರುವ ವಿಚಾರವಾಗಿ, ಬೆಳಗಾವಿ ಅಧಿವೇಶನ ಇರುವುದರಿಂದ ಬಿಜೆಪಿ ಈ ರೀತಿ ಪ್ರತಿಭಟನೆ ಮಾಡುತ್ತಿದೆ. ಬಿಜೆಪಿಯು ವಕ್ಫ್ ವಿಚಾರದಲ್ಲಿ ರಾಜಕೀಯ ಮಾಡುತ್ತಿದೆ. ವಕ್ಫ್ ವಿಚಾರವಾಗಿ ಮೊದಲು ನೋಟಿಸ್ ನೀಡಿದ್ದು ಯಾರು? ಬಸವರಾಜ್ ಬೊಮ್ಮಾಯಿ ಆಡಳಿತದಲ್ಲಿ ಅತೀ ಹೆಚ್ಚು ನೋಟಿಸ್ ನೀಡಲಾಗಿದೆ ಎಂದರು. ಅಧಿವೇಶನದಲ್ಲಿ ಅವರಿಗೆ ಚರ್ಚಿಸಲು ಬೇರೆ ಯಾವ ವಿಷಯ ಕೂಡ ಇಲ್ಲ. ಬೈ ಎಲೆಕ್ಷನ್‌ನಲ್ಲಿ ಮೂರು ಕ್ಷೇತ್ರಗಳಲ್ಲಿ ನಾವು ಗೆದ್ದಿದ್ದೇವೆ. 25 ವರ್ಷದ ನಂತರ ಶಿಗ್ಗಾವಿಯಲ್ಲಿ, ಚನ್ನಪಟ್ಟಣದಲ್ಲಿ ಗೆದ್ದಿದ್ದೇವೆ. ಅದಕ್ಕೆ ಈ ಪ್ರತಿಭಟನೆ ನಾಟಕ ಶುರು ಮಾಡಿದ್ದಾರೆ ಎಂದು ವಾಗ್ದಾಳಿ ನಡೆಸಿದರು. ಇದೇ ವೇಳೆ ಮೂಡ ಹಗರಣಕ್ಕೆ ಸಂಬಂಧಪಟ್ಟಂತೆ ನ್ಯಾಯಾಲಯದ ತೀರ್ಪು ಏನು ಬಂದಿದೆ ಎಂದು ನನಗೆ ಗೊತ್ತಿಲ್ಲ ಎಂದು ತಿಳಿಸಿದರು.

ಶಾಲಾ ಅಭಿವೃದ್ಧಿಗೆ ನರೇಗಾ ನೆರವು

• ಉದಯವಾಹಿನಿ, ಮಾನ್ವಿ

ಉದಯವಾಹಿನಿ ಚಿತ್ರ

ತಾಲ್ಲೂಕಿನ ಸರ್ಕಾರಿ ಶಾಲೆಗಳಲ್ಲಿ ಮೂಲಸೌಕರ್ಯ ಕಲ್ಪಿಸಲು ನರೇಗಾ ಯೋಜನೆ ಸದ್ಬಳಕೆ ಮಾಡಿಕೊಳ್ಳಲಾಗಿದೆ. ನೀರಮಾನ್ವಿ, ಕುರ್ಡಿ, ಕಪಗಲ್, ಗೋರ್ಕಲ್, ಹಿರೇಕೊಟ್ಟೆಕಲ್ ಹಾಗೂ ಇತರ ಗ್ರಾಮಗಳಲ್ಲಿರುವ ಸರ್ಕಾರಿ ಶಾಲಾ ಕಟ್ಟಡಗಳ ಸುರಕ್ಷತೆಯ ದೃಷ್ಟಿಯಿಂದ ನರೇಗಾ ಯೋಜನೆ ಅಡಿಯಲ್ಲಿ ಕಾಂಪೌಂಡ್ ಗೋಡೆಗಳನ್ನು ನಿರ್ಮಿಸಲಾಗಿದೆ. ಜಿ.ಪಂ ಸಿಇಒ ರಾಹುಲ್ ತುಕಾರಾಂ ಪಾಂಡೈ ನರೇಗಾ ಪ್ರಗತಿ ಪರಿಶೀಲನೆ ಸಭೆಯಲ್ಲಿ ನೀಡಿದ ನಿರ್ದೇಶನದ ಅನ್ವಯ 2023-24 ನೇ ಸಾಲಿನಲ್ಲಿ ಸರ್ಕಾರಿ ಶಾಲೆಗಳಿಗೆ ಕಾಂಪೌಂಡ್ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿದೆ.

ನೂತನವಾಗಿ ನಿರ್ಮಿಸಿದ ಕಾಂಪೌಂಡ್ ಗೋಡೆಗಳ ಮೇಲೆ ಐತಿಹಾಸಿಕ ಸ್ಥಳಗಳು ಹಾಗೂ ಶೈಕ್ಷಣಿಕ ಜಾಗೃತಿಯ ಆಕರ್ಷಕ ಬಣ್ಣ ಬಣ್ಣದ ಚಿತ್ರಗಳನ್ನು ಬರೆಯಲಾಗಿದ್ದು, ಶಾಲೆಗಳ ಅಂದ ಚೆಂದ ಹೆಚ್ಚಿಸಿವೆ. ಅಧಿಕಾರಿಗಳ ಈ ಕ್ರಮಕ್ಕೆ ಗ್ರಾಮಸ್ಥರು ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ನೀರಮಾನ್ವ ಗ್ರಾಮದಲ್ಲಿ 2023-24 ನೇ ಸ

ದಿನ ಭವಿಷ್ಯ

ರಾಹುಕಾಲ	ಬೆಳಿಗ್ಗೆ	10:30 ರಿಂದ 12:00
ಗುಳಿಕ ಕಾಲ	ಬೆಳಿಗ್ಗೆ	07:30 ರಿಂದ 09:00
ಯಮಗಂಡ ಕಾಲ	ಮಧ್ಯಾಹ್ನ	03:00 ರಿಂದ 04:30

ಮೇಷ ಇಂದು ಕೈಗೊಂಡ ಧರ್ಮಾರ್ಥ ಕಾರ್ಯವು ಮಾನಸಿಕ ಶಾಂತಿ ಮತ್ತು ಆರಾಮ ತರುತ್ತದೆ. ನಿಮ್ಮ ವೆಚ್ಚಗಳನ್ನು ನಿಯಂತ್ರಿಸಲು ಪ್ರಯತ್ನಿಸಿ ಮತ್ತು ಇಂದು ತುಂಬಾ ಖರ್ಚು ಮಾಡಬೇಡಿ.

ವೃಷಭ ನಿಮ್ಮ ಕುಟುಂಬದ ಸದಸ್ಯರು ನಿಮ್ಮ ಪ್ರಯತ್ನ ಮತ್ತು ಸಮರ್ಪಣೆಯನ್ನು ಪ್ರಶಂಸಿಸುತ್ತಾರೆ ನಿಮ್ಮನ್ನು ಯಾರಾದರೂ ಆಕರ್ಷಿಸಲು ಪ್ರಯತ್ನಿಸಬಹುದಾದ್ದರಿಂದ ಎಚ್ಚರಿಕೆಯಿಂದಿರಿ.

ಮಿಥುನ ನಿಮ್ಮ ಸಂತೋಷವನ್ನು ನಿಮ್ಮ ಪೋಷಕರ ಜೊತೆ ಹಂಚಿಕೊಳ್ಳಿ. ಒಂಟಿತನ ಮತ್ತು ಖಿನ್ನತೆಯ ಭಾವನೆ ಅಳಿಸಿಹಾಕಿ ಅವರಿಗೆ ತಾವು ಅಮೂಲ್ಯವೆಂದು ಭಾವನೆ ಬರುವ ಹಾಗೆ ಮಾಡಿ.

ಕರ್ಕಾಟಕ ನಿಮ್ಮ ಮನೆಯ ಕರ್ತವ್ಯಗಳನ್ನು ನೀವು ನಿರ್ಲಕ್ಷಿಸಿದ್ದಲ್ಲಿ ನಿಮ್ಮ ಜೊತೆಗಿರುವ ಯಾರಾದರೂ ಸಿಟ್ಟಾಗಬಹುದು. ಪ್ರಣಯದ ಮನೋಭಾವದಲ್ಲಿನ ಹಠಾತ್ ಬದಲಾವಣೆ ನಿಮಗೆ ಅಸಮಾಧಾನ ಇರಬಹುದು.

ಸಿಂಹ ನಿಮ್ಮ ಒರಟು ವರ್ತನೆ ನಿಮ್ಮ ಸ್ನೇಹಿತರಿಗೆ ಸ್ವಲ್ಪ ಸಮಸ್ಯೆ ಉಂಟು ಮಾಡಬಹುದು. ಇನ್ನೂ ಸಂಬಳ ಪಡೆಯದವರು, ಇಂದು ಅವರು ಹಣಕ್ಕಾಗಿ ತುಂಬಾ ಚಿಂತೆ ಮಾಡಬಹುದು.

ಕನ್ಯಾ ನಿಮ್ಮ ಸಕಾರಾತ್ಮಕ ದೃಷ್ಟಿಕೋನ ಮತ್ತು ಆತ್ಮವಿಶ್ವಾಸದಿಂದ ನಿಮ್ಮ ಸುತ್ತಲಿರುವ ಜನರನ್ನು ಪ್ರಭಾವಿಸಬಹುದಾದ ಸಾಧ್ಯತೆಗಳಿವೆ. ಇಂದು ಮನೆಯಿಂದ ಹೊರಗೆ ಹಿರಿಯರ ಆಶೀರ್ವಾದವನ್ನು ತೆಗೆದುಕೊಂಡು ಹೋಗಿ.

ತುಲಾ ನಿಮ್ಮ ಜೀವನ ಸಂಗಾತಿಯೊಂದಿಗೆ ಸೇರಿ ಇಂದು ನೀವು ಭವಿಷ್ಯಕ್ಕೆ ಯಾವುದೇ ಆರ್ಥಿಕ ಯೋಜನೆಯನ್ನು ಮಾಡಬಹುದು ಮತ್ತು ಈ ಯೋಜನೆ ಯಶಸ್ವಿ ಯಾಗಲಿದೆ ಎಂದು ಭರವಸೆ ಇದೆ.

ವೃಶ್ಚಿಕ ಅಸಾಧ್ಯವಾದ ಅನಗತ್ಯ ಚಿಂತನೆಯಲ್ಲಿ ನಿಮ್ಮ ಶಕ್ತಿ ವ್ಯರ್ಥ ಮಾಡುವ ಬದಲು ಅದನ್ನು ಸರಿಯಾದ ದಿಕ್ಕಿನಲ್ಲಿ ಬಳಸಿ. ಇನ್ನೂ ಸಂಬಳ ಪಡೆಯದವರು, ಇಂದು ಅವರು ಹಣಕ್ಕಾಗಿ ತುಂಬಾ ಚಿಂತೆ ಮಾಡಬಹುದು.

ಧನಸ್ಸು ನೀವು ಧೀರ್ಘಕಾಲೀನ ಅನಾರೋಗ್ಯದ ಚೇತರಿಸಿಕೊಳ್ಳುತ್ತೀರಿ. ಮುಂಗೋಪಿ ವ್ಯಕ್ತಿಯ ಸಹವಾಸವನ್ನು ತಪ್ಪಿಸಿ. ಅವರು ನಿಮ್ಮ ಮೇಲೆ ಒತ್ತಡ ಹಾಕಬಹುದು. ಇದು ಸಮಸ್ಯೆಯನ್ನು ಮತ್ತಷ್ಟು ಉಲ್ಬಣಗೊಳಿಸಬಹುದು.

ಮಕರ ಸಂತಸದ ಪ್ರಯಾಣ ಮತ್ತು ಸಾಮಾಜಿಕ ಕಾರ್ಯಕ್ರಮಗಳು ನಿಮಗೆ ಆರಾಮ ಮತ್ತು ಸಂತೋಷ ತರುತ್ತದೆ. ಇಂದು ನಿಮಗೆ ದೊರಕುವ ಹೊಸ ಹೂಡಿಕೆಯ ಅವಕಾಶಗಳನ್ನು ಅನ್ವೇಷಿಸಿ.

ಕುಂಭ ಕೋಟೆಯೊಳಗಿನ ಜೀವನ ಶೈಲಿ ಮತ್ತು ಯಾವಾಗಲೂ ಭದ್ರತೆಯ ಬಗ್ಗೆ ಯೋಚಿಸುವುದು ನಿಮ್ಮ ದೈಹಿಕ ಹಾಗೂ ನಿಮ್ಮ ಮಾನಸಿಕ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತವೆ.

ಮೀನ ಮನೆಯ ಚಿಂತೆಗಳು ನಿಮಗೆ ಉದ್ವೇಗ ತರಬಹುದು. ಹಣಕ್ಕೆ ಸಂಬಂಧಿಸಿದ ಯಾವುದೇ ವಿಷಯ ನ್ಯಾಯಾಲಯ ಪ್ರಕರಣದಲ್ಲಿ ಸಿಲುಕಿಕೊಂಡಿದ್ದರೆ, ಇಂದು ನೀವು ಅದರಲ್ಲಿ ವಿಜಯವನ್ನು ಪಡೆಯಬಹುದು.

ಬಣ್ಣದೋಕುಳಿಯಲ್ಲಿ ಮಿಂದೆದ್ದ ತೀರ್ಥಂಕರ ಮೂರ್ತಿಗಳು

ಮುನಿಸುವ್ರತ ಹಾಗೂ ಶೀತಲನಾಥ ತೀರ್ಥಂಕರರ ಬೃಹತ್ ಮೂರ್ತಿಗಳಿಗೆ ಪಂಚಕಲ್ಯಾಣಿಕ ಪೂರ್ವಕ ಮಸ್ತಕಾಭಿಷೇಕ

• ಉದಯವಾಹಿನಿ, ಹಳೇಬೀಡು

ಜೈನರಗುತ್ತಿ ಕ್ಷೇತ್ರದಲ್ಲಿ ವಿರಾಜಮಾನರಾಗಿರುವ ಜೈನಧರ್ಮದ ತೀರ್ಥಂಕರರಾದ ಮುನಿಸುವ್ರತ ಹಾಗೂ ಶೀತಲನಾಥ ತೀರ್ಥಂಕರರ ಬೃಹತ್ ಮೂರ್ತಿಗಳಿಗೆ ಪಂಚಕಲ್ಯಾಣಿಕ ಪೂರ್ವಕ ಮೊದಲ ಮಸ್ತಕಾಭಿಷೇಕ ವೈಭವದಿಂದ ನೆರವೇರಿತು. ತೀರ್ಥಂಕರ ಮೂರ್ತಿಗಳು ಬಣ್ಣದೋಕುಳಿಯಲ್ಲಿ ಮಿಂದೆದ್ದ ಸಂಭ್ರಮವನ್ನು ದೂರದ ಊರಿನಿಂದ ಬಂದಿದ್ದ ಜನರು ಭಕ್ತಿಭಾವದಿಂದ ಕಣ್ಮುಂಬಿಕೊಂಡರು.

ಪಂಚಕಲ್ಯಾಣಿಕ ಮಹಾ ಮಹೋತ್ಸವ

ಜೈನರಗುತ್ತಿಯ ಶೀತಲನಾಥ ಟ್ರಸ್ಟ್ ಹಾಗೂ ಪಂಚಕಲ್ಯಾಣಿಕ ಮಹೋತ್ಸವ ಸಮಿತಿ ಆಯೋಜಿಸಿದ ವರ್ಣಮಯ ಅಭಿಷೇಕಕ್ಕೆ ಸಾವಿರಾರು ಭಕ್ತರು ಸಾಕ್ಷಿಯಾದರು. ಜೈನರಗುತ್ತಿ ಜಿನ ಮಂದಿರ ಮುಂಭಾಗದ ವಿಶಾಲ ಮೈದಾನದಲ್ಲಿ ಪ್ರತಿಷ್ಠಾಪಿಸಿರುವ 31 ಅಡಿ ಎತ್ತರ ನಿಂತಿರುವ ಮುನಿಸುವ್ರತ ತೀರ್ಥಂಕರ ಹಾಗೂ 24 ಅಡಿಯ ಪದ್ಮಾಸನ ಭಂಗಿಯಲ್ಲಿ ಕುಳಿತಿರುವ ಶೀತಲನಾಥ ತೀರ್ಥಂಕರ ಮೂರ್ತಿಗಳಿಗೆ ವಿವಿಧ ದ್ರವ್ಯಗಳಿಂದ ಮಸ್ತಕಾಭಿಷೇಕ ನೆರವೇರಿತು.

ಪ್ರತಿಷ್ಠಾಚಾರ್ಯರ ನೇತೃತ್ವದಲ್ಲಿ ಪುರೋಹಿತರ ಮಂತ್ರಘೋಷದೊಂದಿಗೆ ವಿವಿಧ ಪೂಜೆಗಳು ನಡೆದವು. ಎರಡೂ ಮೂರ್ತಿ ಗಳಿಗೂ ಪ್ರತ್ಯೇಕವಾಗಿ 1008 ಕಳಸ, ನಾಲ್ಕು ಚತುಷೋನ, ಒಂದು ಪ್ರಥಮ ಕಳಸದಿಂದ ಜಲಾಭಿಷೇಕ ನೆರವೇರಿಸಲಾಯಿತು. ಎಳನೀರು, ಕ್ಷೀರ(ಹಾಲು), ಕಬ್ಬಿನಹಾಲು, ಚತುಷೋನ ಕಳಸ, ಶ್ರೀಗಂಧ, ಅರಿಸಿನ, ಕಲ್ಕಚೂರ್ಣ, ಚಂದನ, ಕಷಾಯಗಳಿಂದ ಅಭಿಷೇಕ ನೆರವೇರಿಸಲಾಯಿತು. ತೀರ್ಥಂಕರ ಮಸ್ತಕಾಭಿಷೇಕ ಆರಂಭವಾದ ನಂತರ ಮುನಿಸುವ್ರತ ಭಗವಾನ್ ಕೀ ಜೈ, ಶೀತಲನಾಥ ಭಗವಾನ್ ಕೀ ಜೈ, ಜೈನ ಧರ್ಮ ಕೀ ಜೈ, ಅಹಿಂಸೋ ಪರಮೋ ಧರ್ಮಕೀ ಜೈ, ವಿಶ್ವ ಧರ್ಮ ಕೀ ಜೈ, ಪಂಚಕಲ್ಯಾಣ ಮಹೋತ್ಸವ್ ಕೀ ಜೈ ಎಂಬ ಭಕ್ತರು ಘೋಷಣೆ ಮುಗಿಲು ಮುಟ್ಟಿತ್ತು.

ಮಹಿಳೆಯರು ಹಾಗೂ ಕಲಾತಂಡದವರು ಜಿನ ಗೀತೆಗಳನ್ನು ಹಾಡಿ, ನೃತ್ಯ ಮಾಡಿದರು. ಸಕಲ ಜೀವಿಗಳಿಗೆ ಸುಖ, ಶಾಂತಿ, ನೆಮ್ಮದಿ, ಮುಕ್ತಿ ದೊರಕಲಿ ಎಂದು ಶಾಂತಿಧಾರ ನೆರವೇರಿಸಲಾಯಿತು. ಪುಷ್ಪವೃಷ್ಟಿಯೊಂದಿಗೆ ಕನಕಾಭಿಷೇಕ ನೆರವೇರಿಸಿದ ನಂತರ ಗಂಟೆ ನಾದದೊಂದಿಗೆ ಮಹಾಮಂಗಳಾರತಿ ನೆರವೇರಿತು. ಪುಷ್ಪಗಿರಿಯ ಸೋಮಶೇಖರ ಶಿವಾಚಾರ್ಯ ಸ್ವಾಮೀಜಿ ಮಸ್ತಕಾಭಿಷೇಕ ವೀಕ್ಷಿಸಿದರು.

ಉದಯವಾಹಿನಿ ಚಿತ್ರ

ವೈರಾಗ್ಯದಿಂದ ಅರಹಂತರಾದ ತೀರ್ಥಂಕರರು ಅಹಿಂಸಾ ಮಾರ್ಗವನ್ನು ಕಟ್ಟುನಿಟ್ಟಾಗಿ ಅನುಸರಿಸುತ್ತಾರೆ. ಘೋರವಾದ ತಪಸ್ಸು ಮಾಡಿ ಪುನರ್ಜನ್ಮ ಇಲ್ಲದಂತೆ ಮೋಕ್ಷ ಪಡೆಯುವ ಸಂದರ್ಭದಲ್ಲಿ ನಡೆಯುವ ಘಟನೆಗಳನ್ನು ಭಕ್ತಿಪೂರ್ವಕವಾಗಿ ಪೂಜಾ ವಿಧಾನದೊಂದಿಗೆ ನಡೆಸುವುದೇ ಮೋಕ್ಷಕಲ್ಯಾಣಿಕ ಪಂಚ ಕಲ್ಯಾಣಿಕ ಸಮಿತಿ ಅಧ್ಯಕ್ಷ ಧರ್ಮಸ್ಥಳ ಸುರೇಂದ್ರ ಕುಮಾರ್, ಪಾಲ್ಗೊಂಡಿದ್ದರು.

ಮೋಕ್ಷಕಲ್ಯಾಣಿಕ ಕಣ್ಣುಂಬಿಕೊಂಡ ಭಕ್ತರು:

ಡಿ.ವೀರೇಂದ್ರ ಹೆಗ್ಗಡೆ ಮಸ್ತಕಾಭಿಷೇಕಕ್ಕೆ ಚಾಲನೆ

ಆಚಾರ್ಯ ಶ್ರೀಗಳಾದ ವಿಶುದ್ಧ ಸಾಗರ ಮುನಿಮಹಾರಾಜ್, ಚಂದ್ರಪ್ರಭ ಮುನಿ ಮಹಾರಾಜ್, ಜೈನಮುನಿ ವೀರ ಸಾಗರ ಮುನಿ ಮಹಾರಾಜ್, ಹೊಂಬುಜ ಜೈನ ಮಠದ ಶ್ರೀಮದ್ ದೇವೇಂದ್ರ ಕೀರ್ತಿ ಭಟ್ಟಾರಕ ಸ್ವಾಮೀಜಿ, ಶ್ರವಣಬೆಳಗೊಳ ಮಠದ ಅಭಿನವ ಚಾರುಕೀರ್ತಿ ಭಟ್ಟಾರಕ ಪಟ್ಟಚಾರ್ಯವರ್ಯ ಸ್ವಾಮೀಜಿ, ಸೋಂದಾ ಮಠದ ಭಟ್ಟಕಲಂಕ ಭಟ್ಟಾಚಾರ್ಯ ಪಟ್ಟಚಾರ್ಯವರ್ಯ ಸ್ವಾಮೀಜಿ, ಅರಹಂತಗಿರಿಯ ಧವಳ ಕೀರ್ತಿ ಭಟ್ಟಾರಕ ಸ್ವಾಮೀಜಿ ಕಂಬದಹಳ್ಳಿ ಮಠದ ಭಾನುಕೀರ್ತಿ ಭಟ್ಟಾರಕ ಸ್ವಾಮೀಜಿ, ನಾಂದಣಿ ಮಠದ ಜಿನಸೇನ ಭಟ್ಟಾರಕ ಸ್ವಾಮೀಜಿ, ಧರ್ಮಸ್ಥಳ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಅವರು ಪ್ರಾರ್ಥನೆ ಸಲ್ಲಿಸಿದ ನಂತರ ಮಸ್ತಕಾಭಿಷೇಕಕ್ಕೆ ಚಾಲನೆ ನೀಡಲಾಯಿತು.

ಪಂಚಕಲ್ಯಾಣಿಕ ಮಹಾ ಮಹೋತ್ಸವವು ಮೋಕ್ಷ ಕಲ್ಯಾಣಿಕದೊಂದಿಗೆ ವೈಭವದ ತೆರೆ ಕಂಡಿತು. ಜೈನ ಧರ್ಮದಲ್ಲಿ ಬಾಹುಬಲಿ ಮೊದಲ ಮೋಕ್ಷಗಾಮಿ. ಆದರೆ, ಅವರು ತೀರ್ಥಂಕರರಾಗಲಿಲ್ಲ. ತಂದೆ ಆದಿನಾಥ ಭಗವಂತರು ಮೋಕ್ಷ ಪಡೆದು ಜೈನಧರ್ಮದ ಮೊದಲನೇ ತೀರ್ಥಂಕರ ಆಗಿರುವುದರಿಂದ ಆದಿನಾಥರ ಪಂಚಕಲ್ಯಾಣಿಕ ನಡೆಸುವುದು ಜೈನಧರ್ಮದ ಪ್ರಮುಖ ಆಚರಣೆಯಾಗಿದೆ. ಆದಿನಾಥ ತೀರ್ಥಂಕರರ ಮೋಕ್ಷ ಕಲ್ಯಾಣಿಕ ಮುಂಜಾನೆ ನಸುಕಿನಲ್ಲಿಯೇ ಆರಂಭವಾಯಿತು. ಪಂಚಕಲ್ಯಾಣಿಕ ಮಂಟಪದಲ್ಲಿ ಸುಪ್ರಭಾತದೊಂದಿಗೆ ಮಂಗಳವಾದ್ಯ ಮೊಳಗಿತು. ಜಿನಮಂದಿರ ಹಾಗೂ ಪಂಚಕಲ್ಯಾಣಿಕ ಮಂಟಪದಲ್ಲಿ ತೀರ್ಥಂಕರ ಮೂರ್ತಿಗೆ ಅಭಿಷೇಕ ನೆರವೇರಿಸಿದ ನಂತರ ಶಾಂತಿಧಾರ ನೆರವೇರಿಸಲಾಯಿತು.

ನಿತ್ಯ ಪೂಜನ ಮೋಕ್ಷ ಕಲ್ಯಾಣಿಕ ವಿಧಿಯ ನಂತರ ಮೋಕ್ಷ ಕಲ್ಯಾಣಿಕ ಪೂಜನ ಮಂತ್ರ ಪಠಣ ಹಾಗೂ ಸುಮಧುರ ಗಾಯನದ ಮೂಲಕ ವೈಭವದಿಂದ ನಡೆಯಿತು. ಸಂಘ ಪೂಜೆ ನೆರವೇರಿಸಿ ಧ್ವಜಾವರೋಹಣದ ನಂತರ ವಿಸರ್ಜನಾ ವಿಧಾನದೊಂದಿಗೆ ಪಂಚಕಲ್ಯಾಣ ಮಹೋತ್ಸವವನ್ನು ಸಮಾಪ್ತಿಗೊಳಿಸಲಾಯಿತು.

ಕರ ವಸೂಲಾತಿ ಹೆಚ್ಚಿನ ಪ್ರಗತಿ ಸಾಧಿಸಿ: ಎಸ್.ಜೆ.ಸೋಮಶೇಖರ್

• ಉದಯವಾಹಿನಿ, ಚಿತ್ರದುರ್ಗ

ಕಡಿಮೆ ಕರ ವಸೂಲಾತಿ ಮಾಡಿದ ಗ್ರಾಮ ಪಂಚಾಯಿತಿಗಳಲ್ಲಿ ಜಾಗೃತಿ ಜಾಥಾ, ಟಾಂ ಟಾಂ, ಸ್ವಚ್ಛ ವಾಹಿನಿ ಆಟೋ ಮೂಲಕ ಹೆಚ್ಚು ಹೆಚ್ಚು ಪ್ರಚಾರಗೊಳಿಸಿ, ಕರ ವಸೂಲಾತಿ ಕಡಿಮೆ ಇರುವ ಗ್ರಾಮ ಪಂಚಾಯಿತಿಗಳು ಹೆಚ್ಚಿನ ಪ್ರಗತಿ ಸಾಧಿಸಬೇಕು ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್. ಜೆ.ಸೋಮಶೇಖರ್ ಸೂಚನೆ ನೀಡಿದರು.

ಪ್ರಗತಿ ಪರಿಶೀಲನಾ ಸಭೆ

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಗುರುವಾರ ಗ್ರಾಮ ಪಂಚಾಯಿತಿಗಳಲ್ಲಿ ಕಡಿಮೆ ಕರ ವಸೂಲಾತಿ ಮಾಡಿದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು ಕರ ವಸೂಲಿಗಾರರ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯ 189 ಗ್ರಾಮ ಪಂಚಾಯಿತಿಗಳಲ್ಲಿ ಇಲ್ಲಿವರೆಗೂ ಶೇ.33.80ರಷ್ಟು ಪ್ರಗತಿ ಸಾಧಿಸಲಾಗಿದ್ದು, ಜಿಲ್ಲಾವಾರು ಪ್ರಗತಿಗೆ ಹೋಲಿಸಿದಾಗ ಚಿತ್ರದುರ್ಗ ಜಿಲ್ಲೆಯು ತುಂಬಾ ಕಡಿಮೆ ಪ್ರಗತಿ ಸಾಧಿಸಲಾಗಿದೆ. ಆದ್ದರಿಂದ ಕಡಿಮೆ ಕರ ವಸೂಲಾತಿ ಮಾಡಿದ ಗ್ರಾಮ ಪಂಚಾಯಿತಿಗಳಲ್ಲಿ ಜಾಥಾ ಮೂಲಕ, ಟಾಂ ಟಾಂ ಮೂಲಕ, ಸ್ವಚ್ಛ ವಾಹಿನಿ ಆಟೋ ಮೂಲಕ ಹೆಚ್ಚು ಹೆಚ್ಚು ಪ್ರಚಾರಗೊಳಿಸಬೇಕು. ಹಾಗೆಯೇ ಪ್ರತಿ ಮನೆ ಮನೆಗೂ ಭೇಟಿ ನೀಡಿ ಗ್ರಾಮಸ್ಥರ ಮನವೋಲಿಸಿ, ಹೆಚ್ಚಿನ ತೆರಿಗೆ ಸಂಗ್ರಹಣೆ ಮಾಡಲು ಸೂಚನೆ ನೀಡಿದ ಅವರು, ಇನ್ನೂ ಒಂದು ತಿಂಗಳೊಳಗೆ ಕಡ್ಡಾಯವಾಗಿ ಶೇ.80ರಷ್ಟು ಕರ ವಸೂಲಾತಿ ಹೆಚ್ಚಾಗಬೇಕು ಎಂದು ಕಟ್ಟು ನಿಟ್ಟಿನ ಸೂಚನೆ ನೀಡಿದರು.

ಕರ ವಸೂಲಾತಿಯಲ್ಲಿ ಕಡಿಮೆ ಪ್ರಗತಿ ಸಾಧಿಸಿದ ಪಿಡಿಒ ಹಾಗೂ ಬಿಲ್ ಕಲೆಕ್ಟರ್‌ಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆಯನ್ನೂ ನೀಡಿದರು.

ಹೆಚ್ಚು ಕರವಸೂಲಿ ಮಾಡಿದ ಪಿಡಿಒ, ಬಿಲ್ ಕಲೆಕ್ಟರ್‌ಗೆ ಸನ್ಮಾನ

ಗ್ರಾಮ ಪಂಚಾಯಿತಿಗಳಲ್ಲಿ ಹೆಚ್ಚಿನ ಕರ ವಸೂಲಿ ಮಾಡಿದ ಸಂಬಂಧಪಟ್ಟ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಬಿಲ್ ಕಲೆಕ್ಟರ್‌ಗಳನ್ನು ಜಿಲ್ಲಾ ಪಂಚಾಯಿತಿ ವತಿಯಿಂದ ಸನ್ಮಾನಿಸಲಾಗುವುದು ಎಂದು ಜಿಲ್ಲಾ ಪಂಚಾಯಿತಿ ಸಿಇಒ ಎಸ್. ಜೆ.ಸೋಮಶೇಖರ್ ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಕೆ.ತಿಮ್ಮಪ್ಪ., ಸಹಾಯಕ ಕಾರ್ಯದರ್ಶಿ ಎನ್. ರವಿ, ಸಹಾಯಕ ನಿರ್ದೇಶಕ ದಾದಾಪೀರ್, ಸಹಾಯಕ ಡಿಪಿಎಂ ಯು ಸೈಯಿದಾ ಪಿಜಾ ಇರಮ್ ಸೇರಿದಂತೆ ಗ್ರಾಮ ಪಂಚಾಯಿತಿ ಪಿಡಿಒ ಹಾಗೂ ಬಿಲ್ ಕಲೆಕ್ಟರ್‌ಗಳು ಇದ್ದರು.

ಗ್ರಾಪಂ.ಅಧ್ಯಕ್ಷ ತಳವಾರ ಅವಿರೋಧ ಆಯ್ಕೆ

• ಉದಯವಾಹಿನಿ, ಚಿಂಚೋಳಿ

ತಾಲ್ಲೂಕಿನ ದೇಗಲಮಡಿ ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಕಾಶಿರಾಮ ತಳವಾರ ಅವರ ಒಂದೇ ನಾಮಪತ್ರ ಸಲ್ಲಿಕೆ ಆಗಿರುವುದರಿಂದ ಅವರನ್ನು ಅವಿರೋಧವಾಗಿ ಆಯ್ಕೆಗೊಳಿಸಿ ಘೋಷಣೆ ಮಾಡಲಾಗಿದೆ ಎಂದು ತಹಶೀಲ್ದಾರ್ ಸುಬ್ಬಣ್ಣ ಜಮಖಂಡಿ ತಿಳಿಸಿದ್ದಾರೆ.

ದೇಗಲಮಡಿ ಗ್ರಾಮ ಪಂಚಾಯತನಲ್ಲಿ ಒಟ್ಟು 15 ಸದಸ್ಯರ ಬಲವಿದ್ದು, 12ಸದಸ್ಯರು ಚುನಾವಣೆಯಲ್ಲಿ ಉಪಸ್ಥಿತರಿದ್ದು ಎಲ್ಲೋರ ಸಮ್ಮುಖದಲ್ಲಿ ಅಧ್ಯಕ್ಷ ಸ್ಥಾನಕ್ಕೆ ಕಾಶಿರಾಮ ತಳವಾರ ಅವರನ್ನು ಅವಿರೋಧವಾಗಿ ಘೋಷಣೆ ಮಾಡಲಾಗಿದ್ದು ಅಧ್ಯಕ್ಷರು ಎಲ್ಲಾ ಸದಸ್ಯರು ಒಗ್ಗೂಡಿ ಪಂಚಾಯತ್ ವ್ಯಾಪ್ತಿಯಲ್ಲಿನ ಮೂಲಭೂತ ಸೌಕರ್ಯಗಳ ಸಮಸ್ಯೆಗಳು ಬಗೆಹರಿಸಿ ವಿಶೇಷವಾಗಿ ಬಯಲು ಶೌಚಾಲಯ ಮುಕ್ತಗೊಳಿಸಿ ಮನೆಗೊಂದು ಶೌಚಾಲಯ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಪ್ರಯತ್ನಿಸಿ ಎಂದು ತಹಸೀಲ್ದಾರ್ ಸುಬ್ಬಣ್ಣ ಜಮಖಂಡಿ ತಿಳಿಸಿದ್ದಾರೆ.

ಉದಯವಾಹಿನಿ ಚಿತ್ರ

ಚುನಾವಣೆ ಪ್ರಕ್ರಿಯೆ ಮುಗಿದ ನಂತರ ಅಭಿಮಾನಿಗಳು ಕಾರ್ಯಕರ್ತರು ಸ್ನೇಹಿತರು ಸಿಹಿ ಹಂಚಿ ಪಟಾಕಿ ಸಿಡಿಸಿ ಸಂಭ್ರಮ ಆಚರಣೆ ಮಾಡಿದರು. ಉಪಾಧ್ಯಕ್ಷ ರೀಜ್ವಾನ ಬೇಗಂ, ಬೀರಗೊಂಡ, ಮಧುಮತಿ, ಶೋಭಾ ಸಂಗಪ್ಪ ಪಾಟೀಲ, ಅರುಣಬಾಯಿ, ಶಾಮಣ್ಣ, ಅಲ್ಕಾವತಿ, ಶೋಭಾ ಈಶ್ವರಪ್ಪ, ಸಾಯಿಬಣ್ಣ, ವಿಲಾಸ್, ಶ್ರೀಮಂತ ಕಟ್ಟಿಮನಿ, ಭೀಮಶೇಟ್ಟಿ ಮುರುಡಾ, ಕೆಎಂ ಬಾರಿ, ವಿಜಯಕುಮಾರ ರಾಠೋಡ್, ಅಮರ ಲೋಡನೂರ, ಅನೇಕ ಗ್ರಾಮಸ್ಥರು ಸ್ನೇಹಿತರು ಇದ್ದರು.

ಇಮ್ಮಡಿ ಪುಲಕೇಶಿ ಮಹಾರಾಜರ ಜಯಂತ್ಯುತ್ಸವ

• ಉದಯವಾಹಿನಿ, ಮುದ್ದೇಬಿಹಾಳ

ಭಾರತೀಯ ನೌಕಾಪಡೆಯ ಪಿತಾಮಹ ವೀರಕೇಸರಿ ಹಿಂದೂ ಸಾಮ್ರಾಟ ಇಮ್ಮಡಿ ಪುಲಕೇಶಿಯ ಮಹಾರಾಜರ ಜಯಂತೋತ್ಸವನ್ನು ಮುದ್ದೇಬಿಹಾಳ ಅಫಿಶಿಯಲ್ ಪೇಜ್‌ನ ಮುಖ್ಯಸ್ಥರ ನೇತೃತ್ವದಲ್ಲಿ ಸರಳವಾಗಿ ಆಚರಿಸಲಾಯಿತು .

15 ಅಡಿ ಎತ್ತರದ ಇಮ್ಮಡಿ ಪುಲಕೇಶಿಯ ಮಹಾರಾಜರ ಭವ್ಯ ಕಟೌಟ್‌ಗೆ ವಿಶೇಷ ಪೂಜೆಯನ್ನು ಸಲ್ಲಿಸಿದರು ರಾಜ್ಯ ಸರ್ಕಾರ ಮತ್ತು ಕನ್ನಡಪರ ಸಂಘನೆಗಳು ಇಮ್ಮಡಿ ಪುಲಕೇಶಿಯ ಮಹಾರಾಜರ ಜಯಂತೋತ್ಸವನ್ನು ಆಚರಿಸಬೇಕಿದೆ ನಮ್ಮ ಕನ್ನಡ ಚಾಲುಕ್ಯ ಚಕ್ರವರ್ತಿಗಳ ಇತಿಹಾಸ ನಮಗೆ ತಿಳಿದಿರುವುದು ವಿಪರ್ಯಾಸವಾಗಿದೆ ಕನ್ನಡ ಚಾಲುಕ್ಯ ಅರಸರ ಪಾಠ ಪಠ್ಯಗಳಲ್ಲಿ ಬರಬೇಕು ಎಂಬ ಅಭಿಪ್ರಾಯವನ್ನು ಮುಖಂಡರು ವ್ಯಕ್ತಪಡಿಸಿದರು

ಈ ವೇಳೆ ಕಬ್ಬಡಿ ಪಂದ್ಯಾವಳಿಯಲ್ಲಿ ರಾಜ್ಯ ತಂಡ ಪ್ರತಿನಿಧಿಸಿದ ಕೇಸಾಪೂರದ ವಿನಾಯಕ ಪೂಜಾರಿ ಸನ್ಮಾನಿಸಲಾಯಿತು. ಪಟ್ಟಣದ ಪೂಲೀಸ್ ಠಾಣೆಯಲ್ಲಿ ಪಿಎಸ್ಸೈ ಸಂಜಯ ತಿಪ್ಪರೆಡ್ಡಿ ಸೇರಿದಂತೆ ಸಿಬ್ಬಂದಿಗಳಿಗೆ ಹಾಗೂ ಸಾರ್ವಜನಿಕರಿಗೆ ಸಿಹಿಯನ್ನು ವಿತರಿಸಿದರು

ಉದಯವಾಹಿನಿ ಚಿತ್ರ

ಈ ವೇಳೆ ನಿಹಾಲ್, ಇರ್ಫಾನ್, ಯಮನಪ್ಪ ಕಂಬಳಿ, ಆಕಾಶ ನಾಗಬೇನಾಳ, ಯಲ್ಲಾಲಿಂಗ ಹಾದಿಮನಿ, ನಾಗಪ್ಪ ಚೌಡಿಕೇರ ಬೀರಲಿಂಗ ಮೇಟಿ, ಚಂದ್ರಶೇಖರ ನಿಜಾಮ್ ಬಾಗೇವಾಡಿ, ಮುನಿರ್ ಅವಟಿಗೇರ ಸೇರಿದಂತೆ ಹಲವರು ಉಪಸ್ಥಿತರಿದ್ದರು ಹಿಂದೂ ಮುಸ್ಲಿಂ ಸಮುದಾಯದ ಯುವಕರು ಸೇರಿ ಇಮ್ಮಡಿ ಪುಲಕೇಶಿ ಚಕ್ರವರ್ತಿಗಳ ಜಯಂತೋತ್ಸವ ಮಾಡಿದ್ದು ವಿಶೇಷವಾಗಿತ್ತು.

ಇಮ್ಮಡಿ ಪುಲಕೇಶಿ ವೃತ್ತ ಸಮಿತಿ ರಚನೆ: ಗೌರವಧ್ಯಕ್ಷ ಮುತ್ತು ಗ

ಡ್ರಗ್ಸ್ ಜಾಲದಿಂದ ಕಾನೂನು ಬಾಹಿರವಾಗಿ ದುಡ್ಡು ಸಂಪಾದನೆ

ಆಗ್ರಾದಲ್ಲಿ 2 ಗಂಟೆ ಮಾಜಿ ಮಿಸ್ ಇಂಡಿಯಾ Digital Arrest, ಸೈಬರ್ ಕಿರಾತಕರು ವಂಚಿಸಿದೆಷ್ಟು?

ಲಖನೌ: ಇತ್ತೀಚಿನ ದಿನಗಳಲ್ಲಿ ಡಿಜಿಟಲ್ ಅರೆಸ್ಟ್ ಪ್ರಕರಣ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಇದರಿಂದ ಜಾಗೃತರಾಗುವುದು ಹೇಗೆ ಎನ್ನುವ ವಿಚಾರದಲ್ಲಿ ಸೈಬರ್ ಕ್ರೈಂ ಇಲಾಖೆ ಎಚ್ಚರಿಸುತ್ತಾ ಬರುತ್ತಿದ್ದರೂ, ಪ್ರಕರಣದ ಸಂಖ್ಯೆ ಹೆಚ್ಚುತ್ತಲೇ ಇದೆ.

ಇಂತಹ ಸೈಬರ್ ಕ್ರೈಂ ಪ್ರಕರಣಕ್ಕೆ ಉತ್ತರ ಪ್ರದೇಶದ ಆಗ್ರಾದಲ್ಲಿ ನಡೆದ ಘಟನೆ, ಮತ್ತೊಂದು ಸೇರ್ಪಡೆಯಾಗಿದೆ. ಈ ಬಾರಿ, ಸೈಬರ್ ಕಿರಾತಕರು ಆಯ್ಕೆ ಮಾಡಿಕೊಂಡಿದ್ದದ್ದು ಫೆಮಿನಾ ಮಿಸ್ ಇಂಡಿಯಾ (ಅವರು ಹೇಳಿಕೊಳ್ಳುವ ಪ್ರಕಾರ) ಶಿವಂಕಿತಾ ದೀಕ್ಷಿತ್. ಪಶ್ಚಿಮ ಬಂಗಾಳದ ಮೂಲದ ಇವರು 2017ರಲ್ಲಿ ಈ ಪ್ರಶಸ್ತಿಗೆ ಪಾತ್ರರಾಗಿದ್ದರು.

ಶಿವಂಕಿತಾಗೆ ಕಳೆದ ಮಂಗಳವಾರ (ಡಿ 3) ಆಗ್ರಾದ ಲೋಹಮಂಡಿ ಸಿಬಿಐ ಆಫೀಸಿನಿಂದ, ಮಾಯಾಂಕ್ ತಿವಾರಿ ಎನ್ನುವ ಹೆಸರಿನಲ್ಲಿ ಫೋನ್ ಮಾಡುತ್ತಾನೆ. ತನ್ನನ್ನು ಸಹಾಯಕ ಪೊಲೀಸ್ ಆಯುಕ್ತ ಎಂದು ಹೇಳಿಕೊಳ್ಳುವ ಈತ, ಮಾಡೆಲ್‌ಗೆ

ಬೆದರಿಕೆ ಹಾಕಲು ಶುರು ಮಾಡುತ್ತಾನೆ. ಮಾನವ ಕಳ್ಳ ಸಾಗಾಣಿಕೆ ಮತ್ತು ಡ್ರಗ್ಸ್ ಜಾಲದಿಂದ ಕಾನೂನು ಬಾಹಿರವಾಗಿ ದುಡ್ಡು ನಿಮಗೆ ಬರುತ್ತಿದೆ ಎಂದು ಶಿವಂಕಿತಾಗೆ ಬೆದರಿಕೆ ಹಾಕುತ್ತಾನೆ. ಈ ವಿಚಾರಕ್ಕೆ ಸಂಬಂಧಿಸಿದಂತೆ, ಪೊಲೀಸರು ನಿಮ್ಮನ್ನು ಬಂಧಿಸಬಾರದು ಎಂದರೆ 99 ಸಾವಿರ ರೂಪಾಯಿ ನೀಡಬೇಕು ಎಂದು ಡಿಮಾಂಡ್ ಮಾಡುತ್ತಾನೆ.

ಈತನ ಕರೆಯನ್ನು ನಂಬಿ ಅವನು ಕೇಳಿದಷ್ಟು ಮೊತ್ತವನ್ನು ಈಕೆ, ಆತ ಹೇಳಿದ ಅಕೌಂಟಿಗೆ ಟ್ರಾನ್ಸಫರ್ ಮಾಡುತ್ತಾಳೆ. ತನ್ನ ಕುಟುಂಬಕ್ಕೆ ವಿಚಾರ ತಿಳಿಸಿದಾಗ ಮತ್ತು ಮನೆಯ ಸದಸ್ಯರು ವಂಚನೆಯ ಬಗ್ಗೆ

ಮತ್ತೊಂದು ಸೇರ್ಪಡೆ

ಸೈಬರ್ ಕ್ರೈಂ ಪ್ರಕರಣಕ್ಕೆ ಉತ್ತರ ಪ್ರದೇಶದ ಆಗ್ರಾದಲ್ಲಿ ನಡೆದ ಘಟನೆ, ಮತ್ತೊಂದು ಸೇರ್ಪಡೆಯಾಗಿದೆ. ಮಾಜಿ ಫೆಮಿನಾ ಮಿಸ್ ಇಂಡಿಯಾ ಶಿವಂಕಿತಾ ದೀಕ್ಷಿತ್ ಅವರನ್ನು ಡಿಜಿಟಲ್ ಅರೆಸ್ಟ್ ಮಾಡಿದ ಕಿರಾತಕರು, ಅವರಿಂದ 99 ಸಾವಿರ ರೂಪಾಯಿಯನ್ನು ಕಸಿದು ಕೊಂಡಿದ್ದಾರೆ. ಮನೆಯವರಿಗೆ ವಿಚಾರ ತಿಳಿಸಿದಾಗಲೇ, ತಾನು ವಂಚನೆಗೆ ಒಳಗಾಗಿದ್ದದ್ದು ಇವರಿಗೆ ಗೊತ್ತಾಗಿದೆ.

ವಿವರಿಸಿದಾಗಲೇ, ತಾನು ಮೋಸ ಹೋಗಿರುವುದು ಈಕೆಗೆ ಗೊತ್ತಾಗುತ್ತದೆ. ತಕ್ಷಣವೇ ಯಾವ ನಂಬರ್ ನಿಂದ ಫೋನ್ ಬಂದಿತ್ತೋ, ಅದೇ ನಂಬರಿಗೆ ವಾಪಸ್ ಕರೆ ಮಾಡಿದರೆ, ಅದು ಸ್ವಿಚ್ ಆಫ್ ಆಗಿರುತ್ತದೆ. ಇದಾದ ನಂತರ 1930 ನಂಬರಿಗೆ ಕರೆ ಮಾಡಿ

- **ಆಗ್ರಾದ ಲೋಹಮಂಡಿ ಸಿಬಿಐ ಆಫೀಸಿನಿಂದ, ಮಾಯಾಂಕ್ ತಿವಾರಿ ಎನ್ನುವ ಹೆಸರಿನಲ್ಲಿ ಬಂದ ಫೋನ್**
- **ಸೈಬರ್ ಕಳ್ಳರ ಕರೆಯನ್ನು ನಂಬಿ ಅವರು ಕೇಳಿದಷ್ಟು ಮೊತ್ತವನ್ನು ಹಾಕಿ ದುಡ್ಡು ಕಳೆದುಕೊಂಡ ಮಾಜಿ ಮಿಸ್ ಇಂಡಿಯಾ**

ವಿಚಾರವನ್ನು ತಿಳಿಸಿದ್ದಾರೆ. ಸೈಬರ್ ಬ್ರಾಂಚ್ ಘಟಕಕ್ಕೆ ಈಮೇಲ್ ಮಾಡಿ ದೂರು ನೀಡಿದ್ದಾರೆ. ಸೈಬರ್ ಕ್ರೈಂನ ಹೊಸ ಅವತಾರವೇ ಡಿಜಿಟಲ್ ಅರೆಸ್ಟ್. ಸಿಬಿಐ ಮತ್ತು ಕಸ್ಟಮ್ಸ್ ಅಧಿಕಾರಿಗಳ ಹೆಸರಿನಲ್ಲಿ ಹೆಚ್ಚಿನ ವಂಚನೆಗಳು ನಡೆಯುತ್ತದೆ.

ವಿಡಿಯೋ ಕಾಲ್ ಮೂಲಕ ಕನೆಕ್ಷನಿಗೆ ಬರುವ ಸೈಬರ್ ದುರುಳರು, ವಿದೇಶದಿಂದ ನಿಮ್ಮ ಹೆಸರಿನಲ್ಲಿ ಪಾರ್ಸೆಲ್ ಬಂದಿದೆ ಅದರಲ್ಲಿ ಡ್ರಗ್ಸ್ ಗಳಿವೆ ಎಂದು, ಅಥವಾ ಅಕ್ರಮ ಹಣ ವರ್ಗಾವಣೆಯಲ್ಲಿ ನಿಮ್ಮ ಹೆಸರಿದೆ ಎಂದು, ಅದೆಷ್ಟೋ ಜನರಿಗೆ ಮೋಸ ಮಾಡಿದ್ದಾರೆ. ಪೊಲೀಸ್ ಆಫೀಸರ್ ರೀತಿಯಲ್ಲೇ ಸಮವಸ್ತ್ರವನ್ನು ಇವರು ಹಾಕಿಕೊಂಡಿರುತ್ತಾರೆ.

ನೀವು ನಿಮ್ಮ ರೂಂ ಅನ್ನು ಲಾಕ್ ಮಾಡಿ ಕೊಂಡು ನಮ್ಮ ಜೊತೆ ಮಾತುಕತೆ ನಡೆಸಿ, ನಾವು ಫೋನ್ ಮಾಡಿರುವುದನ್ನು ಮನೆಯವರಿಗೆ ತಿಳಿಸಿದರೆ ನಿಮಗೇ ತೊಂದರೆ. ನಮ್ಮ ಕರೆ ಕಟ್ ಆಗುವ ತನಕ ಯಾರ ಜೊತೆಗೂ ಸಂಪರ್ಕವನ್ನು ಬೆಳೆಸಬೇಡಿ ಎಂದು ಹೇಳಿ, ಹಣಕ್ಕೆ ಡಿಮಾಂಡ್ ಮಾಡಲು ಆರಂಭಿಸುತ್ತಾರೆ. ಇತ್ತೀಚೆಗೆ ಹೆಚ್ಚುತ್ತಿರುವ ಸೈಬರ್ ವಂಚನೆ ಹಾಗೂ ಡಿಜಿಟಲ್ ಅರೆಸ್ಟ್‌ಗಳ ಪ್ರಕರಣಗಳಿಗೆ ಸಂಬಂಧಿಸಿದಂತೆ, ಕೇಂದ್ರ ಸರ್ಕಾರ ಒಟ್ಟು 59 ಸಾವಿರ ವಾಟ್ಸಾಪ್ ಹಾಗೂ 1,700 ಸ್ಕೈಪ್ ಐಡಿಗಳನ್ನು ಪತ್ತೆ ಮಾಡಿ ಬ್ಲಾಕ್ ಮಾಡಿದೆ. ಕೇಂದ್ರ ಗೃಹ ಇಲಾಖೆಯ ಅಂಗ ಸಂಸ್ಥೆಯಾದ ಇಂಡಿಯನ್ ಸೈಬರ್ ಕೋಆರ್ಡಿನೇಷನ್ ಸೆಂಟರ್ ಈ ಕ್ರಮವನ್ನು ತೆಗೆದುಕೊಂಡಿದೆ.

ವಿಶ್ವಾಸ ಮತ ಕಳೆದುಕೊಂಡ ಫ್ರಾನ್ಸ್ ಪ್ರಧಾನಿ ಮೈಕೆಲ್ ಬಾರ್ನಿಯರ್

ಪ್ಯಾರಿಸ್: ಫ್ರಾನ್ಸ್‌ನ ಸಂಸತ್ತಿನಲ್ಲಿ ಪ್ರಧಾನಿ ಮೈಕೆಲ್ ಬಾರ್ನಿಯರ್ ವಿಶ್ವಾಸ ಮತವನ್ನು ಕಳೆದುಕೊಂಡಿದ್ದರಿಂದ ಫ್ರಂಚ್ ಸರ್ಕಾರ ಪತನಗೊಂಡಿದೆ. ಬಲಪಂಥೀಯ ಮತ್ತು ಎಡ ಪಂಥೀಯ ಸಂಸದರ ಐತಿಹಾಸಿಕ ಅಧಿವೇಶನಲ್ಲಿ ಪ್ರಧಾನಿ ವಿರುದ್ಧ ಅವಿಶ್ವಾಸ ಮತಚಲಾಯಿಸಿದ ಪರಿಣಾಮ, ಪ್ರಧಾನಿ ಮೈಕೆಲ್ ಬಾರ್ನಿಯರ್ ಮತ್ತು ಅವರ ಕ್ಯಾಬಿನೆಟ್ ಸಚಿವರು ರಾಜೀನಾಮೆ ನೀಡುವುದು ಅನಿವಾರ್ಯವಾಗಿದೆ.

ಕಳೆದ 1962 ನಂತರ ಮೊದಲ ಬಾರಿಗೆ ರಾಷ್ಟ್ರೀಯ ಅಸೆಂಬ್ಲಿಯಲ್ಲಿ ನಡೆದ ಮತದಾನದಲ್ಲಿ 331 ಮತಗಳಿಂದ ಈ ನಿರ್ಣಯವನ್ನು ಅಂಗೀಕರಿಸಲಾಗಿದೆ. ಈ ನಡುವೆ ಫ್ರಾನ್ಸ್‌ನ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರೋನ್ ಅವರು ಮುಂದಿನ 2027 ರವರೆಗೆ ತಮ ಅವಧಿಯನ್ನು ಪೂರೈಸುವುದಾಗಿ ಹೇಳಿದ್ದಾರೆ. ಆದಾಗ್ಯೂ ಎರಡನೇ ಬಾರಿಗೆ ಹೊಸ ಪ್ರಧಾನ ಮಂತ್ರಿಯನ್ನು ನೇಮಿಸಬೇಕಾಗುತ್ತದೆ.

ಮ್ಯಾಕ್ರನ್ ಅವರು ಗುರುವಾರ ಫ್ರೆಂಚ್ ಜನತೆ ಯನು ಉದ್ದೇಶಿಸಿ ಮಾತನಾಡಲಿದ್ದಾರೆ

ಎಂದು ಅವರ ಕಚೇರಿ ತಿಳಿಸಿದೆ. ಅಷ್ಟರೊಳಗೆ ಬಾರ್ನಿಯರ್ ಔಪಚಾರಿಕವಾಗಿ ರಾಜೀನಾಮೆ ನೀಡುವ ನಿರೀಕ್ಷೆಯಿದೆ. ಕಳೆದ ಸೆಪ್ಟೆಂಬರ್‌ನಲ್ಲಿ ನೇಮಕಗೊಂಡ ಸಂಪ್ರದಾಯವಾದಿ, ಬಾರ್ನಿಯರ್ ಫ್ರಾನ್ಸ್‌ನ ಆಧುನಿಕ ಗಣರಾಜ್ಯದಲ್ಲಿ ಅತಿ ಕಡಿಮೆ ಅವಧಿಯ ಪ್ರಧಾನ ಮಂತ್ರಿಯಾಗುತ್ತಾರೆ.

ಈ ಅವಿಶ್ವಾಸ ನಿರ್ಣಯ ಎಲ್ಲವನ್ನೂ ಹೆಚ್ಚು ಗಂಭೀರ ಮತ್ತು ಕಷ್ಟಕರವಾಗಿಸುತ್ತದೆ. ಅದು ನನಗೆ ಖಚಿತವಾಗಿದೆಎಂದು ಅವರು ಹೇಳಿದರು. ಬಾರ್ನಿಯರ್ ಅವರ ಪ್ರಸ್ತಾವಿತ ಬಜೆಟ್‌ಗೆ ತೀವ್ರ ವಿರೋಧದಿಂದ ಏರಿತು. ಫ್ರಾನ್ಸ್‌ನ ಸಂಸತ್ತಿನ ಕೆಳಮನೆಯಾದ ನ್ಯಾಶನಲ್ ಅಸೆಂಬ್ಲಿಯಲ್ಲಿ ಯಾವುದೇ ಪಕ್ಷವು ಬಹುಮತವನ್ನು ಹೊಂದಿಲ್ಲ

ಫ್ರಾನ್ಸ್ ಮತ್ತು ಫ್ರೆಂಚರಿಗೆ ಘನತೆಯಿಂದ ಸೇವೆ ಸಲ್ಲಿಸಿರುವುದು ನನಗೆ ಗೌರವವಾಗಿ ಉಳಿಯುತ್ತದೆ ಎಂದು ನಾನು ನಿಮಗೆ ಹೇಳಬಲ್ಲೆ ಎಂದು ಬಾರ್ನಿಯರ್ ಮತದಾನದ ಮೊದಲು ತಮ ಅಂತಿಮ ಭಾಷಣದಲ್ಲಿ ಹೇಳಿದರು.

ಹಾಗಾಗಿ ಮತ ವಿಭಜನೆಯಾಗಿದೆ. ಮ್ಯಾಕ್ರನ್ ಹೊಸ ಪ್ರಧಾನ ಮಂತ್ರಿಯನ್ನು ನೇಮಿಸಬೇಕು, ಆದರೆ ಛಿದ್ರಗೊಂಡ ಸಂಸತ್ತು ಬದಲಾಗದೆ ಉಳಿದಿದೆ. ಕನಿಷ್ಠ ಜುಲೈ ವರೆಗೆ ಯಾವುದೇ ಹೊಸ ಶಾಸಕಾಂಗ ಚುನಾವಣೆಗಳನ್ನು ನಡೆಸಲಾಗುವುದಿಲ್ಲ, ಇದು ನೀತಿ ನಿರೂಪಕರಿಗೆ ಸಂಭಾವ್ಯ ಪ್ರತಿಕೂಲತೆಯನ್ನು ಸೃಷ್ಟಿಸುತ್ತದೆ ಎಂದು ಹೇಳಲಾಗಿದೆ.

ಅಮೆರಿಕ ಶೈಲಿಯಂತೆ ಅಧಿಕಾರ ಕಳೆದುಕೊಳ್ಳುವ ಅಪಾಯದಲ್ಲಿಲ್ಲದಿದ್ದರೂ, ಫ್ರಾನ್ಸ್ ಅಧ್ಯಕ್ಷರಿಗೆ ರಾಜಕೀಯ ಅಸ್ಥಿರತೆಯು ಹಣಕಾಸಿನ ಮಾರುಕಟ್ಟೆಗಳನ್ನು ಪ್ರಚೋದಿಸಬಹುದು ಎನ್ನಲಾಗಿದೆ.

ಪಾಕಿಸ್ತಾನದ ನೆರವಿನೊಂದಿಗೆ 12 ಭಾರತೀಯರ ರಕ್ಷಣೆ

ಪೋರಬಂದರ್: ಉತ್ತರ ಹಿಂದೂ ಮಹಾಸಾಗರದಲ್ಲಿ ಮುಳುಗುವ ಸ್ಥಿತಿಯಲ್ಲಿದ್ದ ಸರಕುಸಾಗಣೆ ಹಡಗಿನಲ್ಲಿದ್ದ 12 ಸಿಬ್ಬಂದಿಯನ್ನು ಭಾರತೀಯ ಕರಾವಳಿ ರಕ್ಷಣಾಪಡೆ ಸಿಬ್ಬಂದಿ ರಕ್ಷಿಸಿದ್ದಾರೆ.'ಭಾರತೀಯ ಕರಾವಳಿ ರಕ್ಷಣಾ ಪಡೆ ಮತ್ತು ಪಾಕಿಸ್ತಾನ ಸಮುದ್ರಮಾರ್ಗ ರಕ್ಷಣಾ ಸಂಸ್ಥೆ (ಪಿಎಂಎಸ್‌ಎ) ಜಂಟಿಯಾಗಿ ಈ ರಕ್ಷಣಾ ಕಾರ್ಯವನ್ನು ಕೈಗೊಂಡಿದ್ದವು. ಮಾನವೀಯ ನೆಲೆಯ ಈ ಕಾರ್ಯದಲ್ಲಿ ಉಭಯ ದೇಶಗಳ ಸಿಬ್ಬಂದಿ ನಡುವೆ ಕಾರ್ಯಾಚರಣೆಯುದ್ದಕ್ಕೂ ಉತ್ತಮ ಸಂವಹನ ಇತ್ತು' ಎಂದು ಹೇಳಿಕೆ ತಿಳಿಸಿದೆ.

ಎಂಎಸ್‌ವಿ ಎಐ ಪಿರನ್‌ಪಿರ್ ಹೆಸರಿನ ಹಡಗು ಗುಜರಾತ್‌ನ ಪೋರಬಂದರ್‌ನಿಂದ ಇರಾನ್ ಅಬ್ಬಾಸ್ ಬಂದರಿಗೆ ತೆರಳುತ್ತಿತ್ತು. ಭಾರತದ ಜಲಗಡಿಯ ಹೊರಗೆ, ಪಾಕಿಸ್ತಾನದ ಶೋಧ ಮತ್ತು ರಕ್ಷಣಾ ವಲಯದಲ್ಲಿ ಹಡಗು ಆಪತ್ತಿಗೆ ಸಿಲುಕಿದ್ದಾಗ ರಕ್ಷಣಾ ಕಾರ್ಯ ನಡೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸರಕುಸಾಗಣೆ ಹಡಗು ಡಿ.2ರಂದು ಪೋರಬಂದರ್‌ನ ಬಂದರಿನಿಂದ ನಿರ್ಗಮಿಸಿತ್ತು. ಮಾರ್ಗಮಧ್ಯೆ ಬುಧವಾರ ಬೆಳಗಿನಜಾವ ಪ್ರವಾಹ ಮತ್ತು ನೀರಿನ ಏರಿಳಿತದ ಪರಿಣಾಮ ಮುಳುಗಲು ಆರಂಭಿಸಿತ್ತು. ಆಪತ್ತು ಕುರಿತ ಕರೆ ಬಂದ ಕೂಡಲೇ ಜಾಗೃತರಾದ ಕರಾವಳಿ ಕಾವಲು ಪಡೆಯ ಸಿಬ್ಬಂದಿ ಪೊರಬಂದರ್‌ನ ಐಸಿಜಿ ಪ್ರಾದೇಶಿಕ ಕಚೇರಿಗೆ ತುರ್ತು ಮಾಹಿತಿ ನೀಡಿದ್ದು, ಪಾಕ್ ಸಂಸ್ಥೆಗೂ ನೆರವು ಕೋರಲಾಯಿತು ಎಂದು ತಿಳಿಸಿದೆ. ರಕ್ಷಣಾ ಕಾರ್ಯದ ಹಡಗು ಸಾರ್ಥಕ್ ಸ್ಥಳ ತಲುಪಿಸಿದ್ದು, ಹಡಗಿನಲ್ಲಿದ್ದ 12 ಸಿಬ್ಬಂದಿ ರಕ್ಷಿಸಲಾಯಿತು. ಈ ಸ್ಥಳ ದ್ವಾರಕಾದಿಂದ ಪಶ್ಚಿಮಕ್ಕೆ 270 ಕಿ.ಮೀ ದೂರದಲ್ಲಿತ್ತು. ಸಿಬ್ಬಂದಿಗೆ ರಕ್ಷಿಸಲಾದ ಸಾರ್ಥಕ್‌ನಲ್ಲಿಯೇ ವೈದ್ಯಕೀಯ ಚಿಕಿತ್ಸೆ ನೆರವು ನೀಡಿ, ಪೋರಬಂದರ್ ಬಂದರಿಗೆ ಕರೆತರಲಾಯಿತು ಎಂದು ಹೇಳಿಕೆ ವಿವರಿಸಿದೆ. ಈ ಕುರಿತಂತೆ ಪಿಎಂಎಸ್‌ಎ ಕೂಡಾ ಹೇಳಿಕೆ ನೀಡಿದೆ. 'ಹಡಗು ಪಾಕಿಸ್ತಾನದ ವಿಶೇಷ ಆರ್ಥಿಕ ವಲಯ ವ್ಯಾಪ್ತಿಯಲ್ಲಿ ಆಪತ್ತಿಗೆ ಸಿಲುಕಿತ್ತು. ಪಿಎಂಎಸ್‌ಎ ವಿಮಾನವನ್ನು ಬಳಸಿ ಸ್ಥಳ ಗುರುತಿಸಲಾಯಿತು. ಉತ್ತಮ ಸಹಕಾರದಿಂದಾಗಿ ಭಾರತೀಯ ಹಡಗಿನಲ್ಲಿದ್ದ ಎಲ್ಲಾ ಸಿಬ್ಬಂದಿಯನ್ನು ರಕ್ಷಿಸಲಾಯಿತು' ಎಂದು ತಿಳಿಸಿದೆ.

ಸೊರೇನ್ ಸಂಪುಟಕ್ಕೆ 11 ಮಂದಿ ಸೇರ್ಪಡೆ

ರಾಂಚಿ : ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರು ಗುರುವಾರ ಸಚಿವ ಸಂಪುಟ ವಿಸ್ತರಿಸಿದ್ದು, 11 ಶಾಸಕರು ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು.

ಜಾರ್ಖಂಡ್ ಮುಕ್ತಿ ಮೋರ್ಚಾದ (ಜೆಎಂಎಂ) ಆರು ಮತ್ತು ಮಿತ್ರ ಪಕ್ಷಗಳಾಗಿರುವ ಕಾಂಗ್ರೇಸ್‌ನ ನಾಲ್ವರು ಮತ್ತು ಆರ್‌ಜೆಡಿ ಪಕ್ಷದ ಒಬ್ಬರು ಸಂಪುಟದಲ್ಲಿ ಸ್ಥಾನ ಪಡೆದರು. ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಜೆಎಂಎಂ ನೇತೃತ್ವದ ಮೈತ್ರಿಕೂಟವು ಸ್ಪಷ್ಟ ಬಹುಮತ ಪಡೆದಿತ್ತು. ಜೆಎಂಎಂ ನಾಯಕ ಹೇಮಂತ್ ಸೊರೇನ್ ಅವರು ನ.28ರಂದು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದರು. 81 ಸದಸ್ಯ ಬಲದ ವಿಧಾನಸಭೆಯಲ್ಲಿ ಮೈತ್ರಿಕೂಟವು 56 ಸ್ಥಾನಗಳನ್ನು ಪಡೆದಿತ್ತು.

ಸಚಿವರಾದ 11 ಜನರಲ್ಲಿ ಆರು ಮಂದಿ ಹೊಸಬರು. ಉಳಿದಂತೆ ನಾಲ್ವರು ಎರಡನೇ ಬಾರಿಗೆ ಮತ್ತು ಒಬ್ಬರು ಮೂರನೇ ಬಾರಿಗೆ ಸಚಿವರಾಗಿ ಸಂಪುಟದಲ್ಲಿ ಸ್ಥಾನ ಪಡೆದಿದ್ದಾರೆ. ರಾಜಭವನದಲ್ಲಿ ನಡೆದ ಸಮಾರಂಭದಲ್ಲಿ ರಾಜ್ಯಪಾಲ ಸಂತೋಷ್ ಕುಮಾರ್ ಗ್ಯಾಂಗ್ವಾರ್ ಅವರು ಪ್ರಮಾಣವಚನ ಬೋಧಿಸಿದರು. ಜಾರ್ಖಂಡ್ ವಿಧಾನಸಭೆಯ ಅಧಿವೇಶನವು ಡಿಸೆಂಬರ್ 9 ರಿಂದ 12ರವರೆಗೂ ನಡೆಯಲಿದೆ. ಜೆಎಂಎಂ ಪಕ್ಷದ ಹಿರಿಯ ಶಾಸಕ ಸ್ಟೀಫನ್ ಮರಂಡಿ ಅವರು ಹಂಗಾಮಿ ಸ್ಪೀಕರ್ ಆಗಿ ಈಗಾಗಲೇ ನೇಮಕಗೊಂಡಿದ್ದಾರೆ.

ಕತ್ರಾ ವ್ಯಾಪ್ತಿಯಲ್ಲಿ ಮದ್ಯ, ಮಾಂಸಾಹಾರ ಮಾರಾಟ ಸೇವನೆ ನಿಷೇಧ

ಜಮ್ಮು: ಜಮ್ಮು-ಕಾಶ್ಮೀರದ ರಾಜ್ಯದ ಕತ್ರಾದ ಉಪವಿಭಾಗದ ವ್ಯಾಪ್ತಿಯಲ್ಲಿ ಮದ್ಯ ಮತ್ತು ಮಾಂಸಾಹಾರಿ ಆಹಾರದ ಮಾರಾಟ, ಸ್ವಾಧೀನ ಮತ್ತು ಸೇವನೆಯನ್ನು ಪ್ರತಿಬಂಧಿಸಿ ಕತ್ರಾದ ಉಪವಿಭಾಗೀಯ ಮ್ಯಾಜಿಸ್ಟ್ರೇಟ್ ಪಿಯೂಷ್ ಧೋತ್ರಾ ನಿಷೇಧಾಜ್ಞೆ ಹೊರಡಿಸಿದ್ದಾರೆ. ಜಮ್ಮು, ಕಾಶೀರದ ರಿಯಾಸಿ ಜಿಲ್ಲೆಯ ವೈಷ್ಣೋದೇವಿ ದೇಗುಲಕ್ಕೆ ಭೇಟಿ ನೀಡುವ ಯಾತ್ರಾರ್ಥಿಗಳ ಮೂಲ ಶಿಬಿರ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಬಿಎನ್‌ಎಸ್‌ಎಸ್ ಸೆಕ್ಷನ್ 163 ರ ಅಡಿ ಜಾರಿಗೊಳಿಸಲಾದ ಈ ಕ್ರಮವು ಪೂಜ್ಯ ವೈಷ್ಣೋದೇವಿ ದೇಗುಲಕ್ಕೆ ಹೋಗುವ ಟ್ರ್ಯಾಕ್ ಸೇರಿದಂತೆ ಕತ್ರಾ ಮತ್ತು ಪಕ್ಕದ ಪ್ರದೇಶಗಳಿಗೆ ಅನ್ವಯಿಸುವಂತೆ ಈ ಆದೇಶ ಹೊರಡಿಸಲಾಗಿದೆ. ಈ ಆದೇಶ ಎರಡು ತಿಂಗಳವರೆಗೆ ಜಾರಿಯಲ್ಲಿರುತ್ತದೆ ಎಂದು ಉಪವಿಭಾಗೀಯ ಮ್ಯಾಜಿಸ್ಟ್ರೇಟ್ ಪ್ರಕಟಣೆ ಹೊರಡಿಸಿದೆ.

ಈ ಎಲ್ಲಾ ಕಡೆ ನಿಷೇಧ ಜಾರಿಯಲ್ಲಿರಲಿದೆ. ಕತ್ರಾದಿಂದ ಹೋಲಿ ಕೇವ್ ಟ್ರ್ಯಾಕ್, ಹತ್ತಿರದ ರಸ್ತೆಗಳಿಂದ ಎರಡು ಕಿಲೋಮೀಟರ್‌ವ್ಯಾಪ್ತಿಯಲ್ಲಿರುವ

ಹಳ್ಳಿಗಳು ಸೇರಿದಂತೆ ಹಲವಾರು ಪ್ರಮುಖ ಸ್ಥಳಗಳಲ್ಲಿ ನಿಷೇಧವು ಅನ್ವಯವಾಗಲಿದೆ.

ಇದು ನಿರ್ದಿಷ್ಟವಾಗಿ ಅರ್ಲಿ, ಹಂಸಾಲಿ ಮತ್ತು ಮಟ್ಯಾಲ್ಯಂತಹ ಪ್ರದೇಶಗಳನ್ನು ಒಳಗೊಳ್ಳುತ್ತದೆ. ಅಷ್ಟೇ ಅಲ್ಲದೇ ಕತ್ರಾ-ಟಿಕ್ರಿ, ಕತ್ರಾ-ಜಮು, ಕತ್ರಾ-ರಿಯಾಸಿ ಮತ್ತು ಪಂಥಾಲ್-ಡೊಮೈಲ್ ರಸ್ತೆಗಳ ಉದ್ದಕ್ಕೂ ಈ ಆದೇಶ ಜಾರಿಯಲ್ಲಿರಲಿದೆ.

ಚಂಬಾ, ಸೆರ್ಲಿ, ಭಗ್ತಾ, ಕುಂಡೋರಿಯನ್, ಕೋಟ್ಲಿ ಬಜಾಲಿಯನ್, ನೊಮೈನ್, ಮಾಫಲ್, ನೌ ದೇವಿಯಾನ್, ಅರ್ಫ ಜಿಟ್ಟೋ ಮುಂತಾದ ಗ್ರಾಮಗಳು ಸಹ ಆದೇಶದ ವ್ಯಾಪ್ತಿಯಲ್ಲಿ ಬರುತ್ತವೆ ಎಂದು ಆದೇಶದಲ್ಲಿ ತಿಳಿಸಲಾಗಿದೆ. ವಾರ್ಷಿಕವಾಗಿ ಲಕ್ಷಾಂತರ ಭಕ್ತರನ್ನು ಆಕರ್ಷಿಸುವ ದೇಗುಲ, ಅದರ

ನಿಷೇಧವು ಎಲ್ಲಾ ರೀತಿಯ ಮಾಂಸಾಹಾರಿ ಆಹಾರವನ್ನು ಒಳಗೊಂಡಿರುತ್ತದೆ, ಉದಾಹರಣೆಗೆ ಮೊಟ್ಟೆಗಳು, ಕೋಳಿ, ಮಾಂಸ, ಸಮುದ್ರಾಹಾರ ಮತ್ತು ಇತರ ಪ್ರಾಣಿ ಆಧಾರಿತ ಉತ್ಪನ್ನಗಳನ್ನು ಒಳಗೊಂಡಿದೆ.

ಸುತ್ತಮುತ್ತಲಿನ ಪ್ರದೇಶಗಳ ಪಾವಿತ್ರ್ಯತೆಯನ್ನು ಕಾಪಾಡುವ ಉದ್ದೇಶದಿಂದ ಈ ಆದೇಶ ಜಾರಿ ಮಾಡಲಾಗಿದೆ. ಮತ್ತು ದೇಗುಲದ ಪಾವಿತ್ರ್ಯತೆ ಕಾಪಾಡುವ ಗುರಿಯನ್ನು ಈ ಆದೇಶ ಹೊಂದಿದೆ.

ಕತ್ರಾ ರೈಲು ನಿಲ್ದಾಣದ ಬಳಿ ಸೇರಿದಂತೆ ಕತ್ರಾಕ್ಕೆ ಹೋಗುವ ಪ್ರಮುಖ ಮಾರ್ಗಗಳಲ್ಲಿ ನಿಷೇಧವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗುವುದು ಎಂದು ಅಧಿಕಾರಿಗಳು ಎಚ್ಚರಿಸಿದ್ದಾರೆ. ಯಾತ್ರಾರ್ಥಿಗಳಿಗೆ ಸಾಮರಸ್ಯ ಮತ್ತು ಗೌರವಯುತ ವಾತಾವರಣ ನಿರ್ಮಾಣ ಮಾಡುವ ಉದ್ದೇಶದಿಂದ ಈ ನಿರ್ಬಂಧಗಳನ್ನು ಅನುಸರಿಸಲು ನಿವಾಸಿಗಳು, ಸಂದರ್ಶಕರಲ್ಲಿ ಮನವಿ ಮಾಡಲಾಗಿದೆ.

ಮೇಕ್ ಇನ್ ಇಂಡಿಯಾದಿಂದ ಉದ್ಯಮಗಳಿಗೆ ಭಾರತದ ನಾಯಕತ್ವ ಉತ್ತೇಜನ

ಮಾಸ್ಕೋ: ಮೇಕ್ ಇನ್ ಇಂಡಿಯಾ ಮೂಲಕ ಸಣ್ಣ ಮತ್ತು ದೊಡ್ಡ

ಸೂಲಗಿತ್ತಿಯ ಕಥಾನಕ 'ತಾಯವ್ವ' ಅನಾವರಣ

ಕನ್ನಡ ಚಿತ್ರರಂಗದಲ್ಲೀಗ ಕಮರ್ಷಿಯಲ್ ಸಿನಿಮಾಗಳ ಅಬ್ಬರದ ನಡುವೆಯೇ ಒಳ್ಳೊಳ್ಳೆಯ ಕಂಟೆಂಟ್ ಸಿನಿಮಾಗಳು ಪ್ರೇಕ್ಷಕರ ಗಮನ ಸೆಳೆಯುತ್ತವೆ. ಈ ಸಾಲಿಗೀಗ ಹೊಸ ಸೇರ್ಪಡೆ ತಾಯವ್ವ. ಸೂಲಗಿತ್ತಿ ಸುತ್ತ ಸಾಗುವ ಕಥೆಯಾಗಿರುವ 'ತಾಯವ್ವ'ನಿಗೆ ವಿಪಕ್ಷ ನಾಯಕ ಆರ್.ಅಶೋಕ್ ಹಾಗೂ ಹಿರಿಯ ನಟಿ ಉಮಾಶ್ರೀ ಸಾಥ್ ಕೊಟ್ಟಿದ್ದಾರೆ. ಬೆಂಗಳೂರಿನ ರೇಣುಕಾಂಬ ಸ್ಟುಡಿಯೋದಲ್ಲಿ ತಾಯವ್ವ ಟೈಟಲ್ ಲಾಂಚ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮಕ್ಕೆ ವಿಶೇಷ ಅತಿಥಿಯಾಗಿ ಆಗಮಿಸಿದ್ದ ಆರ್.ಅಶೋಕ್ ಹಾಗೂ ಉಮಾಶ್ರೀ ಟೈಟಲ್ ಲಾಂಚ್ ಮಾಡಿ ಹೊಸತಂಡಕ್ಕೆ ಬೆಂಬಲ ಕೊಟ್ಟರು. ಇದೇ ವೇಳೆ ಆರ್.ಅಶೋಕ್ ಮಾತನಾಡಿ, ತಾಯವ್ವ ಮನಸ್ಸಿಗೆ ಮುಟ್ಟುವ ಪದ. ತಾಯಿ ಅನ್ನೋ ಪದವೇ ಹಾಗೇ. ವಿಶೇಷವಾಗಿ ಹೆಣ್ಣುಮಕ್ಕಳ ಬಗ್ಗೆ ತಯಾರಾಗಿರುವ ಸಿನಿಮಾ ಇದು. ಮಕ್ಕಳನ್ನು ಹೊರಲು ತಾಯಿಬೇಕು. ಹೆಂಡ್ತಿಯಾಗಿ ನಮ್ಮ ಎಲ್ಲಾ ಕಷ್ಟ ಸುಖಗಳಲ್ಲಿ ನಿಲ್ಲಲು ಹೆಣ್ಣು ಬೇಕು. ಆದರೆ ಮಗಳಾಗಿ ಬೇಡ ಅನ್ನುವುದು ಬಂದಿದೆ. ನಾನು ಮಂಡ್ಯದ ಸಾಕಷ್ಟು ಕಡೆ ಹೋಗಿದ್ದೆ. ಅಲ್ಲೊಂದು ಅಲೆಮನೆಯಲ್ಲಿ ಲ್ಯಾಪ್ ಟಪ್ ಇಟ್ಕೊಂಡು ಅಲ್ಲೇ ಪರೀಕ್ಷೆ ಮಾಡಿ ಹೆಣ್ಣು ಅಂತಾ ಹೇಳಿದ್ರೆ ಅಲ್ಲೇ ಅಬಾಷನ್ ಮಾಡುವುದು. ಕದ್ದು ಮುಚ್ಚಿ ಹೆಣ್ಣು ಮಗುವನ್ನು ಕೊಲೆ ಮಾಡುವಂತಹದ್ದು. ಈ ತರದ ಘಟನೆ ಒಂದಲ್ಲ ಲಕ್ಷಾಂತರ ಆಗಿದೆ. ಈಗ ಬರುತ್ತಾ ಬರುತ್ತಾ ಜನಕ್ಕೆ ಒಂದು ಜಾಗೃತಿ ಬಂದಿದೆ. ಜನ ಗಂಡು ಹೆಣ್ಣು ಎರಡನ್ನು ಸ್ವೀಕಾರ ಮಾಡುವ ಮನಸ್ಸು ಬಂದಿದೆ. ಹೆಣ್ಣು ವಿಚಾರ ಬಂದಾಗ ತಾಯಿ ಭಾವನೆ ಇವೆಲ್ಲಾ ಪ್ರಮುಖವಾಗುತ್ತದೆ. ಈ ದೃಷ್ಟಿಯಿಂದ 'ತಾಯವ್ವ' ಸಿನಿಮಾ ಮೂಡಿ ಬಂದಿದೆ. ಟೈಟಲ್ ಸಾಂಗ್ ಬಿಡುಗಡೆ ಮಾಡಲಾಗಿದೆ.

ಅಲ್ಲು ಅರ್ಜುನ್ ಸಿನಿಮಾದಲ್ಲಿ ಕನ್ನಡ ಕಲಾವಿದರ ದಂಡು

ಐಕಾನ್ ಸ್ಟಾರ್ ಅಲ್ಲು ಅರ್ಜುನ್ ನಟನೆಯ 'ಪುಷ್ಪ 2' ಸಿನಿಮಾ ಡಿ.5ರಂದು ಬಹುಭಾಷೆಗಳಲ್ಲಿ ರಿಲೀಸ್ ಆಗಿದೆ. ಬಿಡುಗಡೆಯ ಬಳಿಕ ಪುಷ್ಪರಾಜ್ ಫೀವರ್ ಶುರುವಾಗಿದೆ. ಕೆಲ ಮಂದಿ ಸಿನಿಮಾವನ್ನು ಹಾಡಿ ಹೊಗಳಿ ಅಟ್ಟಕ್ಕೇರಿಸಿದರೆ, ಇನ್ನೂ ಕೆಲವರು ಸಿನಿಮಾ ಒಂದು ರೇಂಜಿಗಿದೆ ಎಂದು ಮಿಶ್ರ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ. ಇದರೆಲ್ಲದರ ನಡುವೆ 'ಪುಷ್ಪ 2' ಸಿನಿಮಾದಲ್ಲಿ ಕನ್ನಡ ಕಲಾವಿದರ ದಂಡು ಹೈಲೆಟ್ ಆಗಿದೆ. ಕನ್ನಡದ 'ಕಿರಿಕ್ ಪಾರ್ಟಿ' ನಟಿ ರಶ್ಮಿಕಾ ಮಂದಣ್ಣ ನ್ಯಾಷನಲ್ ಕ್ರಶ್ ಆಗಿ ಪರಭಾಷೆಗಳಲ್ಲಿ ಸದ್ದು ಮಾಡುತ್ತಿದ್ದಾರೆ. ಸಿನಿಮಾದಲ್ಲಿ ಅಲ್ಲು ಅರ್ಜುನ್‌ಗೆ ನಾಯಕಿಯಾಗಿ ಶ್ರೀವಲ್ಲಿ ಪಾತ್ರಕ್ಕೆ ಕೊಡಗಿ ಬೆಡಗಿ ಜೀವ ತುಂಬಿದ್ದಾರೆ. ರಶ್ಮಿಕಾ ನಟನೆಯ ಜೊತೆ ಫೀಲಿಂಗ್ಸ್ ಡ್ಯಾನ್ಸ್‌ಗೆ ಅನೇಕರಿಂದ ಮೆಚ್ಚುಗೆ ವ್ಯಕ್ತವಾಗಿದೆ. ಕನ್ನಡಿಗ ತಾರಕ್ ಪೊನ್ನಪ್ಪ ಅವರು ಅಲ್ಲು ಅರ್ಜುನ್ ಮುಂದೆ ತೊಡೆ ತಟ್ಟಿದ್ದಾರೆ. ಅಲ್ಲು ಅರ್ಜುನ್ ಮತ್ತು ತಾರಕ್ ನಡುವಿನ ಆಯಕ್ಷನ್ ಸೀಕ್ವೆನ್ಸ್ ಸಿನಿಮಾದಲ್ಲಿ ರೋಚಕವಾಗಿದೆ. ತಾರಕ್ ನಟನೆ ಮತ್ತು ಅವರ ಲುಕ್‌ಗೆ ಭರ್ಜರಿ ರೆಸ್ಪಾನ್ಸ್ ಸಿಕ್ಕಿದೆ. ಪರಭಾಷೆಗಳಲ್ಲಿ ಅವರಿಗೆ ಬೇಡಿಕೆ ಹೆಚ್ಚಾಗಿದೆ. ಇನ್ನೂ ಕನ್ನಡದ 'ಕಿಸ್' ಬೆಡಗಿ ಶ್ರೀಲೀಲಾ ಅವರು 'ಕಿಸ್ಸಿಕ್' ಐಟಂ ಹಾಡಿಗೆ ಸೊಂಟ ಬಳುಕಿಸಿದ್ದಾರೆ. ಮಾದಕ ಲುಕ್ ಮತ್ತು ಡ್ಯಾನ್ಸ್‌ನಿಂದ ಪಡ್ಡೆಹುಡುಗರ ನಿದ್ದೆ ಕದ್ದಿದ್ದಾರೆ. ಶ್ರೀಲೀಲಾ ಕೂಡ ತೆಲುಗಿನ ಬೇಡಿಕೆಯ ನಟಿಯರಲ್ಲಿ ಒಬ್ಬರಾಗಿದ್ದಾರೆ. ಡಾಲಿ ಧನಂಜಯ ಅವರು ಜಾಲಿ ರೆಡ್ಡಿ ಎಂಬ ಪಾತ್ರದಲ್ಲಿ ನಟಿಸಿದ್ದಾರೆ. ಅವರ ಪಾತ್ರಕ್ಕೂ ಸುಕುಮಾರ್ ಪ್ರಾಮುಖ್ಯತೆ ನೀಡಿದ್ದಾರೆ. ಎರಡನೇ ಭಾಗದಲ್ಲೂ ಡಾಲಿ ಎಂಟ್ರಿ ಕೊಟ್ಟಿದ್ದಾರೆ. ಆದರೆ ಪಾರ್ಟ್ 3ನಲ್ಲಿ ಅವರ ಪಾತ್ರ ಹೇಗೆಲ್ಲಾ ತಿರುವು ಪಡೆಯಲಿದೆ ಎಂಬುದನ್ನು ಕಾದುನೋಡಬೇಕಿದೆ. ನಂದ ಗೋಪಾಲ್ ಕೂಡ 'ಪುಷ್ಪ 2'ನಲ್ಲಿ ನಟಿಸಿದ್ದಾರೆ. ಅವರ ಪಾತ್ರ ಚಿಕ್ಕದಾಗಿದೆ. ತೆರೆಯ ಮೇಲೆ ಹೆಚ್ಚು ಕಾಣಿಸಿಕೊಳ್ಳದೇ ಇದ್ದರೂ ಕನ್ನಡದ ನಟ ಕಾಣಿಸಿಕೊಂಡಿದ್ದಾರೆ ಎಂಬುದು ವಿಶೇಷ.

ಇಬ್ಬರು ಮಕ್ಕಳ ದತ್ತು ಪಡೆದಿದ್ದಾರೆ ಶ್ರೀಲೀಲಾ

ಶ್ರೀಲೀಲಾ ತಮ್ಮ ಸಿನಿಮಾಗಳಿಂದ ಸಖತ್ ಹೆಸರು ಮಾಡುತ್ತಿದ್ದಾರೆ. ಒಳ್ಳೆಯ ನಟಿ, ಡ್ಯಾನ್ಸರ್ ಆಗಿರುವ ಶ್ರೀಲೀಲಾ, ಸಮಾಜದ ಬಗ್ಗೆ ಕಾಳಜಿ ಇರುವ ವ್ಯಕ್ತಿ ಸಹ. ಶ್ರೀಲೀಲಾ ಇಬ್ಬರು ವಿಶೇಷ ಚೇತನ ಮಕ್ಕಳನ್ನು ದತ್ತು ಪಡೆದು ಅವರ ಭವಿಷ್ಯಕ್ಕೆ ಭದ್ರತೆ ಒದಗಿಸಿದ್ದಾರೆ.

'ಪುಷ್ಪ 2 ಚಿತ್ರ ರಿಲೀಸ್ ಆಗಿದೆ. ಈ ಚಿತ್ರದಲ್ಲಿ ಅಲ್ಲು ಅರ್ಜುನ್, ರಶ್ಮಿಕಾ ಮಂದಣ್ಣ ಮೊದಲಾದವರು ನಟಿಸಿದ್ದಾರೆ. ಈ ಚಿತ್ರದಿಂದ ಮತ್ತೋರ್ವ ನಟಿ ಫೇಮಸ್ ಆಗಿದ್ದಾರೆ. ಅವರು ಬೇರಾರೂ ಅಲ್ಲ ಕನ್ನಡದ ನಟಿ ಶ್ರೀಲೀಲಾ. ಶ್ರೀಲಾಲ ಸದ್ಯ 'ಪುಷ್ಪ 2: ದಿ ರೂಲ್' ಚಿತ್ರದ 'ಕಿಸಿಕ್' ಹಾಡಿಗೆ ಸುದ್ದಿಯಲ್ಲಿದ್ದಾರೆ. ಕಳೆದ 2 ವರ್ಷಗಳಲ್ಲಿ, ಅವರು ಮೂರು ಮೆಗಾಬಜೆಟ್ ಪ್ಯಾನ್ ಇಂಡಿಯಾ ಚಲನಚಿತ್ರಗಳಲ್ಲಿ ಪ್ರಮುಖ ಪಾತ್ರಗಳನ್ನು ನಿರ್ವಹಿಸಿದ್ದಾರೆ. ಆದರೆ, ಈ ಮೂರೂ ಚಿತ್ರಗಳು ಗಲ್ಲಾಪೆಟ್ಟಿಗೆಯಲ್ಲಿ ವಿಫಲವಾದವು. ಆದರೆ ಅವರ ಕೆಲಸ ಮತ್ತು ನಟನೆಗಾಗಿ ಅವರು ಇನ್ನೂ ಮೆಚ್ಚುಗೆ ಪಡೆದಿದ್ದಾರೆ.

ಅವರು ಈ ಮೊದಲು ಮಕ್ಕಳನ್ನು ದತ್ತು ಪಡೆದಿದ್ದರು. 'ಕಿಸ್', 'ಭರಾಟೆ' ಮುಂತಾದ ಸಿನಿಮಾಗಳ ಮೂಲಕ ಅವರು ಎಲ್ಲರ ಗಮನ ಸೆಳೆದಿದ್ದಾರೆ. ತೆಲುಗಿನ 'ಪೆಳ್ಳಿ ಸಂದಡಿ' ಚಿತ್ರದಲ್ಲಿ ನಟಿಸಿದ ಬಳಿಕ ಅವರ ಖ್ಯಾತಿ ದುಪ್ಪಟ್ಟಾಗಿದೆ. ಅಲ್ಲಿನ ಸ್ಟಾರ್ ನಟರ ಚಿತ್ರಗಳಿಗೆ ಅವರು ನಾಯಕಿಯಾಗಿ ಆಯ್ಕೆ ಆಗುತ್ತಿದ್ದಾರೆ. ಅವರು 'ಪುಷ್ಪ 2' ಚಿತ್ರದ ವಿಶೇಷ ಹಾಡಿಗೆ ಹೆಜ್ಜೆ ಹಾಕಿದ್ದಾರೆ. ಶ್ರೀಲೀಲಾ ಅವರಿಗೆ ಪ್ರಸ್ತುತ 23 ವರ್ಷ. ಆದರೆ ಕೇವಲ 21ನೇ ವಯಸ್ಸಿನಲ್ಲಿ ಅವರು ಎರಡು ಮಕ್ಕಳ ತಾಯಿಯಾದರು. ಅವರು ನಟಿಸಿದ 'ಬೈ ಟೂ ಲವ್' ಚಿತ್ರದ ಪ್ರಚಾರದ ಸಮಯ. ಆಗ ಅವರು ಮಾತೃ ಶ್ರೀ ಮನೋವಿಕಾಸ ಕೇಂದ್ರಕ್ಕೆ ಭೇಟಿ ನೀಡಿದ್ದರು.

ಸಿನಿ ವಾಹಿನಿ

ತೃಪ್ತಿ ದಿಮ್ರಿ ಸಿಕ್ತು ನಂ.1 ಪಟ್ಟ

'ಅನಿಮಲ್' ಸಿನಿಮಾ ತೆರೆಕಂಡ ಬಳಿಕ ಫೇಮಸ್ ಆದ ತೃಪ್ತಿ ದಿಮ್ರಿ ಅವರು ಈಗ ನಂಬರ್ ಒನ್ ಸ್ಥಾನಕ್ಕೆ ಏರಿದ್ದಾರೆ. 2024ರಲ್ಲಿ ಅವರಿಗೆ ಈ ಪರಿ ಜನಪ್ರಿಯತೆ ಸಿಕ್ಕಿದೆ. ಶಾರುಖ್ ಖಾನ್, ಆಲಿಯಾ ಭಟ್, ದೀಪಿಕಾ ಪಡುಕೋಣೆ, ಪ್ರಭಾಸ್ ಮುಂತಾದ ಸ್ಟಾರ್ ಕಲಾವಿದರನ್ನೂ ಮೀರಿಸಿ ತೃಪ್ತಿ ದಿಮ್ರಿ ಅವರು ಜನಪ್ರಿಯರಾಗಿದ್ದಾರೆ. ಆ ಬಗ್ಗೆ ಇಲ್ಲಿದೆ ಮಾಹಿತಿ. ಬಾಲಿವುಡ್ ನಟಿ ತೃಪ್ತಿ ದಿಮ್ರಿ ಅವರ ಜನಪ್ರಿಯತೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಅದಕ್ಕಾಗಿ ಅವರು 'ಅನಿಮಲ್' ಸಿನಿಮಾಗೆ ಧನ್ಯವಾದ ಹೇಳಲೇಬೇಕು. ಆ ಸಿನಿಮಾದಲ್ಲಿ ಅವರು ಬೋಲ್ಡ್ ಪಾತ್ರ ಮಾಡಿ ಸೈ ಎನಿಸಿಕೊಂಡರು. ಆ ಬಳಿಕ ಅವರಿಗೆ ಸಿಗುವ ಅವಕಾಶಗಳು ಕೂಡ ಜಾಸ್ತಿ ಆದವು. ತೃಪ್ತಿ ದಿಮ್ರಿ ಹವಾ ಎಷ್ಟರಮಟ್ಟಿಗೆ ಇದೆ ಎಂದರೆ, ಭಾರತದ ಜನಪ್ರಿಯ ಸೆಲೆಬ್ರಿಟಿಗಳ ಪಟ್ಟಿಯಲ್ಲಿ ಅವರು ನಂಬರ್ ಒನ್ ಸ್ಥಾನ ಪಡೆದಿದ್ದಾರೆ. ಬಾಲಿವುಡ್ ಹಾಗೂ ದಕ್ಷಿಣ ಭಾರತ ಚಿತ್ರರಂಗದ ಅನೇಕ ಘಟಾನುಘಟಿ ಸೆಲೆಬ್ರಿಟಿಗಳನ್ನು ಕೂಡ ತೃಪ್ತಿ ಹಿಂದಿಕ್ಕಿದ್ದಾರೆ. 2024ರ ವರ್ಷ ಮುಗಿಯುತ್ತಾ ಬಂದಿದೆ. ಈ ವರ್ಷ ಯಾವ ಸೆಲೆಬ್ರಿಟಿಗಳಿಗೆ ಹೆಚ್ಚು ಜನಪ್ರಿಯತೆ ಸಿಕ್ಕಿದೆ ಎಂಬ ಪಟ್ಟಿಯನ್ನು ಐಎಂಡಿಬಿ ಬಿಡುಗಡೆ ಮಾಡಿದೆ. ಐಎಂಡಿಬಿ ವೆಬ್‌ಸೈಟ್‌ಗೆ ವಿಶ್ವಾದ್ಯಂತ ಮನ್ನಣೆ ಇದೆ. ಸಿನಿಮಾ, ಸೀರಿಯಲ್, ವೆಬ್ ಸಿರೀಸ್, ಡಾಕ್ಯುಮೆಂಟರಿ ಹಾಗೂ ಸೆಲೆಬ್ರಿಟಿಗಳ ಬಗ್ಗೆ ಇದರಲ್ಲಿ ಮಾಹಿತಿ ಸಿಗುತ್ತದೆ.

ಮಾಜಿ ಪತಿ ಮದುವೆ ದಿನ ಸಮಂತಾ ಪೋಸ್ಟ್ ವೈರಲ್

ನಟಿ ಶೋಭಿತಾ ಜೊತೆ ನಾಗಚೈತನ್ಯ ಡಿ.4ರಂದು ದಾಂಪತ್ಯ ಜೀವನಕ್ಕೆ ಕಾಲಿಟ್ಟಿದ್ದಾರೆ. ಇದೀಗ ಮಾಜಿ ಪತಿ ನಾಗಚೈತನ್ಯ ಮದುವೆ ದಿನ ಸಮಂತಾ ಹಂಚಿಕೊಂಡ ಪೋಸ್ಟ್ ಸೋಶಿಯಲ್ ಮೀಡಿಯಾದಲ್ಲಿ ಭಾರೀ ಸದ್ದು ಮಾಡುತ್ತಿದೆ.

ಹುಡುಗಿಯಂತೆ ಹೋರಾಡಿ ಎಂದು ನಟಿ ಇನ್ಸ್ಟಾಗ್ರಾಂ ಸ್ಟೋರಿಯಲ್ಲಿ ಬರೆದುಕೊಂಡಿದ್ದಾರೆ. ಹಾಲಿವುಡ್ ತಾರೆ ವಯೋಲಾ ಡೇವಿಸ್ ಕಥೆಯ ಕುರಿತು ಪೋಸ್ಟ್ ಹಂಚಿಕೊಂಡಿದ್ದಾರೆ. ವೀಡಿಯೋದಲ್ಲಿ ಪುಟ್ಟ ಬಾಲಕ ಹಾಗೂ ಬಾಲಕಿಯ ನಡುವೆ ಫೈಟ್ ನಡೆಯುತ್ತಿದೆ. ಆತ್ಮವಿಶ್ವಾಸದ ಮನೋಭಾವದಿಂದ ಹುಡುಗ ಜಗಳ ಆರಂಭಿಸಿ ನಂತರ ಹುಡುಗಿಯ ಎದುರು ಸೋತು ಅಳಲು ಆರಂಭಿಸುತ್ತಾನೆ. ಈ ವಿಡಿಯೋ ಹಂಚಿಕೊಂಡಿರುವ ಸಮಂತಾ, 'ಹುಡುಗಿಯಂತೆ ಹೋರಾಡಿ' ಎಂದು ಬರೆದಿದ್ದಾರೆ. ಈ ಮೂಲಕ ನಿಗೂಢ ಸಂದೇಶ ಬರೆದುಕೊಂಡಿದ್ದಾರೆ. ಅಂದಹಾಗೆ, ಸಮಂತಾ ಜೊತೆ 2017ರಲ್ಲಿ ನಾಗಚೈತನ್ಯ ಮದುವೆಯಾಗಿದ್ದರು. ಕೆಲ ಮನಸ್ತಾಪಗಳಿಂದ ಇಬ್ಬರೂ ಡಿವೋರ್ಸ್ ಪಡೆದುಕೊಳ್ಳುವುದಾಗಿ 2021ರಲ್ಲಿ ಅನೌನ್ಸ್ ಮಾಡಿದರು. ಡಿ.4ರಂದು ಶೋಭಿತಾ ಜೊತೆ ನಟ 2ನೇ ಮದುವೆ ಆಗಿದ್ದಾರೆ.



ತಂಡದಿಂದ ಹೊರಗಿಟ್ಟ ನಿರ್ಧಾರ ಸರಿಯಾಗಿತ್ತು

ಪರ್ತ್‌ನಲ್ಲಿ ನಡೆದ ಭಾರತ-ಆಸ್ಟ್ರೇಲಿಯಾ ನಡುವಿನ ಮೊದಲ ಟೆಸ್ಟ್ ಪಂದ್ಯದಲ್ಲಿ ರವೀಂದ್ರ ಜಡೇಜಾ ಮತ್ತು ರವಿಚಂದ್ರನ್ ಅಶ್ವಿನ್ ಅವರನ್ನು ಆಡುವ ತಂಡದಿಂದ ಹೊರಗಿಡುವ ಬಗ್ಗೆ ರೋಹಿತ್ ಶರ್ಮಾ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇದು ತಂಡದ ಹಿತದೃಷ್ಟಿಯಿಂದ ಸರಿಯಾದ ನಿರ್ಧಾರವಾಗಿತ್ತು ಎಂದು ಅವರು ಹೇಳಿದ್ದಾರೆ. ಮೊದಲ ಪಂದ್ಯದಲ್ಲಿ ಅದ್ಭುತ ಪ್ರದರ್ಶನ ನೀಡಿದ ವಾಷಿಂಗ್ಟನ್ ಸುಂದರ್ ಅವರನ್ನು ರೋಹಿತ್ ಶ್ಲಾಘಿಸಿದ್ದಾರೆ.

ಭಾರತ ಮತ್ತು ಆಸ್ಟ್ರೇಲಿಯಾ ನಡುವಿನ ಬಾರ್ಡರ್-ಗವಾಸ್ಕರ್ ಟ್ರೋಫಿಯ ಎರಡನೇ ಟೆಸ್ಟ್ ಪಂದ್ಯ ಡಿಸೆಂಬರ್ 6 ರಿಂದ ಅಡಿಲೇಡ್ ಓವಲ್ ಮೈದಾನದಲ್ಲಿ ನಡೆಯಲಿದೆ. ಈ ಪಂದ್ಯದಲ್ಲಿ ಟೀಂ ಇಂಡಿಯಾದ ಕಮಾಂಡ್ ರೋಹಿತ್ ಶರ್ಮಾ ಕೈಯಲ್ಲಿರಲಿದೆ. ರೋಹಿತ್ ಈ ಸರಣಿಯ ಮೊದಲ ಪಂದ್ಯದಲ್ಲಿ ಆಡಿರಲಿಲ್ಲ. ಆದರೀಗ ಎರಡನೇ ಟೆಸ್ಟ್‌ಗೆ ರೋಹಿತ್ ತಂಡವನ್ನು ಸೇರಿಕೊಂಡಿದ್ದು, ಇಂಜುರಿಯಿಂದ ಮೊದಲ ಟೆಸ್ಟ್‌ಗೆ ಅಲಭ್ಯರಾಗಿದ್ದ ಶುಭ್‌ಮನ್ ಗಿಲ್ ಕೂಡ ಎರಡನೇ ಟೆಸ್ಟ್‌ಗೆ ಲಭ್ಯರಾಗಿದ್ದಾರೆ. ಹೀಗಾಗಿ ಈ ಇಬ್ಬರ ವಾಪಸ್ಸಾತಿಯ ಬಳಿಕ ತಂಡದಲ್ಲಿ ಕೆಲ ಬದಲಾವಣೆಗಳು ಆಗುವುದು ನಿಶ್ಚಿತ. ಆದರೆ ಅದಕ್ಕೂ ಮುನ್ನ ಅಡಿಲೇಡ್ ಟೆಸ್ಟ್‌ಗೆ ಒಂದು ದಿನ ಮೊದಲು ರೋಹಿತ್ ಸುದ್ದಿಗೋಷ್ಠಿ ನಡೆಸಿದ್ದು, ಈ ವೇಳೆ ಅವರು ರವೀಂದ್ರ ಜಡೇಜಾ ಮತ್ತು ರವಿಚಂದ್ರನ್ ಅಶ್ವಿನ್ ಬಗ್ಗೆ ದೊಡ್ಡ ಹೇಳಿಕೆ ನೀಡಿದ್ದಾರೆ.

ವಾಸ್ತವವಾಗಿ ಭಾರತ ಹಾಗೂ ಆಸೀಸ್ ನಡುವೆ ನಡೆದ ಮೊದಲ ಪರ್ತ್ ಟೆಸ್ಟ್‌ನಲ್ಲಿ ಭಾರತ ತಂಡದ ಮ್ಯಾನೇಜ್‌ಮೆಂಟ್ ಮಹತ್ವದ ನಿರ್ಧಾರ ತೆಗೆದುಕೊಂಡಿದ್ದು, ರವೀಂದ್ರ ಜಡೇಜಾ-ರವಿಚಂದ್ರನ್ ಅಶ್ವಿನ್ ಅವರನ್ನು ಆಡುವ ಹನ್ನೊಂದರ ಬಳಗದಿಂದ ಕೈಬಿಟ್ಟಿತ್ತು. ಇದರ ಜೊತೆಗೆ ಹರ್ಷಿತ್ ರಾಣಾ ಮತ್ತು ನಿತೀಶ್ ರೆಡ್ಡಿಗೆ ಪದಾರ್ಪಣೆ ಮಾಡಲು ಅವಕಾಶ ನೀಡಿತ್ತು. ಮ್ಯಾನೇಜ್‌ಮೆಂಟ್‌ನ ಈ ನಿರ್ಧಾರ ಸರಿ ಎಂದು ಸಾಬೀತಾಗಿದ್ದು, ತಂಡವೂ ಪಂದ್ಯವನ್ನು ಗೆದ್ದುಕೊಂಡಿತು. ಇದೀಗ ಮ್ಯಾನೇಜ್‌ಮೆಂಟ್‌ನ ಈ ನಿರ್ಧಾರದ ಬಗ್ಗೆ ಮಾತನಾಡಿರುವ ರೋಹಿತ್ ಶರ್ಮಾ, ಮ್ಯಾನೇಜ್‌ಮೆಂಟ್‌ನ ಈ ನಿರ್ಧಾರವನ್ನು ಬೆಂಬಲಿಸಿದ್ದು, ಇದು ಸರಿಯಾದ ನಿರ್ಧಾರವಾಗಿತ್ತು ಎಂದಿದ್ದಾರೆ.

ಸುಂದರ್ ಹೊಗಳಿದ ರೋಹಿತ್

ಎರಡನೇ ಟೆಸ್ಟ್‌ಗೂ ಮುನ್ನ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ರೋಹಿತ್, 'ದುರದೃಷ್ಟವಶಾತ್ ಜಡೇಜಾ ಹಾಗೂ ಅಶ್ವಿನ್ ಮೊದಲ ಪಂದ್ಯ ಆಡುತ್ತಿಲ್ಲ ಎಂಬ ಸುದ್ದಿ ನೀಡಲು ನಾನು ಅಲ್ಲಿ ಇರಲಿಲ್ಲ. ಜಡೇಜಾ ಮತ್ತು ಅಶ್ವಿನ್ ಅವರಂತಹ ಅನುಭವಿ ಆಟಗಾರರನ್ನು ಹೊರಗಿಡುವುದು ಯಾವಾಗಲೂ ಕಷ್ಟ, ಅದು ಎಂದಿಗೂ ಸುಲಭವಲ್ಲ. ಆದರೆ ಆ ಸಮಯದಲ್ಲಿ ತಂಡಕ್ಕೆ ಯಾವುದು ಉತ್ತಮ ಎಂಬುದನ್ನು ಗಮನದಲ್ಲಿಟ್ಟುಕೊಂಡು ಮ್ಯಾನೇಜ್‌ಮೆಂಟ್ ಈ ನಿರ್ಧಾರವನ್ನು ತೆಗೆದುಕೊಂಡಿದೆ. ಆದರೆ ಸರಣಿಯ ಉಳಿದ ಪಂದ್ಯಗಳಲ್ಲಿ ಅವರು ಪ್ರಮುಖ ಪಾತ್ರ ವಹಿಸುತ್ತಾರೆ ಎಂದು ನಾನು ಭಾವಿಸುತ್ತೇನೆ ಎಂದು ರೋಹಿತ್ ಹೇಳಿದ್ದಾರೆ. ಇನ್ನು ಮೊದಲ ಟೆಸ್ಟ್‌ನಲ್ಲಿ ತಂಡದ ಪರ ಗಮನಾರ್ಹ ಪ್ರದರ್ಶನ ನೀಡಿದ ವಾಷಿಂಗ್ಟನ್ ಸುಂದರ್ ಅವರನ್ನು ಹೊಗಳಿದ ರೋಹಿತ್ ಶರ್ಮಾ, 'ವಾಷಿಂಗ್ಟನ್‌ಗೆ ಸರಣಿಯ ಮೊದಲ ಪಂದ್ಯದಲ್ಲಿ ಆಡುವ ಅವಕಾಶ ಸಿಕ್ಕಿದ್ದು, ಈ ಅವಕಾಶವನ್ನು ಬಳಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಅವರು ಉತ್ತಮ ಆಲ್ ರೌಂಡರ್. ಚೆಂಡು ಮತ್ತು ಬ್ಯಾಟಿಂಗ್‌ನಲ್ಲಿ ಅವರು ಏನು ಮಾಡಬಹುದು ಎಂಬುದನ್ನು ನಾವು ನೋಡಿದ್ದೇವೆ. ಅವರು ವಿಶ್ವದ ಎಲ್ಲಿಯಾದರೂ ಆಡುವ ತಂತ್ರವನ್ನು ಹೊಂದಿದ್ದಾರೆ. ಅವರಂತಹ ಆಟಗಾರ ಯಾವಾಗಲೂ ನಮ್ಮ ತಂಡಕ್ಕೆ ಮುಖ್ಯವಾಗಿದೆ ಎಂದಿದ್ದಾರೆ.

ಫಾರ್ಮ್‌ಗೆ ಮರಳಿದ ಭುವನೇಶ್ವರ್ ಕುಮಾರ್

ಭುವನೇಶ್ವರ್ ಕುಮಾರ್, ಸಯ್ಯದ್ ಮುಷ್ತಾಕ್ ಅಲಿ ಟ್ರೋಫಿಯಲ್ಲಿ ಜಾರ್ಖಂಡ್ ವಿರುದ್ಧ ಹ್ಯಾಟ್ರಿಕ್ ವಿಕೆಟ್ ಪಡೆದು ಸಂಚಲನ ಮೂಡಿಸಿದ್ದಾರೆ. ಇದು ಅವರ ಟಿ20 ಕ್ರಿಕೆಟ್‌ನ ಮೊದಲ ಹ್ಯಾಟ್ರಿಕ್. ಈ ಸಾಧನೆಯು ಆರ್‌ಸಿಬಿ ಅಭಿಮಾನಿಗಳ ಉತ್ಸಾಹ ಹೆಚ್ಚಿಸಿದ್ದು, ಭುವಿ ಟೀಂ ಇಂಡಿಯಾಗೆ ಮರಳುವ ಸಾಧ್ಯತೆಗಳನ್ನೂ ಹೆಚ್ಚಿಸಿದೆ. ಇದು ಟಿ20 ಕ್ರಿಕೆಟ್‌ನಲ್ಲಿ ಭುವಿಯ ಮೊದಲ ಹ್ಯಾಟ್ರಿಕ್ ಆಗಿದೆ. ಈ ಹ್ಯಾಟ್ರಿಕ್‌ನೊಂದಿಗೆ, ಭುವನೇಶ್ವರ್ ಕುಮಾರ್ ಮತ್ತೊಮ್ಮೆ ಟೀಂ ಇಂಡಿಯಾಗೆ ಮರಳುವ ಸಿಗ್ನಲ್ ನೀಡಿರುವುದರ ಜೊತೆಗೆ ಆರ್‌ಸಿಬಿ ಅಭಿಮಾನಿಗಳ ಕಪ್ ಬಯಕೆಗೆ ಮತ್ತಷ್ಟು ಬಲ ತುಂಬಿದ್ದಾರೆ. ಸೈಯದ್ ಮುಷ್ತಾಕ್ ಅಲಿ ಟ್ರೋಫಿಯಲ್ಲಿ ಉತ್ತರ ಪ್ರದೇಶದ ಪರ ಆಡುತ್ತಿರುವ ಭುವನೇಶ್ವರ್ ಕುಮಾರ್ ಅವರು ಜಾರ್ಖಂಡ್ ವಿರುದ್ಧದ ಪಂದ್ಯದಲ್ಲಿ ಹ್ಯಾಟ್ರಿಕ್ ವಿಕೆಟ್ ಪಡೆದಿದ್ದಾರೆ. 17ನೇ ಓವರ್‌ನಲ್ಲಿ ಭುವನೇಶ್ವರ್ ಕುಮಾರ್ ಈ ಸಾಧನೆ ಮಾಡಿದರು. ಭುವನೇಶ್ವ